UASB
Library

Monthly Magazine Clipping Service

Vol. 01 (May) 2026

www.uasbagrilibindia.org

080 23636234

librarianuasb@gmail.com

ಸಮಗ್ರ ಕುಟುಂಬಕ್ಕೆ ಸಮೃದ್ಧ ಸಾಪ್ತಾಹಿಕ * ಮೇ 7, 2026 ₹25

ತರಂಗ



ಪಿಯುಸಿ ಎಂಬ ತಿರುವು

ಭಾಗ 2

ಯಾವ್ಯಾವ ವೃತ್ತಿ ಏನೇನು ಅವಕಾಶ?

UASB LIBRARY



ಸಾಣೆಕಟ್ಟಾ ಉಪ್ಪಿನ ರುಚಿ ಬಲ್ಲವರೇ ಬಲ್ಲರು!





ಸಾಣೆಕಟ್ಟಾ ಉಪ್ಪಿನ ರುಚಿ ಬಲ್ಲವರೇ ಬಲ್ಲರು!

ಇಲ್ಲಿಯ ಉಪ್ಪಿನ ಆಗರದ ವಿನ್ಯಾಸವನ್ನು ರೂಪಿಸಿದವರು ನಿವೃತ್ತ ಅಧಿಕಾರಿ, ಸಂಶೋಧಕ ವಿ.ಪಿ. ಚೌಧರಿ ಅವರು.

ಕರ್ನಾಟಕದ ಪ್ರಸಿದ್ಧ ತೀರ್ಥಕ್ಷೇತ್ರ ಉತ್ತರಕನ್ನಡ ಜಿಲ್ಲೆಯ ಗೋಕರ್ಣಕ್ಕೆ ಹೋಗುವ ಮಾರ್ಗದಲ್ಲಿ, ಕುಮಟಾ ತಾಲೂಕಿನ ಸಾಣೆಕಟ್ಟಾ ಗ್ರಾಮದಲ್ಲಿ ಬಿಳಿ ಮರುಭೂಮಿಯಂತೆ ಹೊಳೆಯುವ ಗದ್ದೆಗಳನ್ನು ಗಮನಿಸಿದ್ದೀರಾ? ಇವು ನೈಸರ್ಗಿಕವಾಗಿ ಉತ್ಪತ್ತಿಯಾಗುವ ಅರ್ಥಾತ್ ರಾಸಾಯನಿಕ ಮುಕ್ತವಾಗಿರುವ ವನಸ್ಪತಿಯ ಸತ್ತ್ವ ಹಾಗೂ ಖನಿಜಾಂಶಗಳಿಂದ ತುಂಬಿರುವ ಕಂದು ಮಿಶ್ರಿತ ಗುಲಾಬಿ ವರ್ಣದ ವಿಶಿಷ್ಟ ರುಚಿಯ ಆರೋಗ್ಯಕರವೆನಿಸಿದ 'ಸಾಣೆಕಟ್ಟಾ' ಉಪ್ಪಿನ ಆಗರಗಳು. ಅರಬ್ಬೀಸಮುದ್ರದ ಹಿನ್ನೀರು ಪ್ರದೇಶದಲ್ಲಿ ಅಘನಾಶಿನಿ ನದಿಯ ನೀರಿನ ಸಮ್ಮಿಲನದೊಂದಿಗೆ ಯಂತ್ರಗಳ ನೆರವಿಲ್ಲದೆ ಸ್ಥಳೀಯ ಜನರ ಪರಿಶ್ರಮದಿಂದಲೆ ಸೂರ್ಯನ ಬಿರು ಬಿಸಿಲು ಮತ್ತು ಗಾಳಿಯನ್ನೆ ಉತ್ಪಾದಕ ಶಕ್ತಿಯಾಗಿಸಿ ಸಿದ್ಧಪಡಿಸುವ ದೇಶದ ಏಕೈಕ ನೈಸರ್ಗಿಕ ಉಪ್ಪಿನ 'ಕಾರ್ಖಾನೆ' ಇದು. 300 ವರ್ಷಗಳ ಇತಿಹಾಸವಿರುವ ಈ ಪಾರಂಪರಿಕ ಉಪ್ಪು ತಯಾರಿಕಾ ಕೇಂದ್ರದ ಸಾರಥ್ಯವನ್ನು ಯಶಸ್ವಿಯಾಗಿ ನಿರ್ವಹಿಸುತ್ತಿರುವ ಇಲ್ಲಿನ 'ನಾಗರಬೈಲ್ ಉಪ್ಪಿನ ಮಾಲೀಕರ ಸಂಸ್ಥೆ' ಯೊಂದಿಗೆ ಈ ಪ್ರದೇಶದ ಮಠಗಳು, ದೇವರುಗಳು ಕೂಡಾ ಸಾಣೆಕಟ್ಟಾ ಉಪ್ಪಿನ ಪಾಲುದಾರರು ಎಂದರೆ ಸೋಜಿಗವಲ್ಲವೆ?'ಕೃಷಿ ಪ್ರವಾಸೋದ್ಯಮ' ಕ್ಕೆ ಮಾದರಿಯಾಗಬಲ್ಲ ಅದ್ಭುತ ಹಿನ್ನೆಲೆಯಿರುವ ಸಾಣೆಕಟ್ಟಾ ಉಪ್ಪಿನ ತಯಾರಿಯ ಸ್ವಾರಸ್ಯಕರ ಕಥನವಿದು.

❑ ರಾಘವೇಂದ್ರ ಬೆಟ್ಟಕೊಪ್ಪ

ಚಿತ್ರಗಳು: ● ಷಣ್ಮುಖ ಕವಲಕ್ಕಿ

'ಉ'ಪ್ಪಿಗಿಂತ ಬೇರೆ ರುಚಿಯಿಲ್ಲ' ಎನ್ನುತ್ತಾರೆ. ಆದರೆ, ಕುಮಟಾ ತಾಲೂಕಿನ ಗೋಕರ್ಣ ಸಮೀಪದ ಸಾಣೆಕಟ್ಟಾದ ಉಪ್ಪಿನ ಕಥೆಯೇ ಬೇರೆ. ಇಲ್ಲಿ ತಯಾರಾಗುವ ಉಪ್ಪು ಬೇರೆಡೆಗಳಲ್ಲಿ ಉತ್ಪತ್ತಿಯಾಗುವ ಉಪ್ಪಿಗಿಂತಲೂ ಅತ್ಯಂತ ರುಚಿಕರ, ಹಿತಕರ ಹಾಗೂ ಆರೋಗ್ಯಕರ. ಯಾಕೆಂದರೆ, ಈ ಉಪ್ಪು ತಯಾರಾಗುವುದೇ ನೈಸರ್ಗಿಕವಾಗಿ.

ಸಾಣೆಕಟ್ಟಾ ಉಪ್ಪಿನ ಕಥೆ

ಸಾಣೆಕಟ್ಟಾ ಉಪ್ಪಿನ ಆಗರಕ್ಕೆ ಮೂರು ಶತಮಾನಗಳ ಸುದೀರ್ಘ ಇತಿಹಾಸವಿದೆ. 1720ರ ವೇಳೆಗೆ ಅರಬ್ಬೀ ಸಮುದ್ರದ ಹಿನ್ನೀರು ಮತ್ತು ಅಘನಾಶಿನಿ ನದಿಯ ಅಳಿವೆ ಬಳಸಿಕೊಂಡು ಇಲ್ಲಿ ಉಪ್ಪಿನ ತಯಾರಿಕೆ ಪ್ರಾರಂಭವಾಯಿತು. 1750ರ ತನಕ ಕೇವಲ 50 ಎಕರೆ ಪ್ರದೇಶದಲ್ಲಿ ಸುತ್ತಲಿನ ಹಳ್ಳಿಗಳ (ಇಂದಿನ ಕದಮೆ, ಗೋನಹಳ್ಳಿಯ ಉತ್ತರ ಭಾಗದಲ್ಲಿ) ಮನೆ ಬಳಕೆಗಾಗಿ ಮಾತ್ರ ಈ ಉಪ್ಪನ್ನು ಉತ್ಪಾದಿಸುತ್ತಿದ್ದರು.

1775ರಲ್ಲಿ, ತಾಂತ್ರಿಕ ಪರಿಣತರೆನಿಸಿದ ಈ ಭಾಗದ ಹಿರಿಯ ಧುರೀಣ ಸಾಣು ನಾಯ್ಕ ಎಂಬವರ ನೇತೃತ್ವದಲ್ಲಿ ಸಮುದ್ರದ ಹಿನ್ನೀರು ಅಘನಾಶಿನಿ ಅಳಿವೆಯ ಮೂಲಕ ಒಳ ನುಗ್ಗುವ ಕೊಲ್ಲಿಗೆ ಒಂದು ಒಡ್ಡನ್ನು ಕಟ್ಟಲಾಯಿತು. ಈ ಒಡ್ಡು ಎರಡು ಗುಡ್ಡಗಳನ್ನು ಜೋಡಿಸಿ ತೊರ್ಕೆ ಹಾಗೂ ಗೋಕರ್ಣದಿಂದ ತದಡಿಗೆ ಹೋಗುವ ಮಾರ್ಗಗಳನ್ನು ಸೇರಿಸಿತು. ಮುಂದೆ ಇದೇ ಸಾಣೆಕಟ್ಟಾ-ಹೆಬ್ಬಳ ರಸ್ತೆಯಾಗಿ ಅಭಿವೃದ್ಧಿಯಾಯಿತು. ಅಂದು ಸಾಣು ನಾಯ್ಕರ ಮಾರ್ಗದರ್ಶನ ಮತ್ತು ಮೇಲ್ವಿಚಾರಣೆಯಲ್ಲಿ ನಿರ್ಮಿಸಿದ ದೂರದೃಷ್ಟಿಯ ಈ ಒಡ್ಡಿನಿಂದಾಗಿ ಈ ಪ್ರದೇಶ 'ಸಾಣೆಕಟ್ಟಾ' ಎಂದು ಖ್ಯಾತಿಪಡೆಯಿತು. ಈ ಒಡ್ಡು ಕಟ್ಟಿದ್ದರಿಂದಾಗಿ ಸುಮಾರು 400 ಎಕರೆಯಷ್ಟು ವಿಶಾಲವಾದ ಭೂಮಿ ಉಪ್ಪಿನ ತಯಾರಿಕೆಗೆ ಲಭ್ಯವಾಗಿ ಉತ್ಪಾದನೆಯೂ ಗಣನೀಯವಾಗಿ ಹೆಚ್ಚಾಯಿತು ಎನ್ನುವುದು ವಿಶೇಷ. (ಆದರೆ ರಾಜಕೀಯ ಅನಿಶ್ಚಿತತೆ, ಆರ್ಥಿಕ ಹಿನ್ನಡೆ, ಬೇಡಿಕೆಯ ಕೊರತೆ

UASB LIBRARY





ಸೋಜಿಗದ ಅಳತೆ... ತೂಕ ಮಾತ್ರ ಪಕ್ಕಾ!

ನಿತ್ಯವೂ ಸಾವಿರಾರು ಉಪ್ಪಿನ ಪ್ಯಾಕೆಟ್‌ಗಳನ್ನು ಇಲ್ಲಿ ಮಹಿಳೆಯರೇ ಸಿದ್ಧ ಪಡಿಸುತ್ತಾರೆ. ಉಪ್ಪಿನ ರಾಶಿಯಿಂದ ಬುಟ್ಟಿಗೆ ತುಂಬಿ ಅಯೋಡಿನ್ ಸೇರಿಸಿ ತಲಾ ಒಂದು ಕೆ.ಜಿ. ಪ್ಯಾಕೆಟ್‌ಗಳಿಗೆ ತೂಕ ನೋಡದೇ ಉಪ್ಪು ತುಂಬುವ ಇವರ ಕೈಚಳಕದ ಚಾಕಚಕ್ಯತೆ ಎಷ್ಟಿದೆ ಎಂದರೆ, ಈ ಪ್ಯಾಕೆಟ್‌ಗಳನ್ನು ತೂಕ ಮಾಡಿದಾಗ ಉಪ್ಪು 50 ಗ್ರಾಂ ಹೆಚ್ಚೇ ಇರುತ್ತದೆ!

'ದಮಡಿ ಚೌಕಿ'

ಬ್ರಿಟಿಷ್ ಆಳ್ವಿಕೆಯಲ್ಲಿ ಸಾಣಿಕಟ್ಟಾ ಉಪ್ಪನ್ನು ಆಳವೆ ಮೂಲಕ ದೋಣಿಯಲ್ಲಿ ತಂದಾಗ ಆಳವೆಯ 'ದಮಡಿ ಚೌಕಿ'ಯಲ್ಲಿ ಬ್ರಿಟಿಷರಿಗೆ ಒಂದು ಟೀಲ ಉಪ್ಪಿಗೆ ಒಂದು ದಮಡಿ ಹಣ ಪಾವತಿಸಬೇಕಿತ್ತು. ಇದಕ್ಕೆ ಸ್ಥಳೀಯ ಅನೇಕ ಉಪ್ಪು ಬೆಳೆಗಾರರ ವಿರೋಧವಿತ್ತು. ಉಪ್ಪಿನ ಕರ ಪಾವತಿಸದೆ ಹೋದರೆ ಅಥವಾ ಕರ ತಪ್ಪಿಸಿ ಮಾರಾಟ ಮಾಡಿದರೆ ಬ್ರಿಟಿಷರು ಜೈಲಿಗೆ ಹಾಕುತ್ತಿದ್ದರು. ಈಗಲೂ ಇರುವ ಈ ಜೈಲಿನ ಕಟ್ಟಡ ಸಣ್ಣ ಹಾಗೂ ಗೃಹ ಕೈಗಾರಿಕೆ ಇಲಾಖೆಯ ಕಚೇರಿಯಾಗಿದೆ. ದಮಡಿ ಚೌಕಿಯ ಕುರುಹುಗಳೂ ಕಾಣಸುತ್ತವೆ.



24ವರ್ಷಗಳ ಹಿಂದೆ ಸ್ಥಾಪನೆಗೊಂಡ ನಾಗರಬೈಲ್ ಉಪ್ಪಿನ ಮಾಲೀಕರ ಸಹಕಾರಿ ಸಂಘ



ಹಿಂಗಿತ್ತು ಬ್ರಿಟಿಷರ ಕಾಲದ ಜೈಲು.

UASB LIBRARY



ಉಪ್ಪಿನ ಗದ್ದೆಗಳಲ್ಲಿ ಪತಿ ಉಪ್ಪಿನ ಹರಳನ್ನು ಕೋಲಿಗೆ ಕಟ್ಟಿನ ಹಲಗೆಯಿಂದ ಎಳೆಯುತ್ತಿದ್ದರೆ ಪತ್ನಿ ಅದನ್ನು ದಂಡೆಯ ಮೇಲೆ ರಾಶಿ ಹಾಕುತ್ತಾಳೆ.



ಬಿರುಬಿಸಿಲು- ಗಾಳಿಗೆ ನೀರು ಬಾಷ್ಪೀಭವನಗೊಂಡು ಸೃಷ್ಟಿಯಾದ ಸ್ಫಟಿಕ ರೂಪದ ಉಪ್ಪು.

ಉಪ್ಪು...ದಿನಸಿ ವಸ್ತು!

ಅಂಕೋಲಾದಿಂದ ಭಟ್ಕಳ ತನಕ ಬಿದನೂರು ರಾಜಾಳ್ವಿಕೆ (ಕೆಳದಿ ನಾಯಕರ ಕೊನೆಯ ಅವಧಿ) ಇದ್ದ ಕಾಲದಲ್ಲಿ 1769ರ ತನಕವೂ ಉಪ್ಪನ್ನು 'ದಿನಸಿ ವಸ್ತು' ಎಂದೇ ಪರಿಗಣಿಸಲಾಗುತ್ತಿತ್ತು. ಆದರೆ ಆನಂತರ ಬಂದ ಮೈಸೂರಿನ ಸುಲ್ತಾನರಾದ ಹೈದರಾಲಿ, ಟಿಪ್ಪು ಸುಲ್ತಾನ್ ಈ ಉಪ್ಪಿಗೆ ಕರ ವಿಧಿಸಿದ್ದರಂತೆ. ಬಳಿಕ ಆಳ್ವಿಕೆ ಮಾಡಿದ ಬ್ರಿಟಿಷರು ಮಾತ್ರ ಉಪ್ಪನ್ನೂ ಆದಾಯದ ಮೂಲವಾಗಿಸಿಕೊಂಡರು. 1930ರಲ್ಲಿ ಮಹಾತ್ಮಾ ಗಾಂಧೀಜಿಯವರ ಕರೆಗೆ ಓಗೊಟ್ಟು ಕರ್ನಾಟಕದ 'ಸೀಬರ್ಡ್' ಖ್ಯಾತಿಯ ಅಂಕೋಲಾದಲ್ಲಿ ಉಪ್ಪಿನ ಕರ ನಿರಾಕರಣೆಯ ಸತ್ಯಾಗ್ರಹ ನಡೆದಾಗ, ಸಾಣಿಕಟ್ಟಾದ ಉಪ್ಪಿನ ಆಗರಗಳು ಕೂಡ ಆ ಚಳವಳಿಯ ಬಿಸಿ ಅನುಭವಿಸಿದ್ದವು. ಬ್ರಿಟಿಷರ ಉಪ್ಪಿನ ಕಾನೂನು ಮುರಿಯಲು ಇಲ್ಲಿನ ಸ್ಥಳೀಯರು ತೋರಿದ ಧೈರ್ಯ ಇತಿಹಾಸದ ಪುಟ ಸೇರಿದೆ. ಸ್ವಾತಂತ್ರ್ಯದ ಬಳಿಕ ಈ ಉಪ್ಪಿಗೂ ಕರದಿಂದ ಮುಕ್ತಿ ಸಿಕ್ಕಿತು!



ಸಾಣಿಕಟ್ಟಾ ಉಪ್ಪಿನ ಪರಂಪರೆ, ವಿಶಿಷ್ಟತೆ, ತಯಾರಿಕಾ ಪದ್ಧತಿ ಮತ್ತು ಭೌಗೋಳಿಕ ಹಿನ್ನೆಲೆಯನ್ನು ಪರಿಗಣಿಸಿ ಇದಕ್ಕೆ 'ಭೌಗೋಳಿಕ ಸೂಚಿ' (ಜಿಯಾಗ್ರಾಫಿಕಲ್ ಇಂಡಿಕೇಶನ್-GI)ಯ ಮಾನ್ಯತೆ ದೊರೆತರೆ ಕಂದು - ಗುಲಾಬಿ ವರ್ಣದ ಈ ಕಲ್ಲುಪ್ಪು ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕರಾವಳಿಯ ವಿಶಿಷ್ಟ ಬ್ರ್ಯಾಂಡ್ ಆಗಿ ಗುರುತಾಗಲಿದೆ.

ಇನ್ನಿತರ ಕಾರಣಗಳಿಂದ 1807ರ ತನಕವೂ ಉಪ್ಪಿನ ಕ್ಷೇತ್ರವನ್ನು ಏನ್ತರಸುವ ಸಾಣು ನಾಯ್ಕರ ಕನಸು ಮಾತ್ರ ಈಡೇರಲಿಲ್ಲ.) ಉಪ್ಪು ತಯಾರಾಗುವ ಈ ಸ್ಥಳವನ್ನು ಮೊದಲು 'ಹನ್ನೇ ಬಯಲು' ಎಂದು ಕರೆಯುತ್ತಿದ್ದರು. 1863ರ ಬಳಿಕ ಈ ಪ್ರದೇಶಕ್ಕೆ 'ನಾಗರಬಯಲು' ಎಂದು ಹೆಸರು ಬಂತು.

ಬೇರೆಡೆ ಬೋರ್ ನೀರನ್ನು ಬಳಸಿ, ಕೃತಕವಾಗಿ ಉಪ್ಪನ್ನು ತಯಾರಿಸುತ್ತಾರೆ. ಆದರೆ, ಸಾಣಿಕಟ್ಟಾ ಉಪ್ಪು ಮಾತ್ರ ನೈಸರ್ಗಿಕವಾಗಿ ತಯಾರಾಗುವ ಘಟಕ. ಇಲ್ಲಿನ ಉಪ್ಪು ಉತ್ತರ ಕನ್ನಡ, ಹಾವೇರಿ, ಬೆಳಗಾವಿ, ಧಾರವಾಡ, ಶಿವಮೊಗ್ಗ ಜಿಲ್ಲೆಗಳಿಗೆ ಒಂದೊಂದು ಕಿಲೋ ಪ್ಯಾಕ್‌ನಂತೆ ಐವತ್ತು ಕಿಲೋ ತೂಕದ ಚೀಲಗಳ ಮೂಲಕ ರವಾನೆ ಆಗುತ್ತದೆ. ಸದ್ಯ ಈ ಉಪ್ಪಿಗೆ ಕಿಲೋಗೆ ಇಪ್ಪತ್ತು ರೂಪಾಯಿ ಬೆಲೆ ಇದೆ.

ಉಪ್ಪಿನ ಮಾಲೀಕರ ಸಂಘ 'ನಾಗರಬೈಲ್ ಸೊಸೈಟಿ'

ತೊರ್ಕೆ, ಬಿದ್ರಗೇರಿ, ನಾಗರಬೈಲು, ಕಡಮೆ, ಗೊನೆಹಳ್ಳಿ-ಈ ಐದು ಗ್ರಾಮಗಳ ಉಪ್ಪಿನ ಸಾಗುವಳಿ ಮಾಡುವ ಭೂಮಾಲೀಕರು ಸೇರಿ ಹುಟ್ಟುಹಾಕಿದ ಸಹಕಾರಿ ಸಂಸ್ಥೆಯೇ 'ದ ನಾಗರಬೈಲ್ ಸಾಲ್ಟ್ ಓನರ್ಸ್ ಕೋ-ಆಪರೇಟಿವ್ ಸೊಸೈಟಿ'.

ತನ್ನ ಅಪೂರ್ವ ಕಾರ್ಯವೈಖರಿಯಿಂದ ಉಪ್ಪು ಉತ್ಪಾದನೆಯ ಆನನ್ಯ ಪರಂಪರೆಯನ್ನು ಉಳಿಸಿಕೊಂಡು ಬಂದಿರುವ ಕರ್ನಾಟಕದ ಏಕೈಕ ಸಂಸ್ಥೆ ಇದು.



ಇಲ್ಲಿ ದೇವರುಗಳು ಸದಸ್ಯರೂ ಹೌದು ಪಾಲುದಾರರೂ ಹೌದು!

ಸಾಣಿಕಟ್ಟಾ ಗ್ರಾಮವೆಂದರೆ ಚಿತ್ರಾಪುರ, ಕವಳೆ, ಪರ್ತಗಾಳಿ ಮಠಗಳು, ಗೋಕರ್ಣ ಮಹಾಬಲೇಶ್ವರ, ಇಲ್ಲಿನ ಕಾಶಿ ವಿಶ್ವೇಶ್ವರ, ಬಂಕಿಕೊಡ್ಲಿನ ಬಂಕನಾಥೇಶ್ವರ, ಸೀತಾರಾಮೇಶ್ವರ ದೇವರೂ ಈ ಸೊಸೈಟಿಯ ಸದಸ್ಯರೇ! ಈ ದೇವರುಗಳಿಗೆಲ್ಲ ಉಪ್ಪಿನ ಹಾಲಿನ ಲಾಭಾಂಶ ಸಲ್ಲುತ್ತದೆ. ಗೋಕರ್ಣ ಮಹಾಬಲೇಶ್ವರನ ಅನ್ನಪ್ರಸಾದಕ್ಕೆ ಸೇವಾರೂಪದಲ್ಲಿ ಸಲ್ಲಿಕೆಯಾಗುವುದು ಕೂಡ ಸಾಣಿಕಟ್ಟಾ ಉಪ್ಪೇ.

ಇಲ್ಲಿನ ನಾಡಕರ್ಣಿ, ಕುಲಕರ್ಣಿ ಬಲವಳ್ಳಿ, ಕಾಯ್ಕಿಣಿ, ಮುಡೇಶ್ವರ, ಮಾಸುರ್‌ಕರ್, ಶಾನಭಾಗ, ಪ್ರಭು, ಪೈ, ನಾಯಕ ಶೆಟ್ಟಿ, ನಾಡೋರ ಕುಟುಂಬಗಳು ಸೊಸೈಟಿಗೆ ತಮ್ಮ ಭೂಮಿ ಕೊಟ್ಟಿರುವುದರಿಂದ ಇವರುಗಳು ಉಪ್ಪಿನ ಸೊಸೈಟಿಯ ಫಲಾನುಭವಿ ಸದಸ್ಯರೂ ಹೌದು.

UASB LIBRARY

ಬೆಳ್ಳಂ ಬೆಳಗ್ಗೆ ಊಟದ ತಟ್ಟೆಗೆ ಅಂಬಲಿ ಸುರುವಿ ಅದಕ್ಕೆ ಸ್ವಲ್ಪ ಉಪ್ಪು ಹಾಕಿ ಕದಡಿ ಕುಡಿದು ಮನೆಯಿಂದ ಪತಿ-ಪತ್ನಿ ಜೊತೆಯಾಗಿ ನಡೆದರೆ ಆವರೆಲ್ಲ ಉಪ್ಪಿನ ಆಗರದ ಕೆಲಸಕ್ಕೆ ಹೊರಟರೆಂದೇ ಅರ್ಥ.



ಉಪ್ಪಿನ ತಯಾರಿಗೆ ಅತ್ಯಗತ್ಯವಾಗಿ ಬೇಕಿರುವುದು ಬಿರುಬಿಸಿಲು ಮತ್ತು ಕಡಿಮೆ ಮಳೆ. ವಾತಾವರಣದ ವ್ಯತ್ಯಯಕ್ಕನುವಾಗಿ ಇಲ್ಲಿ ಜನವರಿಯಿಂದ ಮೇ ತಿಂಗಳ ಕೊನೆಯವರೆಗೆ ಮಾತ್ರ ಉಪ್ಪಿನ ಉತ್ಪಾದನೆ ನಡೆಯುತ್ತದೆ.

1952ರ ಸೆಪ್ಟಂಬರ್ 17ರಂದು ಸಂಘಟಿತ ರೂಪ ಪಡೆದು ನೋಂದಾವಣೆಗೊಂಡ ಉಪ್ಪಿನ ಮೂಲೀಕರ ಈ ಸಹಕಾರಿ ಸಂಘ ಇಂದು ನೂರಾರು ಕುಟುಂಬಗಳ ಬದುಕಿಗೆ ಆಧಾರವಾಗಿದೆ. ಪ್ರಸ್ತುತ 469 ಎಕರೆ ಪ್ರದೇಶದಲ್ಲಿ ವಿಸ್ತಾರವಾಗಿ ಹರಡಿರುವ ಉಪ್ಪಿನ ಗದ್ದೆಗಳು ಕೇವಲ ಉಪ್ಪಿನ ಉತ್ಪಾದನಾ ಕೇಂದ್ರಗಳಾಗಿ ಮಾತ್ರ ಉಳಿಯದೆ, ಒಂದು ವಿಶಿಷ್ಟ ಜೀವನಶೈಲಿಯನ್ನು ಪ್ರತಿಬಿಂಬಿಸುವ ಮಾದರಿ ತಾಣಗಳಾಗಿವೆ. ಪ್ರತಿ ವರ್ಷ ಬಿಸಿಲು ಮಳೆಯ ವೈಪರೀತ್ಯವನ್ನು, ಹವಾಮಾನದ ವೈಪರೀತ್ಯವನ್ನು ಆಧರಿಸಿ ವೈಜ್ಞಾನಿಕ ರೀತಿಯಲ್ಲಿ 10ರಿಂದ 15ಸಾವಿರ ಮೆಟ್ರಿಕ್ ಟನ್ ಉಪ್ಪಿನ ಉತ್ಪಾದನೆ ಮತ್ತು ಮಾರಾಟವನ್ನು ಸಮರ್ಥವಾಗಿ ನಿರ್ವಹಿಸುತ್ತಾ ರಾಷ್ಟ್ರಾದ್ಯಂತ ಗಮನ ಸೆಳೆದಿರುವ ಈ ಸಂಘದ ಬೆನ್ನೆಲುಬಾಗಿ 363 ಭೂಮಾಲೀಕರಿದ್ದಾರೆ. 1993ರಲ್ಲಿ ಕೇಂದ್ರ ಸರಕಾರದ ನಿರ್ದೇಶನದಂತೆ ಗಳಗಂಡ ರೋಗ ನಿಯಂತ್ರಣಕ್ಕಾಗಿ ಕರ್ನಾಟಕದಲ್ಲಿ ಮೊದಲ ಬಾರಿಗೆ ಅಯೋಡಿನ್‌ಯುಕ್ತ ಉಪ್ಪನ್ನು ತಯಾರಿಸಿದ ಉತ್ಪಾದನಾ ಘಟಕ ಎಂಬ ಹೆಗ್ಗಳಿಕೆಯೂ ಈ ಸಂಘಕ್ಕಿದೆ.

ಪತಿ-ಪತ್ನಿಗೆ ಒಂದೇ ಪಗಾರ!

ಉಪ್ಪಿನ ಉತ್ಪಾದನೆಯ ಅವಧಿ ಪ್ರಾರಂಭವಾಗುವುದೇ ಮಳೆಗಾಲ ಮುಗಿದ ಬಳಿಕ. ಉಪ್ಪಿನ ಚೌಕದ ದುರಸ್ತಿ, 100 ಅಡಿ ಉದ್ದ, 20 ಅಡಿ ಅಗಲದ ತಾಕು (ತುಂಡು ನೆಲ)ಗಳ ದುರಸ್ತಿ ಇತ್ಯಾದಿ ಪೂರ್ವಭಾವಿ ಕಾರ್ಯಾಚರಣೆಯ ಬಳಿಕ ಜನವರಿ ತಿಂಗಳ ಕೊನೆಯಲ್ಲಿ ಉಪ್ಪಿನ ಉತ್ಪಾದನೆ ಆರಂಭವಾಗುತ್ತದೆ. ಮೇ ತಿಂಗಳಲ್ಲಿ ಕೊನೆಯ ಮಳೆ ಬರುವ ತನಕವೂ ಉಪ್ಪು ತಯಾರಿಯ ಈ ಕಾಯಕ ಮುಂದುವರಿಯುತ್ತದೆ. ವಿಶೇಷವೆಂದರೆ, ಉಪ್ಪಿನ ಆಗರ(ಗದ್ದೆ)ದಲ್ಲಿ ಕೊಯ್ಲು ಪ್ರಾರಂಭವಾಗುವಾಗ (ಜನವರಿಯಿಂದ ಮಾರ್ಚ್‌ವರೆಗೆ) ನಿತ್ಯವೂ ಬೆಳಿಗ್ಗೆ ಏಳು ಗಂಟೆಯಿಂದ ಹಾಗೆಯೇ ಬಿಸಿಲಿನ ತಾಪ ತೀವ್ರಗೊಳ್ಳುವ ಎಪ್ರಿಲ್ – ಮೇ ಅವಧಿಯಲ್ಲಿ ಬೆಳಿಗ್ಗೆ ಆರು ಗಂಟೆಯಿಂದಲೇ ಚಟುವಟಿಕೆ ಶುರುವಾಗುತ್ತದೆ. ಈ ಸಮಯದಲ್ಲಿ 200-250 ಕಾರ್ಮಿಕರು ಇಲ್ಲಿ ದುಡಿಯುತ್ತಾರೆ. ಸ್ವಾರಸ್ಯವೆಂದರೆ, ಇಲ್ಲಿನ ಉಪ್ಪಿನ ಆಗರಗಳಲ್ಲಿ ಕೆಲಸ ಮಾಡುವ ಬಹುತೇಕರು ದಂಪತಿಗಳೇ. ಒಂದೊಂದು ಚೌಕದಲ್ಲಿಯೂ ಪತಿ-ಪತ್ನಿ ಸಕ್ರಿಯವಾಗಿ ದುಡಿಯುತ್ತಾರೆ.



ಬರಲಿದೆ, ಟೆಟ್ರಾ ಪ್ಯಾಕೆಟ್‌ನಲ್ಲೂ...

ತೀರಾ ಅಂಶ ಹೆಚ್ಚಿರುವ ಸಾಣೆಕಟ್ಟಾ ಉಪ್ಪನ್ನು ಅಂಗಡಿ, ಸೊಸೈಟಿಗಳಲ್ಲಿ ಹೊರಗಡೆಯೇ ಇಡುತ್ತಾರೆ. ವರ್ತಕರ ಅಂಗಡಿಯೊಳಗೂ ನಮ್ಮ ಉಪ್ಪು ಹೋಗಬೇಕು, ಟೇಬಲ್ ಮೇಲೆ ಇಟ್ಟರೂ ಕರಗಬಾರದು, ಇನ್ನೊಂದು ಪುಟ್ಟ ಭರಣಿ ಆಥವಾ ಗಾಜಿನ ಬಾಟಲಿಯಲ್ಲಿ ಹಾಕಿಡಬೇಕಾದ ಸ್ಥಿತಿ ಬರಬಾರದು ಎಂದು ಹೊಸ ಮಾದರಿಯ ಟೆಟ್ರಾ ಪ್ಯಾಕೆಟ್‌ನಲ್ಲಿ ಮಾರುಕಟ್ಟೆಗೆ ಬಿಡುಗಡೆ ಮಾಡುವ ಚಿಂತನೆ ಸೊಸೈಟಿಯದು.



UNIVERSITY LIBRARY BANGALORE

'ಕೃಷಿ ಪ್ರವಾಸೋದ್ಯಮ'ದ ಮಗ್ಗುಲು

ಗೊರೇಕರ್ಣಕ್ಕೆ ಬರುವ ಪ್ರವಾಸಿಗರು ಸಾಣೆಕಟ್ಟಾದ ಈ ಬಿಳಿ ಮರುಭೂಮಿಯಂತೆ ಕಾಣುವ 'ಬಿಳಿ ಬಂಗಾರದ ಆಗರ' ನೋಡುವುದಕ್ಕಾಗಿಯೇ ಭೇಟಿ ನೀಡುತ್ತಿದ್ದಾರೆ. ಇದು ಕೃಷಿ ಪ್ರವಾಸೋದ್ಯಮಕ್ಕೆ ದೊಡ್ಡ ಅವಕಾಶ ನೀಡುತ್ತದೆ. ಆದರೆ, ಉಪ್ಪಿನ ಕಾರ್ಯಗಳಿಗೆ ಮಾತ್ರ ಈ ಆಯಾಮ ಹೊಡೆಕಾಗಬಾರದು ಅಷ್ಟೇ.

UASB LIBRARY



ಉಪ್ಪು ಸಂಗ್ರಹಿಸಿಡುವ ಮಾಮಿನ ಹಲಗೆಯ ಗೋದಾಮು.



ಮಳೆಗಾಲದಲ್ಲಿ ಬೃಹತ್ ಪ್ರಮಾಣದಲ್ಲಿ ಉಪ್ಪನ್ನು ಸಂಗ್ರಹಿಸಿಡುವ ಕಲ್ಲಿನ ಗೋದಾಮು.



ಸಮುದ್ರದ ಭರತಕಾಲದಲ್ಲಿ ಉಕ್ಕುವ ಉಪ್ಪು ನೀರು ಹಾಗೂ ಅಘನಾಶಿನಿ ನದಿಯ ಸಿಹಿ ನೀರಿನೊಂದಿಗೆ ಬೆರೆಯುವಾಗ ಈ ನೀರನ್ನು (ಮುಖಜಭೂಮಿಯಲ್ಲಿರುವ ಗೇಟನ್ನು ತೆರೆದು) ಕಾಲುವೆಯ ಮೂಲಕ ಉಪ್ಪಿನ ಆಗರದ ಒಳಗೆ ಹರಿಸುತ್ತಾರೆ.



ಆರ್ಮ್ ದಯಾನಂದ ನಾಡಕರ್ಣಿ

'ಎಲ್ಲ ಉಪ್ಪಿನ ಆಗರಗಳನ್ನೂ, ನಮಗೇ ಕೊಡಿ!'

'ಎಲ್ಲ ಉಪ್ಪುಗಳನ್ನೂ ನಮಗೇ ಕೊಡಿ!' - ಹೀಗೆಂದು ಸುಮಾರು 20 ವರ್ಷಗಳ ಹಿಂದೆ ಈ ಉಪ್ಪಿಗೆ ಮಾರುಹೋಗಿದ್ದ ಇಸ್ರೇಲ್‌ನಿಂದ ಬಂದ ನಿಯೋಗ ಕೇಳಿಕೊಂಡಿತ್ತು. ಕೆಲವು ವರ್ಷಗಳ ಹಿಂದೆ ದೇಶದ ಪ್ರಸಿದ್ಧ ಟೇಬಲ್ ಸಾಲ್ಟ್ ಕಂಪೆನಿ ಕೂಡ 'ನಮಗೇ ಈ ಉಪ್ಪಿನ ಆಗರ ಕೊಡಿ' ಎಂಬ ಬೇಡಿಕೆ ಮುಂದಿಟ್ಟಿತ್ತು. 'ಉಪ್ಪು ಅಡುಗೆ ಮನೆಯ ಪಸ್ತು. ಹೀಗಾಗಿ ಅದನ್ನು ಸಾರ್ವಜನಿಕ ಹಿತದೃಷ್ಟಿಯಿಂದ ನಾವು ಯಾರಿಗೂ ಪರಿಸಿಕೊಟ್ಟಿಲ್ಲ' ಎನ್ನುತ್ತಾರೆ ಸಂಘದ ಅಧ್ಯಕ್ಷ ಆರ್ಮ್ ದಯಾನಂದ ನಾಡಕರ್ಣಿ.

ತಾರತಮ್ಯವಿಲ್ಲದೆ ಇಬ್ಬರಿಗೂ ಸಮಾನ ಪಗಾರ. ಇದು ಕೇವಲ ಉದ್ಯೋಗದ ನಿಯಮವಷ್ಟೇ ಅಲ್ಲ ಪರಸ್ಪರ ಅನ್ಯೋನ್ಯತೆ, ಸೌಹಾರ್ದತೆ, ಒಗ್ಗಟ್ಟಿನ ದೃಷ್ಟಾಂತವೂ ಹೌದು. ಗಂಡ ಉದ್ದನೆಯ ಕೋಲಿಗೆ ಹಲಗೆ ಕಟ್ಟಿ ಉಪ್ಪಿನ ಹರಳು ಎಳೆದರೆ, ಪತ್ನಿ ಅದನ್ನು ದಂಡೆಯ ಮೇಲೆ ರಾಶಿ ಹಾಕುವುದನ್ನು ನೋಡುವುದೇ ಒಂದು ಚಂದ!

ಉಪ್ಪಿನ ಉತ್ಪಾದನೆ ಇಲ್ಲಿ ವಿಜ್ಞಾನ ಮತ್ತು ಪ್ರಕೃತಿಯ ಸಮ್ಮಿಲನ ಸಾಧಿಸಿದೆ. ಸಾಮಾನ್ಯವಾಗಿ ಶೇ. 2.5ರಷ್ಟಿರುವ ಸಮುದ್ರ ನೀರಿನ ಉಪ್ಪಿನಂಶವನ್ನು 19ರಿಂದ 20 ಡಿಗ್ರಿಯವರೆಗೆ ಏರಿಸಲು ಅಘನಾಶಿನಿ ನದಿಯ ನೀರಿನೊಂದಿಗೆ ಮಿಶ್ರವಾದ ಸಮುದ್ರದ ನೀರನ್ನು ಕಾಲುವೆಗಳ ಮೂಲಕ ಉಪ್ಪಿನ ಆಗರ(ಗದ್ದೆ) ಗಳಿಗೆ ಹಾಯಿಸಿ ಮೊದಲು ಆಳವಾದ ಸಣ್ಣ ಕಟ್ಟೆ (ಜಲಾಶಯ ರೂಪ)ಗಳಲ್ಲಿ ನೀರನ್ನು ಸಂಗ್ರಹಿಸಲಾಗುತ್ತದೆ. ಅನಂತರ ಹಂತ ಹಂತವಾಗಿ ಅದರ ಸಾಂದ್ರತೆಯನ್ನು ಹೆಚ್ಚಿಸಲು ಕಡಿಮೆ ಆಳದ ಕಟ್ಟೆಗಳಿಗೆ ಬಿಡಲಾಗುತ್ತದೆ. ಸೂರ್ಯನ ಝಳ ಮತ್ತು ಗಾಳಿಯಿಂದ ನೀರು ಬಾಷ್ಪೀಭವನಗೊಂಡು ನೀರಿನಲ್ಲಿರುವ ಉಪ್ಪು ಸ್ಫಟಿಕ ರೂಪದಲ್ಲಿ ಜಮಾವಣೆಯಾಗುವಂತೆ ಮಾಡಲಾಗುತ್ತದೆ.

UASB LIBRARY



75ರ ಸಂಭ್ರಮದತ್ತ...

ಉಪ್ಪಿನ ಸೊಸೈಟಿಗೆ ಪ್ರಥಮ ಹಾಗೂ ಸ್ಥಾಪಕ ಅಧ್ಯಕ್ಷರಾಗಿ 1952ರಲ್ಲಿ ಪದ್ಮಸಾಧ ಅನಂತ ನಾಡಕರ್ಣಿ ಸೇವೆ ಆರಂಭಿಸಿದ್ದರು. ಅಂದು ಸ್ಥಾಪಕ ಸದಸ್ಯರಾಗಿ 48 ಸದಸ್ಯರು ಇವರೊಂದಿಗೆ ಹೆಜ್ಜೆ ಹಾಕಿದ್ದರು. ಮುಂದಿನ ವರ್ಷ ಉಪ್ಪಿನ ಸೊಸೈಟಿಗೆ 75ರ ಸಂಭ್ರಮ. ಅಧ್ಯಕ್ಷ, ಉಪಾಧ್ಯಕ್ಷ, ನಿರ್ದೇಶಕರ, ಸಿಬಂದಿಗಳ ಹಾಗೂ ಭೂ ಮಾಲಕ ಸದಸ್ಯರ ಸಹಕಾರ ಈ ಸಂಸ್ಥೆಯ ಹಿತ ಕಾಯುತ್ತಿದೆ.



UASB LIBRARY

ಅನಂತರ ತಾಪಮಾನದೊಂದಿಗೆ ಬದಲಾಗುವ ಉಪ್ಪು ನೀರಿನ ಸಾಂದ್ರತೆಯನ್ನು 'ಬಾಮ್ ಮೀಟರ್' (ಬ್ಯುಮಿಯೋ ಮೀಟರ್) ನಲ್ಲಿ ಅಳೆಯುತ್ತಾರೆ.

ಕಂದು-ಗುಲಾಬಿ ಬಣ್ಣದ ಉಪ್ಪು

ಯಾವುದೇ ರಾಸಾಯನಿಕಗಳನ್ನು ಬಳಸದೆ ಉಪ್ಪು ಕಂದು ಮಿಶ್ರಿತ ಗುಲಾಬಿ ಬಣ್ಣದಲ್ಲಿ ಉದುರುದುರಾಗಿ (ಹರಳುಪ್ಪು) ತಯಾರಾಗುತ್ತದೆ. ಈ ಉಪ್ಪು ಆಫನಾಶಿನಿ ಹೊತ್ತು ತರುವ ಅಪರೂಪದ ವನಸ್ಪತಿಗಳ ಸತ್ತ್ವ ದೊಡನೆ ಸಮುದ್ರ ನೀರಿನಲ್ಲಿರುವ ಮ್ಯಾಗ್ನೀಸಿಯಂ, ಪೊಟ್ಯಾಸಿಯಂ, ಕ್ಯಾಲ್ಸಿಯಂ, ಸೋಡಿಯಂ ಇನ್ನಿತರ ಅಪರೂಪದ ಖನಿಜಗಳಿಂದ ಸಮೃದ್ಧವಾಗಿದೆ. ಶಿರಸಿ ಸೀಮೆಯಲ್ಲಿ ತಯಾರಾಗುವ ಉಪ್ಪಿನಕಾಯಿಗಳಿಗೆ ಇಲ್ಲಿನ ಉಪ್ಪು ಅತ್ಯಂತ ಅಗತ್ಯ. ಜೇರಿಗೆ, ಅಪ್ಪೆ ಮಾವಿನ ಮಿಡಿಗಳ ರಕ್ಷಣೆಗೆ, ಚಟ್ನಿಗೆ ಇದೇ ಉಪ್ಪು ಬಳಕೆಯಾಗುತ್ತದೆ.

ನಾಗರಬೈಲ್ ಸಂಘ ಉಪ್ಪಿನ ಉತ್ಪಾದನೆಯಲ್ಲಷ್ಟೇ ಅಲ್ಲ, ಮಾರುಕಟ್ಟೆಯಲ್ಲಿಯೂ ಮುಂಚೂಣಿಯ ಪ್ರಗತಿ ಸಾಧಿಸಿದೆ. ಉತ್ತರ ಕನ್ನಡ, ಧಾರವಾಡ, ಗದಗ, ಹಾವೇರಿ ಜಿಲ್ಲೆಗಳಲ್ಲಿ ಇಲ್ಲಿನ ಉಪ್ಪು ವ್ಯಾಪಕವಾಗಿ ಬಳಕೆಯಲ್ಲಿದೆ. ತಲೆತಲಾಂತರದಿಂದ ವ್ಯವಹಾರ ನಡೆಸುವ ಕೆಲವು ವರ್ತಕರ ಮುಖಾಂತರವೇ ಈಗಲೂ ಗ್ರಾಹಕರಿಗೆ ಉಪ್ಪನ್ನು ತಲುಪಿಸುವ ಗ್ರಾಹಕ, ವರ್ತಕ ಮತ್ತು ಸೊಸೈಟಿಯ ತ್ರಿಕೋನ ಸಂಬಂಧ ಭಾವೈಕ್ಯ- ಬಾಂಧ್ಯವಕ್ಕೆ ಕನ್ನಡಿ ಹಿಡಿದಿದೆ.

"ಬಡವ-ಶ್ರೀಮಂತ ಎನ್ನದೆ ಎಲ್ಲರಿಗೂ ಉಪ್ಪು ಬೇಕು. ನಿತ್ಯ ಬಳಕೆಯ ವಸ್ತುವಾದ್ದರಿಂದ ಸಾಧ್ಯ ಇರುವಷ್ಟು ಕಡಿಮೆ ದರದಲ್ಲೇ ಮಾರಾಟ ಮಾಡುತ್ತೇವೆ. ಬೇಡಿಕೆ ಬಂತೆಂದು ಎಲ್ಲ ಉಪ್ಪನ್ನು ಒಂದೇ ಸಲ ಮಾರುವುದಿಲ್ಲ ನಂಬಿದ ಗ್ರಾಹಕರಿಗೆ ನಿರಂತರವಾಗಿ ತಲುಪಿಸುವ ಜವಾಬ್ದಾರಿ ಕೂಡ ಇದೆ" ಎನ್ನುತ್ತಾರೆ ಸಂಘದ ಅಧ್ಯಕ್ಷರಾದ ಅರುಣ್ ದಯಾನಂದ ನಾಡಕರ್ಣಿ. "ಇದೇ ಮಾದರಿಯಲ್ಲಿ ಸೊಸೈಟಿಗಳನ್ನು ರೂಪಿಸಿಕೊಂಡು, ಉಳಿದ ಬೇಸಾಯಗಳಿಗೂ ಉತ್ಪಾದನೆಯಿಂದ ಮಾರುಕಟ್ಟೆಯವರೆಗೆ ಸಹಕಾರಿ ತತ್ತ್ವ ಅಳವಡಿಸಿಕೊಂಡರೆ ಕೃಷಿ ಕೂಡ ಲಾಭದಾಯಕವಾಗಲಿದೆ" ಎಂಬ ಅಭಿಪ್ರಾಯ ಅವರದು.

"ಸುಮಾರು 250 ಕುಟುಂಬಗಳ ಸದಸ್ಯರಿಗೆ ಉದ್ಯೋಗ ನೀಡಿದ ತೃಪ್ತಿಯೊಂದಿಗೆ ಭೂಮಿಯ ಗಾತ್ರ ಆಧರಿಸಿ ಭೂ ಮಾಲೀಕರಿಗೆ ವರ್ಷದಲ್ಲಿ ಎರಡು ಬಾರಿ ಲಾಭಾಂಶವನ್ನು ಹಂಚಿಕೆ ಮಾಡಲಾಗುತ್ತದೆ" ಎನ್ನುತ್ತಾರೆ ವ್ಯವಸ್ಥಾಪಕರಾದ ಅನಿಲ್ ನಾಡಕರ್ಣಿ.

ಸವಾಲುಗಳೂ ಇಲ್ಲದಿಲ್ಲ!

ಸಾಣೆಕಟ್ಟಾ ಉಪ್ಪಿನ ಈ ಯಶೋಗಾಥೆಯ ಹಿಂದೆ ಇರುವ ಸವಾಲುಗಳು ಒಂದೆರಡಲ್ಲ. ಹವಾಮಾನ ವೈಪರೀತ್ಯ ಮತ್ತು ಅಕಾಲಿಕ ಮಳೆ - ಇವು ಉತ್ಪಾದನೆಗೆ ದೊಡ್ಡ ಹೊಡೆತ ನೀಡುತ್ತವೆ. ಕೇವಲ ಒಂದು ಇಂಚು ಮಳೆಯೇ ಎಂಟು ದಿನಗಳ ಕಾಲ ಕೆಲಸ ನಿಲ್ಲಿಸುವಷ್ಟು ಪರಿಣಾಮ ಬೀರುತ್ತದೆ. 2021ರಲ್ಲಿ ಅಕಾಲಿಕ ಮಳೆಯಿಂದಾಗಿ ಉಪ್ಪಿನ ಇಳುವರಿ ಸುಮಾರು ಶೇ. 30ರಷ್ಟು ಕುಸಿತ ಕಂಡಿತ್ತು.

ಇನ್ನು ಉಪ್ಪು ಸಂಗ್ರಹಣೆಗಾಗಿಯೇ ಸಾವಿರಾರು ಟನ್ ಸಾಮರ್ಥ್ಯದ ಗೋದಾಮುಗಳು ಇಲ್ಲಿವೆ. ಕಲ್ಲಿನ ಗೋದಾಮುಗಳ ಜೊತೆಗೆ ಉಪ್ಪಿನ ಗುಣ ತಾಳಿಕೊಳ್ಳುವ ಮಾವಿನ ಹಲಗೆಯ ಗೋದಾಮುಗಳೂ ಇವೆ.

ಇವೆಲ್ಲದರ ನಡುವೆಯೂ, ಸ್ಥಳೀಯ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸಿಕೊಂಡು ನಾಗರಬೈಲ್ ಸಾಲ್ಟ್ ಓನರ್ಸ್ ಕೋ-ಆಪರೇಟಿವ್ ಸೊಸೈಟಿ ತನ್ನ ಪ್ರಾದೇಶಿಕ ವೈಶಿಷ್ಟ್ಯತೆ, ಸಾಂಪ್ರದಾಯಿಕ ಪರಂಪರೆಯನ್ನು ಜತನದಿಂದ ಪೋಷಿಸಿಕೊಂಡು ಬಂದಿರುವುದು ಸಾಮಾನ್ಯ ಸಂಗತಿಯಲ್ಲ.

ಸಾಣೆಕಟ್ಟಾ ಉಪ್ಪಿನಲ್ಲಿ ಕೇವಲ ರುಚಿಯಷ್ಟೇ ಅಲ್ಲ, ಪರಿಶ್ರಮದ ಸಿಹಿಯೂ ಬೆರೆತಿದೆ ಎಂಬುದಕ್ಕೆ ನಾಗರಬೈಲ್ ಸೊಸೈಟಿ ಒಂದು ಒಳ್ಳೆಯ ಉದಾಹರಣೆ. ■



ಉತ್ಪಾದಕತೆಗೆ ಮಾರಕ ಹೊಡೆತ ನೀಡುವ ಹತ್ತು ಚಟಗಳು!

□ಚಿನ್ಮಯ್

ಅವಂತಿಕಾ ಮುಂಜಾನೆ 10ಕ್ಕೆ ಸರಿಯಾಗಿ ಮುಂಬಯಿಯ ಆಫೀಸು ತಲುಪುತ್ತಾಳೆ. ದಿನವಿಡೀ ಕೆಲಸ. ರಾತ್ರಿ ಒಂಬತ್ತು ಗಂಟೆಗೆ ಲ್ಯಾಪ್ ಟಾಪ್ ಮುಚ್ಚುವ ತನಕ ಒಂದು ನಿಮಿಷ ಕೂಡ ಬಿಡುವಿಲ್ಲ.

ದಿನವಿಡೀ ಮಾಡಿದ್ದೇನು? ಸಾಧಿಸಿದ್ದೇನು?

ಆಕೆ ಆರು ಮೀಟಿಂಗ್‌ಗಳಲ್ಲಿ ಭಾಗವಹಿಸಿದ್ದಳು. 87 ಈ-ಮೇಲ್ ಗಳಿಗೆ ಉತ್ತರ ಕೊಟ್ಟಿದ್ದಳು. ಕೆಲಸಕ್ಕಾಗಿ ಲಿಂಕ್ಡ್ ಇನ್ ಸೈಟ್‌ನಲ್ಲಿ ಸ್ಕೋಲ್ ಮಾಡಿದ್ದಳು. ಮೂರು ಸ್ಪ್ರೆಡ್‌ಶೀಟ್‌ಗಳನ್ನು ಅಪ್‌ಡೇಟ್ ಮಾಡಿದ್ದಳು.

ಆದರೆ 'ಈ ದಿನ ನಾನು ಸಾಧಿಸಿದ್ದೇನು?' ಎಂಬ ಪ್ರಶ್ನೆಗೆ ಮಾತ್ರ ಆವಳಲ್ಲಿ ಉತ್ತರ ಇಲ್ಲ.

ಆಧುನಿಕ ಯುಗದ ಕೆಲಸದ ದೊಡ್ಡದೊಂದು ಸಮಸ್ಯೆ ಇದು. ನಾವು ದಿನವಿಡೀ ಕೆಲಸ ಮಾಡುತ್ತೇವೆ. ಆದರೆ ಮಾಡಿದ್ದೇನು ಎಂಬ ಬಗ್ಗೆ ಯೋಚಿಸಿದರೆ ಲೆಕ್ಕಕ್ಕೆ ಸಿಗುವುದು ತೀರಾ ಕಡಿಮೆ. 'ಹಿಂದೆಂದಿಗಿಂತ ಹೆಚ್ಚು ಕೆಲಸಮಾಡುತ್ತಿದ್ದೇವೆ. ಉತ್ಪಾದಕತೆ (ಪ್ರೊಡಕ್ಟಿವಿಟಿ) ಮಾತ್ರ ದಿನದಿಂದ ದಿನಕ್ಕೆ ಕಡಿಮೆಯಾಗುತ್ತ ಹೋಗುತ್ತದೆ' ಎಂಬುದು ಎಲ್ಲರ ಗೋಳು.

"ದಿನ ಪೂರ್ತಿ ಒಂದೊಂದೇ ಟಾಸ್ಕ್ ಹಿಡಿದು ಮುಗಿಸುತ್ತೇವೆ. ಆದರೆ ದಿನದ ಕೊನೆಯಲ್ಲಿ ಸಾಧನೆ ಮಾಡಿದ್ದೇನು ಎಂದು ಯೋಚಿಸಿದರೆ ಉತ್ತರ ಸಿಗುವುದಿಲ್ಲ" ಎಂದು ಉದ್ಯೋಗಿಗಳು ಆನ್‌ಲೈನ್‌ನಲ್ಲಿ ದೂರಿಕೊಳ್ಳುತ್ತಾರೆ.

ಈ ಸಮಸ್ಯೆ ನೋಮಾರಿತನದ್ದಲ್ಲ. ದಿನಚರಿಯಲ್ಲಿ ಸೇರಿಕೊಂಡಿರುವ ಕೆಲವು ಚಟಗಳಿಂದ. ಕೆಲಸದಲ್ಲಿ ಏಕಾಗ್ರತೆಯನ್ನು ಸ್ಪಷ್ಟತೆಯನ್ನು ಮತ್ತು ದಕ್ಷತೆಯನ್ನು ಕೆಡಿಸುತ್ತಿರುವ ಚಟಗಳಿವು. ದೈನಂದಿನ ಕಾರ್ಯಾಚರಣೆಯಲ್ಲಿ ಈ ಚಟಗಳು ಎಷ್ಟೊಂದು ಹಾಸುಹೊಕ್ಕಾಗಿ ಸೇರಿಕೊಂಡಿವೆ ಎಂದರೆ ಇವು ಸಮಸ್ಯೆಯಾಗಿ ಕಾಣಿಸುವುದೇ ಇಲ್ಲ. ಆದರೆ ಇವುಗಳ ಪರಿಣಾಮ ಮಾತ್ರ ಗಂಭೀರವಾಗಿರುತ್ತದೆ.

ಈ ಚಟಗಳು ಉದ್ಯೋಗಿಗಳ ಕಾರ್ಯಕ್ಷಮತೆಯ ಮೇಲೆ ಮಾತ್ರವೇ ಅಲ್ಲ, ಅವರೊಡನೆ ವ್ಯವಹರಿಸುವ ವ್ಯಕ್ತಿಗಳ ಮೇಲೂ ಪರಿಣಾಮ ಬೀರುತ್ತವೆ. ಉದಾಹರಣೆಗೆ ಸರಕಾರಿ ಸಿಬಂದಿಗಳಿಂದ ಹಿಡಿದು, ಬ್ಯಾಂಕು ಅಧಿಕಾರಿಗಳ ತನಕ ಎಲ್ಲರೂ ಕಂಪ್ಯೂಟರ್‌ಗಳ ಮುಂದೆ ಕುಳಿತಿರುತ್ತಾರೆ. ಮುಂದೆ ನಿಂತವರತ್ತ ತಲೆಯೆತ್ತಿ ನೋಡಲೂ ವ್ಯವಧಾನ ಇರುವುದಿಲ್ಲ. ಗ್ರಾಹಕರು ತಮ್ಮ ಸಮಸ್ಯೆಯ ಪರಿಹಾರಕ್ಕಾಗಿ ಅವರ ಮುಂದೆ ಕ್ಯೂ ನಿಂತಿರುತ್ತಾರೆ. ಕಂಪ್ಯೂಟರ್‌ನಲ್ಲಿ ನೆಟ್ಟ ಕಣ್ಣುಗಳು ಈಗ ತಮ್ಮತ್ತ ನೋಡಬಹುದು ಎಂದು ಕಾಯುತ್ತ ಇರುತ್ತಾರೆ. ಆದರೆ ಆ ಕಣ್ಣುಗಳು ತುರ್ತಾಗಿ ಇನ್‌ಸ್ಟಾಗ್ರಾಮ್ ಆಪ್‌ಡೇಟ್ ಮಾಡುತ್ತಿರಬಹುದು, ಅಥವಾ ವಾಟ್ಸ್ ಆ್ಯಪ್‌ನಲ್ಲಿ ಮೆಸೇಜ್ ಚೆಕ್ ಮಾಡುತ್ತಿರಬಹುದು! ಆನ್‌ಲೈನ್ ಗೇಮ್ ಕೂಡ ಆಡುತ್ತಿರಬಹುದು.

ವೈಜ್ಞಾನಿಕ ಅಧ್ಯಯನಗಳು ಈ ಚಟಗಳನ್ನು ಪ್ರೊಡಕ್ಟಿವಿಟಿ ಕಿಲ್ಲರ್ಸ್ (ಉತ್ಪಾದಕತೆಯ ಹಂತಕರು) ಎಂದು ಕರೆಯುತ್ತವೆ. ಅಧ್ಯಯನಗಳ ಪ್ರಕಾರ ಇಂಥ ಅತ್ಯಂತ ಅಪಾಯಕಾರಿ ಕಿಲ್ಲರ್ಸ್ ಬಗ್ಗೆ ಇಲ್ಲಿದೆ ಓದಿ.

1 ಮಲ್ಟಿಟಾಸ್ಕಿಂಗ್

ಒಬ್ಬ ವ್ಯಕ್ತಿ ಒಮ್ಮೆಗೆ ಎಷ್ಟು ಕೆಲಸ ಮಾಡಲು ಸಾಧ್ಯ?

ಒಂದೇ ಸಮಯದಲ್ಲಿ ಎರಡು ಅಥವಾ ಹೆಚ್ಚು ಕೆಲಸಗಳನ್ನು ಮಾಡುವುದೇ ಮಲ್ಟಿಟಾಸ್ಕಿಂಗ್. ಮನೆಯಲ್ಲಿ ಗೃಹಿಣಿ ಮಗುವನ್ನು ರಮಿಸಿ ಊಟ ಕೊಡುತ್ತಿರುವಾಗಲೇ ಆನ್ನಕ್ಕೆ ನೀರು ಇರಿಸುವುದು, ಬಾಟಲಿಯಲ್ಲಿ ಎಣ್ಣೆ ತುಂಬಿಸುವುದು, ಟ್ಯಾಂಕ್‌ಗೆ ನೀರು ಏರಿಸುವುದು ಮಲ್ಟಿಟಾಸ್ಕಿಂಗ್. ಆಫೀಸಿನ ಸಿಬಂದಿಗಳು ಚಹಾ ಗುಟುಕರಿಸುತ್ತ ಮನೆಯವರೊಡನೆ ಫೋನಿನಲ್ಲಿ ಖಾಸಗಿ ಸಮಸ್ಯೆಗಳನ್ನು ಪರಿಹರಿಸುತ್ತಿರುವಾಗಲೇ ಕಂಪ್ಯೂಟರ್‌ನಲ್ಲಿ ಡಾಟಾ ಎಂಟ್ರಿ ಮಾಡುವುದು, ಬಿಸಿಬಿಸಿ ಪೇರು ದರ ನೋಡುವುದು, ಗ್ರಾಹಕರ ಪ್ರಶ್ನೆಗಳಿಗೆ ಉತ್ತರ ಕೊಡುವುದು ಇನ್ನೊಂದು ಬಗೆಯ ಟಾಸ್ಕಿಂಗ್. ಇದರಿಂದ ಕಡಿಮೆ ಸಮಯದಲ್ಲಿ ಹೆಚ್ಚು ಕೆಲಸ ಆಗುತ್ತದೆ, ಸಮಯ ಉಳಿತಾಯವಾಗುತ್ತದೆ, ಉತ್ಪಾದಕತೆ ಹೆಚ್ಚುತ್ತದೆ ಎಂಬ ಅಭಿಪ್ರಾಯ ಬೆಳೆದಿದೆ. ಇಂಥ ಕೆಲಸಗಳನ್ನು ಒಂದೊಂದಾಗಿ ಬೇರೆ ಬೇರೆ ಸಮಯದಲ್ಲಿ ಮಾಡುವುದಾದರೆ ದಿನದಲ್ಲಿ ಇಷ್ಟೊಂದು ಕೆಲಸ ಮಾಡಿ ಮುಗಿಯಲು ಸಾಧ್ಯವೇ ಇಲ್ಲ ಎಂಬುದು ಮಲ್ಟಿಟಾಸ್ಕ್ ಪ್ರೇಮಿಗಳ ವಾದ.



ಮಲ್ಟಿಟಾಸ್ಕಿಂಗ್: ಒಮ್ಮೆಗೇ ಹತ್ತು ಹಲವು ಕೆಲಸ: ಕೊನೆಗೆ ಎಲ್ಲವೂ ಹಾಳು!

ಬೆಂಗಳೂರಿನ ಟೆಕ್ ಕಚೇರಿಗಳಲ್ಲಿ ಸಾಫ್ಟ್‌ವೇರ್ ಡೆವೆಲಪರ್‌ಗಳು ಮುಂಜಾನೆಯಿಂದ ಸಂಜೆಯ ತನಕ ಕೋಡಿಂಗ್, ಈ-ಮೇಲ್, ಮೀಟಿಂಗ್ ಎಲ್ಲವನ್ನೂ ಜೊತೆಯಾಗಿ ನಿಭಾಯಿಸುತ್ತಾರೆ. ಹಲವು ಕೆಲಸಗಳನ್ನು ಒಮ್ಮೆಗೇ ನೆರವೇರಿಸುವ ಸಾಮರ್ಥ್ಯ ಇದು.

ಮಲ್ಟಿಟಾಸ್ಕಿಂಗ್‌ನಿಂದ ಮಿದುಳು ಚುರುಕಾಗುತ್ತದೆ, ಇನ್ನೂ ಹೆಚ್ಚು ಕೆಲಸಗಳನ್ನು ಮಾಡಲು ಸಾಧ್ಯವಾಗುತ್ತದೆ ಎಂದು ಹೇಳುತ್ತಾರೆ. ಕಚೇರಿಗಳಲ್ಲಿ ಮಲ್ಟಿಟಾಸ್ಕಿಂಗ್ ಮಾಡಬಲ್ಲವರಿಗೆ ಹೆಚ್ಚು ಅವಕಾಶಗಳು ಸಿಗುತ್ತವೆ. ಕೆಲಸ ಅರಸುವವರು ತಮ್ಮ ಬಯೋಡಾಟಾಗಳಲ್ಲಿ ತಮ್ಮ ಮಲ್ಟಿಟಾಸ್ಕಿಂಗ್ ಶಕ್ತಿಯನ್ನು ವಿಶೇಷವಾಗಿ ನಮೂದಿಸುತ್ತಾರೆ.

ಮಲ್ಟಿಟಾಸ್ಕಿಂಗ್‌ನಿಂದ ಕಾರ್ಯಕ್ಷಮತೆ ಹೆಚ್ಚುತ್ತದೆ ಎನ್ನುವುದು ಬರೀ ಕಟ್ಟುಕಥೆ ಎನ್ನುತ್ತವೆ ಅಧ್ಯಯನಗಳು.

ಬೈಕ್ ಬಿಡುತ್ತಿರುವವರು ಕುತ್ತಿಗೆ ವಾಲಿಸಿ ಕಿವಿ ಮತ್ತು ಕತ್ತಿನ ನಡುವೆ ಮೊಬೈಲ್ ಸಿಕ್ಕಿಸಿ ಫೋನ್ ಸಂಭಾಷಣೆ ನಡೆಸುವುದು ನಮ್ಮ ಬೀದಿಗಳಲ್ಲಿ ಒಂದು ಸಾಮಾನ್ಯ ದೃಶ್ಯ. ಕಾರು ಚಲಾಯಿಸುವವರು ಮೊಬೈಲ್‌ನಲ್ಲಿ ವಿಡಿಯೋ ಕಾಲ್ ಕೂಡ ಮಾಡುತ್ತಾರೆ. ಇದೂ ಮಲ್ಟಿಟಾಸ್ಕಿಂಗ್. ಜಗತ್ತಿನ ಸುತ್ತ ಅತ್ಯಂತ ಹೆಚ್ಚು ಅಪಘಾತಗಳು ನಡೆಯುವುದು ಇದರಿಂದಾಗಿ.

UASB LIBRARY

ಯಾವುದೇ ಕೆಲಸ ಸಮರ್ಪಕವಾಗಿ ನೆರವೇರಬೇಕಾದರೆ ಏಕಾಗ್ರತೆ ಬೇಕು. ಏಕಾಗ್ರತೆಯಿಂದ ಕೆಲಸದ ದಕ್ಷತೆ ಮತ್ತು ಉತ್ಪಾದಕತೆ ಹೆಚ್ಚುತ್ತದೆ. ಆದರೆ ಮನಸ್ಸು ಎನ್ನುವುದು ಮರ್ಕಟದಂತೆ. ಕೆಲಸದ ನಡುವೆ ಕೆಲವೊಂದು ಆಕರ್ಷಣೆಗಳು ಮನಸ್ಸನ್ನು ಅತ್ತಿತ್ತ ಎಳೆಯುತ್ತವೆ. ಈ ಆಕರ್ಷಣೆಗಳು ನಮಗೆ ತಿಳಿಯದಂತೆ ಚಟವೇ ಆಗುತ್ತವೆ. ಇವೇ ಕೆಲಸ ಕೆಡಿಸುವ ಚಟಗಳು! ಮಾಹಿತಿ ತಂತ್ರಜ್ಞಾನದ ನವಯುಗದಲ್ಲಿ ಅತ್ಯಾಧುನಿಕ ಸಾಧನಗಳು, ಜಾಲತಾಣಗಳ ಕಾರಣದಿಂದ ಕೆಲಸ ಕೆಡಿಸುವ ಚಟಗಳು ಒಂದೊಂದಾಗಿ ಹೆಚ್ಚುತ್ತಿವೆ. ಇವುಗಳಿಂದಾಗಿ ನಾವು ಮಾಡಬೇಕಾದ ಕೆಲಸ ನಿಧಾನವಾಗುತ್ತದೆ, ಮೂಲೆಗೆ ಬೀಳುತ್ತದೆ. ಒಟ್ಟಾರೆ ದಿನದಲ್ಲಿ ಮಾಡಿ ಮುಗಿಯಬೇಕಾದ ಕೆಲಸ ನೆರವೇರುವುದಿಲ್ಲ

U.A.S. LIBRARY BANGALORE CAMPUS

ನ್ಯೂಯಾರ್ಕ್‌ನ ಅಲೆಕ್ಸಾಂಡರ್ ಹಸ್ಟ್ ಒಬ್ಬ ಷೇರ್ ಟ್ರೇಡರ್. ಈ-ಮೇಲ್ ಚೆಕ್ ಮಾಡುತ್ತ ಆ ದಿನವೇ ಸಿಕ್ಕಿದ್ದ ಟಿಪ್ಸ್‌ಪ್ರಕಾರ ಒಂದು ಷೇರಿನಲ್ಲಿ ಹಣ ಹೂಡಿದ್ದ. ಅಂಕೆಗಳ ಕೀಲಿ ಒತ್ತುವಾಗ ಎಡವಟ್ಟಾಗಿ ಸಾವಿರ ಷೇರು ಖರೀದಿಸುವಲ್ಲಿ ಹತ್ತು ಸಾವಿರ ಷೇರು ಖರೀದಿಸಿದ್ದ. ಆ ದಿನ ಷೇರು ಕುಸಿದ ಕಾರಣ ಅವನಿಗೆ ಒಂದೇ ದಿನದಲ್ಲಿ ಹನ್ನೆರಡು ಸಾವಿರ ಡಾಲರ್ (ಹತ್ತಾರು ಲಕ್ಷ ರೂಪಾಯಿ) ನಷ್ಟವಾಗಿತ್ತು.

ಒಂದೇ ಸಮಯದಲ್ಲಿ ವಿವಿಧ ಕೆಲಸಗಳನ್ನು ಮಾಡುವುದರಿಂದ ಮಿದುಳಿನ ಕಾರ್ಯಕ್ಷಮತೆ ಶೇ. 40ರಷ್ಟು ತಗ್ಗುತ್ತದೆ, ಏಕಾಗ್ರತೆ ತಪ್ಪುತ್ತದೆ. ಇದರಿಂದ ತಪ್ಪುಗಳು ಹೆಚ್ಚಾಗುತ್ತವೆ ಎಂದು ಅಧ್ಯಯನಗಳು ಹೇಳುತ್ತವೆ. ನಿರಂತರ ಮಲ್ಟಿ ಟಾಸ್ಕಿಂಗ್ ಮಾಡುವ ಕಾರಣದಿಂದ ಮಾನಸಿಕ ದಣಿವು, ಮಾನಸಿಕ ಒತ್ತಡ, ಆತಂಕಗಳು ಹೆಚ್ಚುತ್ತವೆ, ಮಿದುಳಿನ ಮೇಲೆ ಒತ್ತಡ ಹೆಚ್ಚುವ ಕಾರಣ ಮರೆವು ಹೆಚ್ಚಾಗುತ್ತದೆ ಎನ್ನುತ್ತಾರೆ.

ವಿಜ್ಞಾನದ ಪ್ರಕಾರ ಮಿದುಳಿಗೆ ಒಮ್ಮೆಗೇ ಎರಡು ಕೆಲಸ ಮಾಡುವ ಶಕ್ತಿ ಇಲ್ಲ. ಅದು ಒಂದು ಕೆಲಸದಿಂದ ಇನ್ನೊಂದು ಕೆಲಸಕ್ಕೆ ಅತ್ತಿತ್ತ ನೆಗೆಯತ್ತದೆ. ಪ್ರತಿಯೊಂದು ಬಾರಿ ಅತ್ತಿತ್ತ ನೆಗೆದಾಗ ಅದರ ಏಕಾಗ್ರತೆ, ಕೆಲಸದ ಮೇಲಿನ ನಿಯಂತ್ರಣ ಕಡಿಮೆಯಾಗುತ್ತ ಹೋಗುತ್ತದೆ.

ಮಲ್ಟಿಟಾಸ್ಕಿಂಗ್‌ನಿಂದ ಉತ್ಪಾದಕತೆ ಹೆಚ್ಚಿದಂತೆ ಕಾಣಿಸುವುದು ಭ್ರಮೆ ಮಾತ್ರ, ಆದರಿಂದ ಎಲ್ಲ ಕೆಲಸಗಳು ನಿಧಾನವಾಗುತ್ತವೆ ಎಂದು ಎಚ್ಚರಿಸುತ್ತಾರೆ ತಜ್ಞರು.

ಮಲ್ಟಿಟಾಸ್ಕಿಂಗ್‌ನ ಚಟ ಹೆಚ್ಚುತ್ತ ಹೋದಂತೆ ಮಿದುಳು ಮತ್ತು ನರಮಂಡಲದ ಮುಖ್ಯ ವ್ಯಟಕವಾಗಿರುವ 'ಗ್ರೇ ಮ್ಯಾಟರ್'ನ ಪ್ರಮಾಣ ತಗ್ಗಲು ಸಾಧ್ಯವಿದೆ ಎಂದು ವಿಜ್ಞಾನಿಗಳು ಎಚ್ಚರಿಸುತ್ತಾರೆ. ಮಲ್ಟಿಟಾಸ್ಕಿಂಗ್‌ನಿಂದ 'ಕಾರ್ಟಸೋಲ್' ಎಂಬ ಮಾನಸಿಕ ಒತ್ತಡದ ಹಾರ್ಮೋನ್‌ಗಳ ಉತ್ಪಾದನೆ ಹೆಚ್ಚಾಗುತ್ತದೆ. ಈ ಹಾರ್ಮೋನ್ ಮಿದುಳನ್ನು ಮಂಕಾಗಿಸುತ್ತದೆ. ಮಿದುಳಿನ ಮೇಲೆ ಒತ್ತಡ ಹೆಚ್ಚಾಗಿ ಪಶೋಟಿ ತಪ್ಪುವ ಸಾಧ್ಯತೆ ಕೂಡ ಇದೆ ಎಂಬುದು ವಿಜ್ಞಾನಿಗಳ ಅಭಿಪ್ರಾಯ.

ಮಲ್ಟಿಟಾಸ್ಕಿಂಗ್‌ನಲ್ಲಿ ಪುರುಷರಿಗಿಂತ ಮಹಿಳೆಯರು ಹೆಚ್ಚು ನಿಪುಣರು ಎಂಬ ಅಭಿಪ್ರಾಯ ಇತ್ತು. ನಾರಿಯರ ಮಿದುಳಿನ ಎಡ ಮತ್ತು ಬಲಭಾಗಗಳ ನಡುವೆ ಹೆಚ್ಚು ಹೊಂದಾಣಿಕೆ ಇರುವ ಕಾರಣ ಅವರು ಒಂದು ಕೆಲಸದಿಂದ ಇನ್ನೊಂದು ಕೆಲಸಕ್ಕೆ ಸಲೀಸಾಗಿ 'ಫೋಕಸ್' ಬದಲಿಸಲು ಸಾಧ್ಯವಿದೆ ಎಂದು ಕೆಲವು ಅಧ್ಯಯನಗಳು ಹೇಳಿದ್ದವು. ಆದರೆ ಇದನ್ನು ಈಗಿನ ಅಧ್ಯಯನಗಳು ಅಲ್ಲಗಳೆಯುತ್ತವೆ. ಪುರುಷರಾಗಿರಲಿ, ಸ್ತ್ರೀಯರಾಗಿರಲಿ, ಮನುಷ್ಯನ ಮಿದುಳು ಮಲ್ಟಿಟಾಸ್ಕಿಂಗ್‌ಗೆ ಹೇಳಿದ್ದೇ ಅಲ್ಲ ಎನ್ನುತ್ತದೆ ವಿಜ್ಞಾನಿಗಳ ತೀರ್ಪು.

2 ನಿದ್ದೆಗೆಟ್ಟು ಕೆಲಸ

ಇಂಟರ್ನೆಟ್ ಯುಗದಲ್ಲಿ ನಿದ್ದೆಗೆಡುವುದೂ ಒಂದು ಚಟವೇ ಆಗುತ್ತಿದೆ.

ರಾಹುಲ್ ಮಾಲುಸ್ಕರ್ ಪುಣೆಯ 28 ವರ್ಷದ ಯುವ ಹುಮ್ಮಸ್ಸಿನ ಸಾಫ್ಟ್‌ವೇರ್ ಇಂಜಿನಿಯರ್. ಕೆಲಸ ಮುಗಿಯುವ ತನಕ ಅದನ್ನು ಬಿಟ್ಟೇಳುವುದಿಲ್ಲ. 'ಮುಂಜಾನೆ 4 ಗಂಟೆಯ ತನಕ ಕೋಡಿಂಗ್ ಮಾಡುತ್ತೇನೆ' ಎಂದು ಆಫೀಸಿನಲ್ಲಿ ಒಡಾಯಿ ಕೊಚ್ಚಿಕೊಳ್ಳುತ್ತಿದ್ದ. ರಾತ್ರಿ ಕೇವಲ 3-4 ಗಂಟೆಗಳ ನಿದ್ದೆ ಮಾತ್ರ. ಎಲ್ಲರಿಗಿಂತ ಹೆಚ್ಚು ಕೆಲಸ ಮಾಡುತ್ತಿದ್ದ. ಆದರೆ ಅವನ ಕೋಡಿಂಗ್‌ನಲ್ಲಿ ಎಲ್ಲಕ್ಕಿಂತ ಹೆಚ್ಚು ಬಗ್ಸ್ (ದೋಷಗಳು) ಪತ್ತೆಯಾಗುತ್ತಿದ್ದವು.

ಸಹೋದ್ಯೋಗಿಗಳ ಜೊತೆಗೆ ಅವನ ವ್ಯವಹಾರ ಕೆಡುತ್ತ ಹೋಗಿತ್ತು. ಯಾವಾಗಲೂ ಸಿಡಿಮಿಡಿ. ಮೀಟಿಂಗ್‌ಗಳಲ್ಲಿ ಏನಾಕಾರಣ ಸಿಡಿದು ಬೀಳುತ್ತಿದ್ದ.



ರಾತ್ರಿ ನಿದ್ದೆಗೆಟ್ಟು ಕೆಲಸ ಮಾಡಿದರೆ ತಪ್ಪುಗಳು ಹೆಚ್ಚುತ್ತವೆ.

ಅವನ ವರ್ತನೆಯಲ್ಲಿ ತೀರಾ ಬದಲಾವಣೆ ಕಾಣಿಸಿದ್ದ ಕಾರಣ ವೈದ್ಯಕೀಯ ತನಿಖೆಗೆ ಕಳಿಸಲಾಗಿತ್ತು.

ವೈದ್ಯರ ಸಲಹೆಯಂತೆ ರಾಹುಲ್ ಪ್ರತಿದಿನ ಕಡ್ಡಾಯವಾಗಿ ಏಳು ಗಂಟೆಗಳ ಕಾಲ ನಿದ್ದೆ ಮಾಡತೊಡಗಿದ. ಅವನ ಕೆಲಸ, ವರ್ತನೆ ಗಣನೀಯವಾಗಿ ಸುಧಾರಿಸಿದವು. ಎಲ್ಲಕ್ಕಿಂತ ಹೆಚ್ಚಾಗಿ ಅವನ ಮಿದುಳು ಚುರುಕಾಗಿತ್ತು. 'ರಾತ್ರಿ ಎರಡು ಗಂಟೆಗೆ ಅಸಾಧ್ಯ ಎಂದೇ ತೋರುತ್ತಿದ್ದ ಸಮಸ್ಯೆಗಳು ಸಾಕಷ್ಟು ನಿದ್ದೆಯ ಬಳಿಕ ಮರುದಿನ ಮುಂಜಾನೆ ನಿಮಿಷಗಳಲ್ಲಿ ತಾವಾಗಿ ಪರಿಹಾರ ಕಂಡುಕೊಳ್ಳುತ್ತಿವೆ' ಎನ್ನುತ್ತಾನೆ ಈಗ.

ನಿದ್ದೆಗೆಟ್ಟು ಕೆಲಸ ಮಾಡುವುದರಿಂದ ಕಾರ್ಯಕ್ಷಮತೆ ಹೆಚ್ಚುತ್ತದೆ ಎಂಬ ಅಭಿಪ್ರಾಯ ತಪ್ಪು. ನಿದ್ದೆಗೆಟ್ಟು ಕೆಲಸ ಮಾಡಿದರೆ ಯೋಚನಾಶಕ್ತಿ ನಿಧಾನವಾಗುತ್ತದೆ, ಸ್ಮರಣಶಕ್ತಿ ಕಡಿಮೆಯಾಗುತ್ತದೆ, ನಿರ್ಧಾರ ತೆಗೆದುಕೊಳ್ಳುವ ಶಕ್ತಿ ಕುಗ್ಗುತ್ತದೆ. ಇದರಿಂದಾಗಿ ಕೆಲಸದ ಗುಣಮಟ್ಟ ತಗ್ಗುತ್ತದೆ, ತಪ್ಪುಗಳು ಹೆಚ್ಚಾಗುತ್ತವೆ.

ಹೈದರಾಬಾದ್‌ನ ಐಟಿ ಸಂಸ್ಥೆಯೊಂದು ಪ್ರಯೋಗಾರ್ಥವಾಗಿ ಸಿಬಂದಿಗಳಿಗೆ 'ಸ್ಲೀಪ್ ಟೈಮ್' ಸವಲತ್ತು ನೀಡಿತ್ತು. ಇದರ ಪ್ರಕಾರ ಸಾಫ್ಟ್‌ವೇರ್ ಕೋಡರ್ಸ್ ವಾರಕ್ಕೆ ಇಂತಿಷ್ಟು ಗಂಟೆ ಕೆಲಸ ಮಾಡಬೇಕು ಎಂದು ನಿಗದಿಪಡಿಸಿ, ಯಾವಾಗ ಎಷ್ಟು ಕೆಲಸ ಎನ್ನುವುದನ್ನು ಅವರಿಗೇ ಬಿಟ್ಟುಕೊಟ್ಟಿತ್ತು. ಈ ಪ್ರಯೋಗ ಆರಂಭವಾದ ಬಳಿಕ ವಾರದ ನಡುವೆ ಉತ್ಪಾದಕತೆಯ ಮಟ್ಟ ಗಣನೀಯವಾಗಿ ತಗ್ಗಿದ್ದು ಗಮನಕ್ಕೆ ಬಂತು. ಉದ್ಯೋಗಿಗಳು ಕೆಲಸ ಬೇಗನೆ ಮುಗಿಸಿ ಗೇಮಿಂಗ್, ನೆಟ್ ಸರ್ಫಿಂಗ್‌ನಲ್ಲಿ ಕಾಲ ಕಳೆಯುವ ಕಾರಣ ನಿದ್ದೆಯ ಸಮಯ ಕಡಿಮೆ ಮಾಡಿದ್ದಾರೆ ಎಂದು ತನಿಖೆಯ ವೇಳೆ ತಿಳಿಯಿತು. ಸಂಸ್ಥೆ 'ಸ್ಲೀಪ್ ಛಾಲೆಂಜ್' ಎಂಬ ಇನ್ನೊಂದು ಕಾರ್ಯಕ್ರಮ ಆರಂಭಿಸಿ, ಉದ್ಯೋಗಿಗಳು ಹೆಚ್ಚು ಹೊತ್ತು ವಿಶ್ರಾಂತಿ ತೆಗೆದುಕೊಳ್ಳುವಂತೆ ಪ್ರೇರೇಪಿಸಿತು. ಇದರಿಂದ ಕೆಲಸದ ಕಾರ್ಯಕ್ಷಮತೆ ತಕ್ಷಣ ಹೆಚ್ಚಾಯಿತು.

ಮನುಷ್ಯ ಒಂದು ರಾತ್ರಿ ನಿದ್ದೆಗೆಟ್ಟರೆ ಅವನ ಕಾರ್ಯಕ್ಷಮತೆ ಮದ್ಯಸೇವನೆಯಿಂದ ಮತ್ತೇರಿರುವ ವ್ಯಕ್ತಿಗೆ ಸಮನಾಗುತ್ತದೆ ಎಂದು ವಿಜ್ಞಾನ ಹೇಳುತ್ತದೆ. ನಿದ್ದೆಗೆಟ್ಟರೆ ಪ್ರತಿಕ್ರಿಯೆಯ ಸಮಯ ತಗ್ಗುತ್ತದೆ, ನೆನಪು ಕಡಿಮೆಯಾಗುತ್ತದೆ, ಏಕಾಗ್ರತೆ ಗಣನೀಯವಾಗಿ ಕುಗ್ಗುತ್ತದೆ. ಒಂದು ರಾತ್ರಿ ನಿದ್ದೆ ಬಿಟ್ಟರೆ ಮಿದುಳಿನಲ್ಲಿ ಅಲ್ಝೈಮರ್ ಕಾಯಿಲೆಯನ್ನು ಹೋಲುವ ಲಕ್ಷಣಗಳು ಕಾಣಿಸುತ್ತವೆ ಎಂದು ಇತ್ತೀಚೆಗೆ ಪ್ರಕಟವಾದ ಅಧ್ಯಯನ ಹೇಳುತ್ತದೆ.

U.A.S. LIBRARY

''ಎರಡು ದಿನ ನಿದ್ದೆಗೆಟ್ಟರೆ ಒಂದು ವಾರದ ಕೆಲಸ ಕೆಡುತ್ತದೆ'' ಎನ್ನುತ್ತಾರೆ ತಜ್ಞರು. ಕೆಲವು ದಿನಗಳ ನಿದ್ರಾಹೀನತೆಯಿಂದ ಮಾನಸಿಕ ಒತ್ತಡ ಹೆಚ್ಚುತ್ತದೆ, ರೋಗನಿರೋಧಕ ಶಕ್ತಿ ಕಡಿಮೆಯಾಗಿ ದೈಹಿಕ ತೊಂದರೆಗಳೂ ಎದುರಾಗುತ್ತವೆ.

ಇದು ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ. ನಿದ್ದೆಗೆಟ್ಟು ಓದಿದರೆ ಓದಿದ್ದಷ್ಟೇ ಬಂತು, ತಲೆಯಲ್ಲಿ ಮಾಹಿತಿ ಉಳಿದುಕೊಳ್ಳುವ ಸಾಧ್ಯತೆ ಕಡಿಮೆಯಾಗುತ್ತದೆ. ಯಾಕೆಂದರೆ ನಿದ್ದೆಗೇಡಿತನದಿಂದ ಮೊತ್ತಮೊದಲ ಹೊಡೆತ ಬೀಳುವುದು ಸ್ಮರಣಶಕ್ತಿಗೆ. ದಿನಕ್ಕೆ ಕನಿಷ್ಠ ಏಳು ಗಂಟೆಗಳ ನಿದ್ದೆ ಎಲ್ಲರಿಗೂ ಅತ್ಯಗತ್ಯ.

3 'ಪಿಂಗ್'ಗಳ ಸೆಳೆತ

ಮುಂಬಯಿಯಲ್ಲಿ ಫ್ರೀಲಾನ್ಸ್ ಕೆಲಸ ಮಾಡುತ್ತಿರುವ ಅನಿಕೇತ್ ದಿನಪೂರ್ತಿ ದುಡಿದರೂ ಅವನ ಕೆಲಸ ಮುಗಿಯುವುದೇ ಇಲ್ಲ

ಅವನ ಕೆಲಸ ಕೆಡಿಸುವುದು 'ಪಿಂಗ್'ಗಳು.

ಸ್ಮಾರ್ಟ್‌ಫೋನ್‌ನಲ್ಲಿರುವ ಆ್ಯಪ್‌ಗಳು, ವೆಬ್‌ಸೈಟ್‌ಗಳು ದಿನವಿಡೀ ಸಂದೇಶ, ಸುದ್ದಿ ಅಥವಾ ನೆನಪೋಲೆಗಳನ್ನು ಕಳಿಸುತ್ತವೆ. ಪ್ರತಿಯೊಂದು ಬಾರಿಯೂ ಮೊಬೈಲ್ ಸದ್ದು ಮಾಡುತ್ತದೆ. ಇದೇ 'ಪಿಂಗ್'.



ದಿನವಿಡೀ 'ಪಿಂಗ್' ಗಳ ಸೆಳೆತ.

ಕೆಲಸದ ನಡುವೆ ಸ್ಮಾರ್ಟ್‌ಫೋನ್‌ನಲ್ಲಿ ಪಿಂಗ್ ಕೇಳಿಸುತ್ತದೆ. ವಾಟ್ಸ್‌ಆ್ಯಪ್ ನಲ್ಲಿ ಏನೋ ಹೊಸ ಸಂದೇಶ ಬಂದಿದೆ ಎನ್ನುವ ಸೂಚನೆ ಇದು. ಕೇವಲ ಒಂದು ಸೆಕೆಂಡು ವಾಟ್ಸ್‌ಆ್ಯಪ್ ನೋಡಿಬಿಡೋಣ ಎಂದು ಅದನ್ನು ಕೈಗೆತ್ತಿಕೊಳ್ಳುತ್ತಾನೆ. ಪ್ರತಿಯೊಂದು ಬಾರಿಯೂ ವಾಟ್ಸ್‌ಆ್ಯಪ್ ಸಂದೇಶಗಳನ್ನು ನೋಡಿ ಮೊಬೈಲ್ ಕೆಳಗಿರಿಸುವಾಗ ಸರಾಸರಿ ಇಪ್ಪತ್ತು ನಿಮಿಷಗಳು ಕಳೆದಿರುತ್ತವೆ. ಒಂದೆರಡಲ್ಲ, ಪಿಂಗ್ ಕೇಳಿಸಿದಾಗಲೆಲ್ಲ ಇದೇ ರೀತಿ 'ವಾಟ್ಸ್ ಆ್ಯಪ್ ಚೆಕ್' ಮಾಡುವ ಚಟ. 'ಕೇವಲ ಒಂದು ಸೆಕೆಂಡು ಮಾತ್ರ' ಎಂದು ಸೆಳೆಯುವ ಆಮಿಷ.

ಮೊಬೈಲ್ ಪಿಂಗ್ ಆದಾಗಲೆಲ್ಲ ಅದೇನೆಂದು ನೋಡುವ ಕುತೂಹಲ ಎಲ್ಲರಿಗೂ ಇರುತ್ತದೆ. ಆದನ್ನು ನೋಡಲು ಕೆಲವು ಸೆಕೆಂಡುಗಳು ಮಾತ್ರ ಹೋಗಬಹುದು. ಆದರಿಂದ ಏನೂ ತೊಂದರೆ ಇಲ್ಲ ಎಂಬ ಧೈರ್ಯ. ಆದರೆ ಪ್ರತಿಯೊಂದು ಬಾರಿ ಮಿದುಳು ಅತ್ತ ಗಮನ ಹರಿಸಿದ ಬಳಿಕ ಕೈಯಲ್ಲಿ ಹಿಡಿದ ಕೆಲಸದತ್ತ ಪೂರ್ತಿ ಗಮನ ಕೇಂದ್ರೀಕರಿಸಲು ಕೆಲವು ನಿಮಿಷಗಳೇ ಹಿಡಿಯಬಹುದು.

'ಪಿಂಗ್'ಗಳನ್ನು ಮೌನವಾಗಿರಿಸಬೇಕು, ಪದೇ ಪದೇ ಅವುಗಳತ್ತ ಗಮನ ಹರಿಸುವ ಬದಲು ದಿನದಲ್ಲಿ ಇಂತಿಷ್ಟು ಸಮಯವನ್ನು ಮೊಬೈಲ್‌ನಲ್ಲಿ ಬರುವ ಸೂಚನೆಗಳನ್ನು ನೋಡಲು ನಿಗದಿಸಿದರೆ, ಮಹತ್ವದ ಕೆಲಸಕಾರ್ಯಗಳನ್ನು ಸಮಯದಲ್ಲಿ ನೆರವೇರಿಸಬಹುದು.

4 ಶಿಸ್ತಿನ ಕೊರತೆ

ದಿವ್ಯಾಂಕ್ ಪ್ರತಿಭಾವಂತ ವರದಿಗಾರ. ಎಲ್ಲರಿಗಿಂತ ಬೇಗ ಕೆಲಸ ಮುಗಿಸಬಲ್ಲ ನಿಷ್ಣಾತ. ಆದರೆ ಆತನ ಕೆಲಸ ಯಾವಾಗಲೂ ತಡವಾಗಿರುತ್ತದೆ.

ತಾನು ಕೆಲಸ ವೇಗವಾಗಿ ಮಾಡಬಲ್ಲೆ ಎಂಬ ನಂಬಿಕೆಯೇ ಆತನ ಕೆಲಸ ನಿಧಾನವಾಗಲು ಕಾರಣವಾಗುತ್ತದೆ. ಆತನು ವೇಗವಾಗಿಯೇ ಆರಂಭಿಸುತ್ತಾನೆ. ಕೆಲಸ ಮಾಡುತ್ತಿರುವ ನಡುವೆಯೇ 'ಒಮ್ಮೆ ಜಿ- ಮೇಲ್ ಚೆಕ್ ಮಾಡಬೇಕು, ಕೆಲಸ ಹೇಗೂ ಸಮಯದಲ್ಲಿ ಮುಗಿಯುತ್ತದೆ' , 'ಒಮ್ಮೆ ಇನ್‌ಸ್ಟಾಗ್ರಾಮ್ ತೆರೆದು ನೋಡುತ್ತೇನೆ' 'ಒಂದು ನಿಮಿಷ ದಿನದ ನ್ಯೂಸ್ ನೋಡಬೇಕು', 'ಈ ವಿಷಯವನ್ನೊಮ್ಮೆ ಗೂಗಲ್ ಮಾಡಿ ನೋಡಬೇಕು' ಎಂದು ಮನಸ್ಸು ಅತ್ತಿತ್ತ ಎಳೆಯುತ್ತಲೇ ಇರುತ್ತದೆ.



ಕೆಲಸದ ನಡುವೆ ವಾಟ್ಸ್‌ಆ್ಯಪ್ ನೋಡುವ ಗೀಳು ಶಿಸ್ತಿನ ಅಭಾವ ಕೆಲಸ ಕೆಡಿಸುತ್ತದೆ.

ಹೆಚ್ಚಿನ ಬಾರಿ ಕೆಲಸ ತಡವಾಗಲು ನಾವೇ ಕಾರಣರಾಗಿರುತ್ತೇವೆ. ದಿನವಿಡೀ ದುಡಿದರೆ ಅಥವಾ ವೇಗದಲ್ಲಿ ಕೆಲಸ ಮಾಡಿದರೆ ಸಾಲದು. ಕೆಲಸದಲ್ಲಿ ಪೂರ್ತಿ ಏಕಾಗ್ರತೆ ಇದ್ದರೆ ಮಾತ್ರ ಏನನ್ನಾದರೂ ಸಾಧಿಸಬಹುದು. ಒಂದು ಕೆಲಸ ಆರಂಭಿಸಿದ ಬಳಿಕ ಇಂತಿಷ್ಟು ಸಮಯದ ತನಕ ನಡುವೆ ಬೇರೆ ಯಾವುದೇ ವಿಷಯದತ್ತ ತಲೆ ಹರಿಸುವುದಿಲ್ಲ ಎಂಬ ಶಿಸ್ತು ಇದ್ದರೆ ಮಾತ್ರ ಕೆಲಸವನ್ನು ಪೂರ್ತಿ ಮಾಡಲು ಸಾಧ್ಯವಾಗುತ್ತದೆ.

5 ಪೂರ್ವ ಯೋಜನೆಯ ಅಭಾವ

ರಾಜು ನಲ್ಲಗೊಂಡ ಹೈದರಾಬಾದ್‌ನಲ್ಲಿ ಒಂದು ಸ್ಟಾರ್ಟ್‌ಅಪ್ ಕಂಪೆನಿ ಆರಂಭಿಸಿದ್ದಾನೆ. ಕೆಲಸದಲ್ಲಿ ಎಷ್ಟು 'ಬಿಜಿ' ಆಗಿರುತ್ತಾನೆ ಎಂದರೆ, ಮುಂಜಾನೆ ಯಾವಾಗ ಆರಂಭವಾಗುತ್ತದೆ, ಯಾವಾಗ ರಾತ್ರಿಯಾಗುತ್ತದೆ ಎಂದೇ ಅವನಿಗೆ ಅರಿವಾಗುವುದಿಲ್ಲ



ದಿನದ ಶೆಡ್ಯೂಲ್ ತಯಾರಿಸುತ್ತಿರುವ ಉದ್ಯಮಿ. ಕೆಲಸದ ಪೂರ್ವ ಯೋಜನೆ ಇದ್ದರೆ ಅದನ್ನು ನೆರವೇರಿಸುವುದು ಸುಲಭವಾಗುತ್ತದೆ.

UASB LIBRARY

ದಿನ ಆರಂಭವಾಗುತ್ತಲೇ ಒಂದರ ಹಿಂದೆ ಇನ್ನೊಂದು ಅರ್ಜೆಂಟ್ ಕೆಲಸಗಳು, ಸಮಸ್ಯೆಗಳು ಅವನತ್ತ ಬರುತ್ತವೆ. ಅವುಗಳನ್ನು ಬಗೆಹರಿಸುವುದರಲ್ಲಿ ಹೆಚ್ಚಿನ ಸಮಯ ಹೋಗುತ್ತದೆ. ಉಳಿದ ಸಮಯ ಈ-ಮೇಲ್‌ಗಳಿಗೆ ಉತ್ತರ ಕೊಡುವುದರಲ್ಲಿ ಕಳೆಯುತ್ತದೆ. ದಿನದ ಕೊನೆಯಲ್ಲಿ ಯಾವುದೇ ಮಹತ್ವದ ಕೆಲಸ ಅವನಿಂದ ಆಗಿರುವುದಿಲ್ಲ.

ಸ್ವಉದ್ಯೋಗಿಗಳು, ಉದ್ಯಮಿಗಳು ಎದುರಿಸುವ ದೊಡ್ಡ ಸಮಸ್ಯೆ ಎಂದರೆ ಪೂರ್ವ ಯೋಜನೆಯ ಕೊರತೆ. ಯಾವುದೇ ಪೂರ್ವಯೋಜನೆ ಇಲ್ಲದಿದ್ದರೆ ಪ್ರತಿಯೊಂದು ದಿನವೂ ಅನಗತ್ಯ ಕೆಲಸಗಳಲ್ಲೇ ನಷ್ಟವಾಗುತ್ತದೆ.

ಕೆಲಸ ಆರಂಭಿಸುವ ಮುನ್ನ ಪೂರ್ವಯೋಜನೆ ಇರಬೇಕು. ರಾತ್ರಿ ಮಲಗುವ ಮೊದಲೇ ಮರುದಿನದ ಯೋಜನೆ ತಯಾರಿಸಿದರೆ ಉತ್ತಮ. ದಿನದಲ್ಲಿ ಏನೇನು ಕೆಲಸ ಇದೆ, ಯಾವೆಲ್ಲ ಮಹತ್ವದ ಕೆಲಸಗಳನ್ನು ಮುಗಿಸಬೇಕು ಎಂಬ ವೇಳಾಪಟ್ಟಿ ಮಾಡಬೇಕು. ಮಹತ್ವದ ಕೆಲಸಗಳಿಗೆ ಇಂತಿಷ್ಟು ಸಮಯವನ್ನು ನಿಗದಿ ಮಾಡಬೇಕು. ಅದು ಮುಗಿದ ಬಳಿಕವೇ ಚಿಲ್ಲರೆ ಕೆಲಸಗಳತ್ತ ಗಮನ ಹರಿಸಬೇಕು. ಆಗ ಮಾತ್ರ ಪ್ರಗತಿ ಸಾಧ್ಯವಾಗುತ್ತದೆ.

6 ಪರಿಪೂರ್ಣತೆಯ ಹಂಬಲ

ಅಮರೇಂದ್ರ ಬಸು ಒಬ್ಬ ಫ್ರೀಲ್ಯಾನ್ಸ್ ಡಿಸೈನರ್. ಅತ ಒಬ್ಬ ಗ್ರಾಹಕರಿಗಾಗಿ ಕಂಪೆನಿ ಲೋಗೋ, ಆಹ್ವಾನ ಪತ್ರಿಕೆ ಇತ್ಯಾದಿಗಳನ್ನು ಡಿಸೈನ್ ಮಾಡುತ್ತಾನೆ. ಸಾಕಷ್ಟು ಅನುಭವಿ, ಉತ್ತಮ ಕಲಾಕಾರ ಕೂಡ. ಆದರೆ ಆತನಿಗೆ ಸುಲಭದಲ್ಲಿ ತೃಪ್ತಿ ಸಿಗುವುದಿಲ್ಲ. ತನ್ನ ಕೃತಿ ಪರಿಪೂರ್ಣವಾಗಿರಬೇಕು ಎಂದು ಯಾವಾಗಲೂ ಪ್ರಯತ್ನಿಸುತ್ತಾನೆ.

ಅದೇ ಅವನ ಸೋಲು ಕೂಡ.

ಅವನು ಆರು ಗಂಟೆಗಳಿಂದ ಒಂದು ಲೋಗೋ ತಯಾರಿಸುತ್ತಿದ್ದಾನೆ. ಉತ್ತಮವಾಗಿಯೇ ರೂಪುಗೊಂಡಿದೆ, ಆದರೆ ಅದಿನ್ನೂ ಪರಿಪೂರ್ಣವಾಗಿಲ್ಲ ಎಂದು ಅವನ ಕಳವಳ. ಅದನ್ನು ಮತ್ತೆ ಮತ್ತೆ ತಿದ್ದುತ್ತಿದ್ದಾನೆ.

ಸಾಮಾನ್ಯ ಡಿಸೈನರ್‌ಗಳು ಇಷ್ಟು ಸಮಯದಲ್ಲಿ ನಾಲ್ಕಾರು ಲೋಗೋ ತಯಾರಿಸುತ್ತಾರೆ. ಪರಿಪೂರ್ಣತೆಯ ಹಂಬಲ ಅಮರೇಂದ್ರನ ಕೆಲಸ ಕೆಡಿಸುತ್ತಿದೆ. ಆವನ ಕೆಲಸ ಯಾವಾಗಲೂ ತಡವಾಗುತ್ತದೆ, ಅವನಲ್ಲಿ ಪೂರ್ತಿಯಾಗದ ಕೆಲಸ ರಾಶಿ ಬಿದ್ದಿರುತ್ತದೆ.



ಪರಿಪೂರ್ಣತೆ ಎಲ್ಲರಿಗೂ ಇಷ್ಟ. ಆದರೆ ಅತಿಯಾದ ಪರಿಪೂರ್ಣತೆಯ ಹಂಬಲ ಯಶಸ್ಸಿಗೆ ಅಡ್ಡಿಯಾಗುತ್ತದೆ.

ನರೇಂದ್ರ ಜೂವಾ ಒಬ್ಬ ಆನ್‌ಲೈನ್ ಉದ್ಯಮಿ. ಅತ ತನಗಾಗಿ ಸ್ವತಃ ಒಂದು ವೆಬ್‌ಸೈಟ್ ತಯಾರಿಸುತ್ತಿದ್ದಾನೆ. ಕಳೆದ ಮೂರು ವರ್ಷಗಳಿಂದ ಈ ವೆಬ್‌ಸೈಟ್ ತಯಾರಾಗುತ್ತಲೇ ಇದೆ. ಅದು ಪೂರ್ತಿ 'ಪರ್ಫೆಕ್ಟ್' ಆಗುವ ತನಕ ಅದನ್ನು ಬಿಡುಗಡೆ ಮಾಡುವುದಿಲ್ಲ ಎಂಬ ಹಠ ನರೇಂದ್ರನಿಗೆ. ಆತನ ಜೊತೆಗೆ ಕಲಿತವರು ಈಗಾಗಲೇ ಹಲವಾರು ವೆಬ್ ಉದ್ಯಮಗಳನ್ನು ನಡೆಸಿ ಪಳಗಿದ್ದಾರೆ. ಆದರೆ ನರೇಂದ್ರ ಇನ್ನೂ ಪರಿಪೂರ್ಣತೆಗಾಗಿ ಕಾಯುತ್ತಿದ್ದಾನೆ.

ಪರಿಪೂರ್ಣತೆಯ ಬೆನ್ನು ಹತ್ತುವುದು ಮೈಗಳ್ಳತನದ ಇನ್ನೊಂದು ಮುಖ ಎನ್ನುತ್ತಾರೆ ತಜ್ಞರು. ಪರಿಪೂರ್ಣತೆ ಎನ್ನುವುದು ಒಂದು ಅಸಾಧ್ಯ ಕನಸು. ಯಾವುದೇ ಕೆಲಸ ಪರಿಪೂರ್ಣವಾಗಿರುವುದಿಲ್ಲ, ಕಲಾಕೃತಿಯಾಗಿರಲಿ, ಲೇಖನ, ಪ್ರಬಂಧವಾಗಿರಲಿ, ಕಸೂತಿ, ಹೊಸ ಅಡುಗೆ, ಹೊಸ ತಯಾರಿಕೆ, ಯಾವುದೇ ಸೃಷ್ಟಿಯಲ್ಲಿ ಒಂದಿಷ್ಟು ಲೋಪದೋಷಗಳು ಇದ್ದೇ ಇರುತ್ತವೆ. ಪರಿಪೂರ್ಣತೆಯ ತನಕ ಕಾದಿದ್ದರೆ ಅವು ಬೆಳಕಿಗೆ ಬರುವುದೇ ಇಲ್ಲ.

ಪರಿಪೂರ್ಣತೆಯ ಬೆನ್ನು ಹತ್ತಿದವರು ಕೊನೆಗೆ ಬೇಸತ್ತು, ಆ ಕೆಲಸವನ್ನು ಮುಂದೆ ತಳ್ಳುತ್ತಾರೆ, ಅಥವಾ ಅದನ್ನು ಬದಿಗಿರಿಸಿ ಬೇರೊಂದು ಕೆಲಸವನ್ನು ಕೈಗೆತ್ತಿಕೊಳ್ಳುತ್ತಾರೆ. ಇದು ವಿಳಂಬದ ಪ್ರವೃತ್ತಿಗೆ ಕಾರಣವಾಗುತ್ತದೆ. ಇವರ ಬಳಿ ಪೂರ್ಣವಾಗದ ಕೆಲಸಗಳು ರಾಶಿ ಬಿದ್ದಿರುತ್ತದೆ. ಕೊನೆಯಲ್ಲಿ ತುರ್ತಾಗಿ ಯಾವುದಾದರೂ ಕೆಲಸ ಮುಗಿಸಿಕೊಡಲೇ ಬೇಕೆಂಬ ಎಂಬ ಪರಿಸ್ಥಿತಿ ಬಂದರೆ ಅದರಲ್ಲಿ ಎಡವಟ್ಟಾಗಿ ಗುಣಮಟ್ಟ ಕೆಡುತ್ತದೆ.

ತಜ್ಞರು ಈ ಸಮಸ್ಯೆಯ ಪರಿಹಾರಕ್ಕಾಗಿ '೫೦. 80 ಪೂರ್ಣತೆ'ಯ ಉಪಾಯವನ್ನು ಸೂಚಿಸುತ್ತಾರೆ. ಯಾವುದೇ ಕೃತಿ ೫೦. 80ರಷ್ಟು ಸರಿಯಾಗಿದೆ ಎಂದು ನಿರ್ಧರಿಸಿದರೆ ಅದನ್ನು ಅಲ್ಲಿಗೇ ಮುಗಿಸಿ ಕೈತೊಳೆದುಕೊಳ್ಳುವುದು ಲೇಸು ಎನ್ನುತ್ತದೆ ಈ ತಂತ್ರ. ಯಾವುದೇ ಕೆಲಸ ಮುಗಿಸಿ ಒಪ್ಪಿಸಿದ ಬಳಿಕ ಅದರ ಪರಿಶೀಲನೆ ನಡೆಯುತ್ತದೆ, ಸುಧಾರಣೆಗೆ ಸೂಚನೆಗಳು ಸಿಗುತ್ತವೆ. ಲೋಪದೋಷಗಳನ್ನು ಆ ಮೇಲೆಯೂ ಸರಿಮಾಡಿಕೊಳ್ಳಬಹುದು.

'ತಡವಾದ ಪರಿಪೂರ್ಣತೆಗಿಂತ ಸತತ ಸುಧಾರಣೆಯೇ ಉತ್ತಮ' ಎಂದು ಮಾರ್ಕ್ ಟ್ವೈನ್ ಹೇಳಿದ್ದು ಅಕ್ಷರಶಃ ಸತ್ಯ.

7 ಡಿಜಿಟಲ್ ಓವರ್‌ಲೋಡ್

ನಟರಾಜನ್ ಚೆನ್ನೈಯಲ್ಲಿ ಒಂದು ರಾಷ್ಟ್ರೀಕೃತ ಬ್ಯಾಂಕ್ ಉದ್ಯೋಗಿ. ಮುಂಜಾನೆ ಸಮಯಕ್ಕೆ ಸರಿಯಾಗಿ ಹೊರಟು ತುಸು ತಡವಾಗಿ ಆಫೀಸು ತಲಪುತ್ತಾನೆ. ಆತನ ಕೌಂಟರ್ ಮುಂದೆ ಆದಾಗಲೇ ಗ್ರಾಹಕರು ಕ್ಯೂ ನಿಂತಿದ್ದಾರೆ.



ಎಷ್ಟೊಂದು ರೀಲ್‌ಗಳು. ಇವನ್ನೆಲ್ಲ ನೋಡಿ ಮುಗಿಸುವುದು ಯಾವಾಗ?

ನಟರಾಜನ್‌ಗೆ ಅವಸರ ಇಲ್ಲ. ಆರಾಮವಾಗಿ ವಾಶ್‌ರೂಮ್‌ಗೆ ಹೋಗಿ ಅಗತ್ಯದ ಕೆಲಸ ಮುಗಿಸಿಕೊಂಡು ತನ್ನ ಆಸನಕ್ಕೆ ಬರುತ್ತಾನೆ. ಆತನ ಕಂಪ್ಯೂಟರ್ ತೆರೆದುಕೊಳ್ಳಲು ಕೆಲವಾರು ನಿಮಿಷಗಳು ಹಿಡಿಯುತ್ತವೆ. ಅಷ್ಟರಲ್ಲಿ ವಾಟ್ಸ್‌ಆ್ಯಪ್ ತೆರೆದು ಆ ದಿನವಷ್ಟೇ ಗೆಳೆಯ ಶ್ರೀಧರನ್ ಕಳಿಸಿದ್ದ ವಿಡಿಯೋ ನೋಡುತ್ತಾನೆ. ತಮಾಷೆಯ ಆರು ನಿಮಿಷದ ವಿಡಿಯೋ. ಅದನ್ನು ವಾಟ್ಸ್‌ಆ್ಯಪ್‌ನಲ್ಲಿ ಗೆಳೆಯರೊಡನೆ ಹಂಚಿಕೊಳ್ಳುತ್ತಾನೆ. ಅವನ ಮುಂದೆ ಗ್ರಾಹಕರ ಕ್ಯೂ ಇನ್ನಷ್ಟು ಉದ್ದ ಬೆಳೆದಿರುತ್ತದೆ. ಆದರೆ ನಟರಾಜನ್ ಈಗಾಗಲೇ ದಣಿದಿದ್ದಾನೆ. ಕೆಲಸ ಮಾಡುವ ಉತ್ಸಾಹ ಕಳೆದುಕೊಂಡಿದ್ದಾನೆ.

ವಾಟ್ಸ್‌ಆ್ಯಪ್ ಮಾರ್ಗದಲ್ಲಿ ಬರುವ ವಿಡಿಯೋಗಳ ಆಕರ್ಷಣೆಯೇ ಹೀಗಿರುತ್ತದೆ. ಹತ್ತಾರು ನಿಮಿಷಗಳ ಅವಧಿಯ ಅಗತ್ಯವಿಲ್ಲದ ಸುದ್ದಿ ಪ್ರವಚನ ಅಥವಾ ತಮಾಷೆಯ ರೀಲ್. ವಾಟ್ಸ್‌ಆ್ಯಪ್‌ನಲ್ಲಿ ಬಂದಾಗ ಅದನ್ನು ತತ್‌ಕ್ಷಣ ನೋಡಲೇ ಬೇಕೆಂಬ ತವಕ.

ವಾಟ್ಸ್‌ಆ್ಯಪ್ ವಿಡಿಯೋಗಳು, ಯೂ ಟ್ಯೂಬ್ ಶಾರ್ಟ್‌ಗಳು, ಇನ್‌ಸ್ಟಾಗ್ರಾಮ್ ರೀಲ್ಸ್... ಹೀಗೆ ಸ್ಮಾರ್ಟ್‌ಫೋನ್ ಬೆನ್ನೇರಿ ಜಾಲತಾಣದಲ್ಲಿ ಬರುವ ಅನಗತ್ಯದ, ತಮಾಷೆಯ, ತಲೆ ಹರಟೆಯ ಡಿಜಿಟಲ್ ಮಾಹಿತಿಗಳಿಗೆ ಕೊನೆಯೇ ಇಲ್ಲ. ಇವುಗಳಲ್ಲಿ ಎಲ್ಲಕ್ಕಿಂತ ಹೆಚ್ಚು ಸಮಯ ಕಳೆಯುವವರು ಭಾರತೀಯರು ಎನ್ನುತ್ತದೆ ಒಂದು ಅಧ್ಯಯನ.

UASB LIBRARY

ರೀಲ್ಸ್ ನೋಡುವ ಈ ಚಟ ಏಕಾಗ್ರತೆಯನ್ನು ಕೆಡಿಸುತ್ತದೆ, ಮಾನಸಿಕ ದಣಿವನ್ನು ಹೆಚ್ಚಿಸುತ್ತದೆ ಎನ್ನುತ್ತಾರೆ ತಜ್ಞರು. ಸುಮ್ಮನೆ ಕುಳಿತು ತಮಾಷೆಯ ರೀಲ್ಸ್ ನೋಡುವುದರಿಂದ ಮನಸ್ಸಿಗೆ ಆರಾಮ ಸಿಗುತ್ತದೆ ಎಂಬ ತಪ್ಪು ಭಾವನೆ ಇದೆ. ಆದರೆ ವಾಸ್ತವದಲ್ಲಿ ರೀಲ್ಸ್‌ಗಳು ಮಿದುಳನ್ನು ಉತ್ತೇಜಿಸುತ್ತವೆ. ಈ ಉತ್ತೇಜನದ ಕೊನೆಗೆ ಮಿದುಳು ದಣಿದಿರುತ್ತದೆ, ಕೆಲಸ ಮಾಡುವ ಆಸಕ್ತಿ ಕಡಿಮೆಯಾಗುತ್ತದೆ.

ರೀಲ್ಸ್ ನೋಡುವ ಕಾರ್ಯಕ್ರಮವನ್ನು ದಿನದ ಕೊನೆಯಲ್ಲಿ ಇರಿಸಿಕೊಂಡರೆ ಕೆಲಸದಲ್ಲಿ ಹೆಚ್ಚು ಗಮನ ಇರಿಸಲು ಸಾಧ್ಯ ಎಂಬುದು ತಜ್ಞರ ಸಲಹೆ.

8 ಅನಗತ್ಯ ಮೀಟಿಂಗ್‌ಗಳು

ಮುಂಬಯಿಯ ಒಂದು ಐಟಿ ಸಂಸ್ಥೆಯ ಪ್ರಾಜೆಕ್ಟ್ ತಂಡ ಪ್ರತಿದಿನ ಸ್ಟೇಟಸ್ ಮೀಟಿಂಗ್ ನಡೆಸುತ್ತಿತ್ತು. ಸಿಬಂದಿಗಳ ಅಧಿಕಾಂಶ ಸಮಯ ಮೀಟಿಂಗ್‌ಗಳಲ್ಲಿ ಮತ್ತು ಅದಕ್ಕೆ ತಯಾರಿಯಲ್ಲಿ ಕಳೆಯುತ್ತಿತ್ತು. ಮೀಟಿಂಗ್‌ನಲ್ಲಿ ವ್ಯಯವಾಗುವ ಸಮಯದಲ್ಲಿ ಹೆಚ್ಚು ಕೆಲಸ ಮಾಡಲು ಸಾಧ್ಯವಿತ್ತು. ಸಂಸ್ಥೆ ನಡೆಸಿದ್ದ ಅಧ್ಯಯನದ ಪ್ರಕಾರ ಪ್ರತಿ ತಿಂಗಳಲ್ಲಿ ಒಂದು ವಾರದ ಸಮಯ ಕೇವಲ ಮೀಟಿಂಗ್‌ನಲ್ಲಿ ವ್ಯಯವಾಗುತ್ತಿತ್ತು.



ಶೇ. 80ರಷ್ಟು ಆಫೀಸ್ ಮೀಟಿಂಗ್‌ಗಳು ಅನಗತ್ಯ ಎನ್ನುತ್ತದೆ ಮೈಕ್ರೋಸಾಫ್ಟ್ ಸಮೀಕ್ಷೆ.

ಮೀಟಿಂಗ್ ನಡೆಸುವ ಬದಲು ಆನ್‌ಲೈನ್‌ನಲ್ಲಿ ದೈನಂದಿನ ವರದಿ ಒಪ್ಪಿಸಿ, ಪ್ರತಿಕ್ರಿಯೆ ಪಡೆಯಲು ಸಾಧ್ಯವಿದೆ ಎಂಬ ಸೂಚನೆಯನ್ನು ಕಾರ್ಯರೂಪಕ್ಕೆ ತಂದ ಬಳಿಕ ಈ ತಂಡ ಹೆಚ್ಚು ಸಕ್ರಿಯವಾಯಿತು.

ಮೈಕ್ರೋಸಾಫ್ಟ್ ಸಂಸ್ಥೆ ನಡೆಸಿದ್ದ ಒಂದು ಅಧ್ಯಯನದ ಪ್ರಕಾರ ಪ್ರತಿವಾರ ಕಚೇರಿಗಳಲ್ಲಿ ನಡೆಯುವ ಮೀಟಿಂಗ್‌ಗಳಲ್ಲಿ ಶೇ. 80 ಅಗತ್ಯವಿಲ್ಲದವು. ಇದನ್ನು ನಿವಾರಿಸಿದರೆ ಕಾರ್ಯಕ್ಷಮತೆಯಲ್ಲಿ ಶೇ. 40ರಷ್ಟು ಹೆಚ್ಚಳವಾಗುತ್ತದೆ.

ಪ್ರತಿಯೊಂದು ಮೀಟಿಂಗ್‌ನಲ್ಲಿ ಎಲ್ಲರೂ ಕಡ್ಡಾಯವಾಗಿ ಪಾಲ್ಗೊಳ್ಳದೇ ಕಲಾಪಕ್ಕೆ ಸಂಬಂಧಿಸಿದ ವ್ಯಕ್ತಿಗಳು ಮಾತ್ರ ಭಾಗವಹಿಸಬೇಕು. ಮೀಟಿಂಗ್‌ನಲ್ಲಿ ನಿರ್ದಿಷ್ಟ ಕಾರ್ಯಕಲಾಪಗಳ ಪಟ್ಟಿಯನ್ನು ಮೊದಲೇ ನಿಗದಿಪಡಿಸಿರಬೇಕು. ಇದರಿಂದ ಸಮಯ ವ್ಯಯವಾಗುವುದು ತಪ್ಪುತ್ತದೆ ಎಂಬುದು ತಜ್ಞರ ಸಲಹೆ.

9 ಆಫೀಸ್ ಹರಟೆ

ಸುಂದರರಾಜನ್ ಅರ್ಧ– ಮುಕ್ಕಾಲು ಗಂಟೆಗೊಮ್ಮೆ ಎದ್ದು ಆಫೀಸಿನ ಕೂಲರ್ ಬಳಿ ನೀರು ಕುಡಿಯಲು ಹೋಗುತ್ತಾನೆ. ಅಲ್ಲಿ ಇನ್ನಿಬ್ಬರು, ಮೂವರು ಸೇರಿ ಹರಟೆ ಹೊಡೆಯುತ್ತಾರೆ. ಆಫೀಸು ರಾಜಕೀಯ, ಗಾಸಿಪ್, ಬಿಸಿ ಸಮಾಚಾರ ಇತ್ಯಾದಿಗಳಲ್ಲಿ ಹತ್ತಾರು ನಿಮಿಷಗಳು ವ್ಯಯವಾಗುತ್ತವೆ.

ದಿನಕ್ಕೆ ಹತ್ತು ಬಾರಿ ಕೂಲರ್ ಭೇಟಿ ಒಂದೂವರೆ ಗಂಟೆ ನಷ್ಟ ಮಾಡುತ್ತದೆ. ಹೀಗಾಗಿ ಸಂಜೆ ಕಳೆದು ರಾತ್ರಿಯಾದರೂ ಆತನ ಕೆಲಸ ಮುಗಿದಿರುವುದಿಲ್ಲ.



ಆಫೀಸ್ ಹರಟೆ, ಗಾಸಿಪ್ ದಿನದ ಅಧಿಕಾಂಶ ಸಮಯ ಹಾಳು ಮಾಡುತ್ತವೆ.

10 ಜಂಕ್ ಫುಡ್

ರೀನಾ ಚಾಧವ್ ಬೆಳಗ್ಗಿನ ಚಹಾದ ಜೊತೆಗೆ ಕ್ರೀಮ್ ಚೀಸ್ ತಿಂದು ಆಫೀಸಿಗೆ ಬರುತ್ತಾಳೆ. ದಿನದ ನಡುವೆ ಉತ್ಸಾಹ ಕುಸಿದಾಗ ಕಾಫಿ ಕುಡಿಯುತ್ತಾಳೆ. ಮಧ್ಯಾಹ್ನ ದೊಡ್ಡ ತುಂಡು ಪಿಜ್ಜಾದಲ್ಲಿ ಹೊಟ್ಟೆ ತುಂಬಿಸಿಕೊಳ್ಳುತ್ತಾಳೆ.

ಮಧ್ಯಾಹ್ನ ಎರಡು ಗಂಟೆಯ ವೇಳೆಗೆ ಕಂಪ್ಯೂಟರ್ ಮುಂದೆ ಕುಳಿತು ಈ –ಮೇಲ್ ನೋಡುವಾಗ ಆಕ್ಷರಗಳು ಮಂಜಾಗುತ್ತವೆ. ಆವಳ ಮಿದುಳು ಜಡವಾಗಿದೆ, ಉತ್ಸಾಹ ತಗ್ಗಿದೆ, ಕಣ್ಣುಗಳು ಭಾರವಾಗುತ್ತಿವೆ. ಈ – ಮೇಲ್‌ನ ಶಬ್ದಗಳು ಗೋಜಲಾಗಿ ಕಾಣಿಸುತ್ತವೆ. ನಿದ್ದೆ ದೂರವಾಗಿರಿಸಲು ಮೂರನೆಯ ಬಾರಿ ಕಾಫಿ ಕುಡಿಯುತ್ತಾಳೆ...

ರಾಜೀವ್ ಮಹಂತ್‌ಗೆ ಮುಂಜಾನೆ ಉಪಾಹಾರ ತೆಗೆದುಕೊಳ್ಳಲು ಸಮಯ ಇಲ್ಲ, ಆಫೀಸಿಗೆ ಬಂದು ವಡಾಪಾವ್ ತಿನ್ನುತ್ತಾನೆ. ತಲೆ ಚುರುಕಾಗಿಸಲು ಹಲವು ಬಾರಿ ಕಾಫಿ ಕುಡಿಯುತ್ತಾನೆ. 11.30ಕ್ಕೆ ಅವನಿಗೆ ತಲೆನೋವು ಆರಂಭವಾಗುತ್ತದೆ. ಕಂಪ್ಯೂಟರ್ ಮುಂದೆ ಏಕಾಗ್ರತೆ ಕಾಯ್ದುಕೊಳ್ಳಲು ಸಾಧ್ಯವಾಗುತ್ತಿಲ್ಲ, ಯಾರಾದರೂ ಮಾತನಾಡಿಸಿದರೆ ಸಿಡಿಮಿಡಿಯಿಂದ ಉರಿದುಬೀಳುತ್ತಾನೆ.

ರಾಜೀವ್ ಸಿನ್ಹಾ ರಾತ್ರಿ ತಡವಾಗಿ ಕೆಲಸ ಮಾಡುತ್ತಾನೆ. ಚಿಪ್ಸ್ ಮತ್ತು ಕೋಲಾ ಆತನ ಆಹಾರ. ತಿಂದಾಗ ತುರ್ತಾಗಿ ಚೈತನ್ಯ ಬಂದಂತೆ ಅನ್ನಿಸುತ್ತದೆ. ಆದರೆ ಮುಕ್ಕಾಲು ಗಂಟೆಯೊಳಗೆ ಎಲ್ಲ ಉತ್ಸಾಹ ಜರ್ರನೆ ನೆಲಕ್ಕಿಳಿಯುತ್ತದೆ. ಮಿದುಳು ಜಡವಾಗುವ ಕಾರಣದಿಂದ ಹತ್ತು ನಿಮಿಷಗಳಲ್ಲಿ ಮುಗಿಯಬೇಕಾದ ಕೆಲಸ ಗಂಟೆ ಕಳೆದರೂ ಪೂರ್ತಿಯಾಗುವುದಿಲ್ಲ.



ಜಂಕ್‌ಫುಡ್: ಮಂಕು ಬುದ್ಧಿ, ಜಾಡ್ಯಕ್ಕೆ ಆಹ್ವಾನ.

ಮಿದುಳು, ದೇಹ ಸಮರ್ಪಕವಾಗಿ ಕೆಲಸ ಮಾಡಲು ಪೌಷ್ಟಿಕಾಂಶಗಳು ಬೇಕು. ದಿನದ ಆರಂಭದಲ್ಲಿ ದೇಹಕ್ಕೆ ಸಾಕಷ್ಟು ಪ್ರೊಟೀನ್ ಮತ್ತು ಜೀವಸತ್ವಗಳಿರುವ ಆಹಾರ ಬೇಕು. ಪೌಷ್ಟಿಕಾಂಶಗಳ ಕೊರತೆಯಾದರೆ ದೈಹಿಕ ಶಕ್ತಿ ಕುಗ್ಗುತ್ತದೆ, ಮಿದುಳಿನ ಕೆಲಸದಲ್ಲಿ ನ್ಯೂನತೆ ಉಂಟಾಗುತ್ತದೆ, ರೋಗನಿರೋಧಕ ಶಕ್ತಿ ಕೂಡ ಕುಗ್ಗುತ್ತದೆ.

ತಜ್ಞರ ಪ್ರಕಾರ ಪೌಷ್ಟಿಕಾಂಶಗಳ ಕೊರತೆಯಿಂದ ದಣಿವು, ಮಾನಸಿಕ ಗೊಂದಲ ಮತ್ತು ಖಿನ್ನತೆ ಬರುತ್ತದೆ. ಇದರಿಂದಾಗಿ ಕಾರ್ಯಕ್ಷಮತೆ ಶೇ. 25–30ರಷ್ಟು ತಗ್ಗುತ್ತದೆ.

ಜಂಕ್ ಫುಡ್, ಸಿಹಿ ಪೇಯ ಮುಂತಾದ ಅನಾರೋಗ್ಯಕರ ಆಹಾರ ಸೇವಿಸುವವರಲ್ಲಿ ಶೇ. 70ರಷ್ಟು ಸಿಬಂದಿಗಳ ಕಾರ್ಯಕ್ಷಮತೆ ತಗ್ಗುತ್ತದೆ ಎಂದು ಅಧ್ಯಯನಗಳು ತಿಳಿಸುತ್ತವೆ.

UASBLIBRARY



UASB LIBRARY

ಬೇಸಿಗೆಯ ಧಗೆಯನ್ನು ನೀಗಿಸುವ, ಗ್ಯಾಸಿನ ಮುಂದೆ ನಿಲ್ಲುವ ತಾಪವನ್ನೂ ಬಗೆಹರಿಸುವ, ಸಿಲಿಂಡರ್ ಮೇಲಿನ ಅವಲಂಬನೆ ಕಡಿಮೆ ಮಾಡುವ ವ್ಯಂಜನಗಳ ವಿವರ ಇಲ್ಲಿದೆ.



UASB LIBRARY

ಬೆಂಕಿ ರಹಿತ ಅಡುಗೆ

■ ವಿಭಾ

ಈಬಿರು ಬೇಸಿಗೆಯಲ್ಲಿ ತಂಪಾದ ಆಹಾರದ ಜೊತೆಗೆ ಗ್ಯಾಸ್ ಸಿಲಿಂಡರ್‌ನ ಅಭಾವದಲ್ಲಿ ಬೆಂಕಿಯ ಅಗತ್ಯವೇ ಇಲ್ಲದ ಅಡುಗೆ ಹಾಗೂ ಕಡಿಮೆ ಬೆಂಕಿ ಬಳಸಿ ಮಾಡುವ ಕೆಲವು ಅಡುಗೆ ಪದಾರ್ಥಗಳ ಪರಿಚಯ ಇಲ್ಲಿವೆ. ಇವೆಲ್ಲ ಬೇಸಿಗೆಗೆ ತಂಪು, ದೇಹಕ್ಕೆ ಹಿತ ಹಾಗೂ ಗ್ಯಾಸ್ ಉಳಿತಾಯದ ಮಾರ್ಗಗಳೂ ಹೌದು.

ಬೆಂಕಿ ರಹಿತ ಪದಾರ್ಥಗಳು

ಟೊಮ್ಯಾಟೊ ಕೈ ಗೊಜ್ಜು

ಸಾಮಗ್ರಿ: ಟೊಮ್ಯಾಟೊ 1, ಈರುಳ್ಳಿ 1, ಹಸಿಮೆಣಸಿನ ಕಾಯಿ 2, ಕೊತ್ತಂಬರಿ ಸೊಪ್ಪು ಸ್ವಲ್ಪ, ಉಪ್ಪು ರುಚಿಗೆ ತಕ್ಕಷ್ಟು, ಹುಣಸೆ ರಸ 3 ಚಮಚ, ಬೆಲ್ಲ 2 ಚಮಚ.

ವಿಧಾನ: ಮೇಲಿನ ಎಲ್ಲ ಸಾಮಗ್ರಿಗಳನ್ನೂ ಸಣ್ಣಗೆ ಹೆಚ್ಚಿ ಒಂದು ಪಾತ್ರೆಗೆ ಹಾಕಿ. ಅದಕ್ಕೆ ಹುಣಸೆ ರಸವನ್ನು ಸೇರಿಸಿ, ಎರಡು ಲೋಟ ನೀರು ಸೇರಿಸಿ. ಉಪ್ಪು ಬೆಲ್ಲ ಹಾಕಿ. ಇದು ಅನ್ನಕ್ಕೆ ಚೆನ್ನಾಗಿರುತ್ತದೆ.



ಪಾನೀಯಗಳು

ಹೆಸರುಕಾಳಿನ ಹಣಿ

ಸಾಮಗ್ರಿ: ಹೆಸರು ಕಾಳು ಅರ್ಧ ಕಪ್, ಬೆಲ್ಲ 4 ಚಮಚ, ಉಪ್ಪು ಚಿಟಿಕೆ, ಏಲಕ್ಕಿ ಚಿಟಿಕೆ.

ವಿಧಾನ: ಹೆಸರು ಕಾಳನ್ನು ಚೆನ್ನಾಗಿ ತೊಳೆದು ನಯಸ್ಸಾಗಿ ರುಬ್ಬಬೇಕು. ನಂತರ ಅದನ್ನು ಸೋಸಿ, ಅದಕ್ಕೆ ಸಾಕಷ್ಟು ಪ್ರಮಾಣದಲ್ಲಿ ನೀರು ಹಾಕಿ, ಬೆಲ್ಲ, ಉಪ್ಪು, ಏಲಕ್ಕಿ ಸೇರಿಸಿದರೆ ಹೆಸರುಕಾಳಿನ ಹಣಿ ತಯಾರು. ಬೇಕಿದ್ದರೆ ಅರ್ಧ ಲೋಟ ಹಾಲನ್ನೂ ಇದಕ್ಕೆ ಸೇರಿಸಬಹುದು. ಈ ಬೇಸಿಗೆಗೆ ದೇಹಕ್ಕೆ ತಂಪು ಹಾಗೂ ದೇಹವನ್ನು ಸದೃಢಗೊಳಿಸುತ್ತದೆ. ಇದನ್ನು ಬಿಳಿಗ್ಗೆ ಕುಡಿದ ಮೇಲೆ ಮತ್ತೆ ತಿಂಡಿ ಬೇಕೆನಿಸುವುದಿಲ್ಲ.

ಎಳ್ಳು ಹಣಿ

ಸಾಮಗ್ರಿ: ಎಳ್ಳು ಅರ್ಧ ಕಪ್, ನೀರು 3 ಲೋಟ, ಬೆಲ್ಲ 4 ಚಮಚ, ಉಪ್ಪು ಚಿಟಿಕೆ.

ವಿಧಾನ: ಎಳ್ಳನ್ನು ಚೆನ್ನಾಗಿ ತೊಳೆದು ಒಂದು ತಾಸು ನೆನೆಸಿಡಿ. ನಂತರ ಇದನ್ನು ನುಣ್ಣಗೆ ರುಬ್ಬಿ ಒಂದು ಪಾತ್ರೆಗೆ ಹಾಕಿ. ಈ ಮಿಶ್ರಣಕ್ಕೆ ನೀರು ಮತ್ತು ಬೆಲ್ಲ, ಉಪ್ಪು ಸೇರಿಸಿದರೆ ರುಚಿಕಟ್ಟಾದ ಎಳ್ಳು ಹಣಿ ಸಿದ್ಧ. ಅಧಿಕ ಪ್ರಮಾಣದಲ್ಲಿ ಕ್ಯಾಲ್ಸಿಯಂಯುಕ್ತ ಈ ಎಳ್ಳಿನ ಪಾನಕ ದೇಹಕ್ಕೆ ಹಿತ ಹಾಗೂ ಶಕ್ತಿ ಎರಡನ್ನೂ ಕೊಡುತ್ತದೆ.

ರಾಗಿ ಹಣಿ

ಸಾಮಗ್ರಿ: ರಾಗಿ ಕಾಳು ಒಂದು ಕಪ್, ಬೆಲ್ಲ, ಸಿಹಿಗೆ ತಕ್ಕಷ್ಟು, ಉಪ್ಪು ಚಿಟಿಕೆ. ನೀರು ಐದಾರು ಲೋಟ.

ವಿಧಾನ: ರಾಗಿಯನ್ನು ಎರಡು ತಾಸು ನೆನೆಸಿಟ್ಟು ನಂತರ ಅದನ್ನು ನಯಸ್ಸಾಗಿ ರುಬ್ಬಿ ಸೋಸಿ. ಸೋಸಿದ ರಾಗಿ ಹಿಟ್ಟಿಗೆ ನೀರು ಮತ್ತು ಬೆಲ್ಲ, ಉಪ್ಪು ಸೇರಿಸಿ. ದೇಹಕ್ಕೆ ತಂಪು ಮತ್ತು ಶಕ್ತಿ ಎರಡನ್ನೂ ಕೊಡುವ ಈ ಪಾನಕ ಈ ಬೇಸಿಗೆಗೆ ಹೇಳಿ ಮಾಡಿಸಿದ ಪಾನಕ. ಜೊತೆಗೆ ಬೆಳಗಿನ ಹೊತ್ತು ಇದನ್ನು ಕುಡಿದರೆ ಬ್ರೇಕ್‌ಫಾಸ್ಟ್‌ನ ಅಗತ್ಯವೂ ಇರುವುದಿಲ್ಲ.

ಟೊಮ್ಯಾಟೊ, ಈರುಳ್ಳಿ ಹಶಿ

ಸಾಮಗ್ರಿ: ಟೊಮ್ಯಾಟೊ 1, ಈರುಳ್ಳಿ 1, ಹಸಿಮೆಣಸಿನಕಾಯಿ 1, ತೆಂಗಿನ ತುರಿ ಅರ್ಧ ಕಪ್, ಗಟ್ಟಿ ಮೊಸರು ಅರ್ಧ ಕಪ್, ಕೊತ್ತಂಬರಿ ಸೊಪ್ಪು 2 ಕಡ್ಡಿ, ರುಚಿಗೆ ತಕ್ಕಷ್ಟು ಉಪ್ಪು.

ವಿಧಾನ: ಟೊಮ್ಯಾಟೊ, ಈರುಳ್ಳಿ, ಹಸಿಮೆಣಸಿನಕಾಯಿ ಮತ್ತು ಕೊತ್ತಂಬರಿ ಸೊಪ್ಪುಗಳನ್ನು ಸಣ್ಣದಾಗಿ ಹೆಚ್ಚಿಕೊಳ್ಳಿ. ಈ ಮಿಶ್ರಣಕ್ಕೆ ಹಸಿ ತೆಂಗಿನ ತುರಿಯನ್ನು ರುಬ್ಬಿ ಹಾಕಿ. ರುಚಿಗೆ ತಕ್ಕಷ್ಟು ಉಪ್ಪು ಹಾಕಿ. ಅರ್ಧ ಕಪ್ ಮೊಸರನ್ನು ಸೇರಿಸಿದರೆ ರುಚಿಕಟ್ಟಾದ ಟೊಮ್ಯಾಟೊ ಹಶಿ ರೆಡಿ.

ಚಕ್ರಮುನಿ ಸೊಪ್ಪಿನ ಸಲಾಡ್

ಸಾಮಗ್ರಿ: ಚಕ್ರಮುನಿ ಸೊಪ್ಪು ಒಂದು ಹಿಡಿ, ಕ್ಯಾರೆಟ್ 1, ನೌವಿಲು ಕೋಸು ಅಥವಾ ಮೂಲಂಗಿ ಅರ್ಧ, ಉಪ್ಪು ರುಚಿಗೆ, ಹಸಿಮೆಣಸಿನಕಾಯಿ 1, ನಿಂಬೆ ರಸ ಅರ್ಧ ಚಮಚ.

ವಿಧಾನ: ಚಕ್ರಮುನಿ

ಟೊಮ್ಯಾಟೊ, ಈರುಳ್ಳಿ ಹಶಿ



ಮುರುಗಲು ಸಿಪ್ಪೆ ಪಾನಕ (ಕೋಕಂ)

ಸಾಮಗ್ರಿ: ಮುರುಗಲು ಸಿಪ್ಪೆ 5–6, ನೀರು 4 ಲೋಟ, ಉಪ್ಪು ಚಿಟಿಕೆ, ಬೆಲ್ಲ ಸಿಹಿಗೆ ತಕ್ಕಷ್ಟು, ಜೀರಿಗೆ ಮತ್ತು ಕಾಳು ಮೆಣಸಿನ ಪುಡಿ ತಲಾ ಕಾಲು ಚಮಚ.

ವಿಧಾನ: ಮುರುಗಲು ಸಿಪ್ಪೆಯನ್ನು ಎರಡು ಗಂಟೆ ನೆನಸಿಡಿ. ನೆನೆಸಿಟ್ಟ ಈ ನೀರಿಗೆ ಉಪ್ಪು ಬೆಲ್ಲ, ಜೀರಿಗೆ, ಕಾಳು ಮೆಣಸಿನ ಪುಡಿಗಳನ್ನು ಸೇರಿಸಿದರೆ ಮುರುಗಲು ಸಿಪ್ಪೆ ಪಾನಕ ಸಿದ್ಧ. ಮಾರುಕಟ್ಟೆಯಲ್ಲಿ ಕೋಕಂ ಜ್ಯೂಸ್ ಕೂಡ ಸಿಗುತ್ತದೆ. ಇದು ಪಿತ್ತನಾಶಕ ಹಾಗೂ ದೇಹದ ಉಷ್ಣತೆಯನ್ನು ಕಡಿಮೆ ಮಾಡುತ್ತದೆ. ಹಾಗಾಗಿ ಬೇಸಿಗೆಯಲ್ಲಿ ದಿನಕ್ಕೊಮ್ಮೆಯಾದರೂ ಕುಡಿದರೆ ಉತ್ತಮ.

UASB LIBRARY

ಸೊಪ್ಪನ್ನು ಸಣ್ಣದಾಗಿ ಹೆಚ್ಚಿಕೊಳ್ಳಿ. ಕ್ಯಾರೆಟ್, ನವಿಲುಕೋಸು/ಮೂಲಂಗಿಗಳನ್ನು ತುರಿದು ಚಕ್ರಮುನಿ ಸೊಪ್ಪಿಗೆ ಹಾಕಿ. ಹಸಿಮೆಣಸಿನಕಾಯಿಯನ್ನು ನುರಿದು, ಉಪ್ಪು, ನಿಂಬೆ ರಸ ಸೇರಿಸಿ. ಇದು ಚಪಾತಿ, ರೊಟ್ಟಿ, ದೋಸೆಗೂ ಒಳ್ಳೆ ಕಾಂಬಿನೇಶನ್.

ಕಡಲೆ ಕಾಳು ಸಲಾಡ್

ಸಾಮಗ್ರಿ: ಕಡಲೆ ಕಾಳು ಅರ್ಧ ಕಪ್, ಈರುಳ್ಳಿ 1, ನಿಂಬೆ ರಸ ಅರ್ಧ ಚಮಚ, ಟೊಮ್ಯಾಟೊ 1, ಕೊತ್ತಂಬರಿ ಸೊಪ್ಪು ಸ್ವಲ್ಪ, ಉಪ್ಪು ರುಚಿಗೆ. ಹಸಿಮೆಣಸಿನ ಕಾಯಿ 1.

ವಿಧಾನ: ಕಡಲೆ ಕಾಳನ್ನು ಏಳೆಂಟು ತಾಸು ನೆನೆಸಿಡಿ. ನಂತರ ಆ ನೀರನ್ನು ತೆಗೆದು, ಸಣ್ಣಗೆ ಹೆಚ್ಚಿದ ಈರುಳ್ಳಿ, ಹಸಿಮೆಣಸಿನಕಾಯಿ, ಟೊಮ್ಯಾಟೊ, ಕೊತ್ತಂಬರಿ ಸೊಪ್ಪು, ನಿಂಬೆರಸ, ಉಪ್ಪು ಸೇರಿಸಿ. ಇದು ಬೆಳಗಿನ ತಿಂಡಿಗೂ ಪೌಷ್ಟಿಕ ಆಹಾರ. (ಇದೇ ರೀತಿ ಹೆಸರು ಕಾಳಿನದ್ದೂ ಮಾಡಬಹುದು.)

ಮರಿಗೆ ಗೊಜ್ಜು



ಸಾಮಗ್ರಿ: ಗಟ್ಟಿ ಮೊಸರು 1 ಕಪ್, ಜಜ್ಜಿದ ಬೆಳ್ಳುಳ್ಳಿ ನಾಲ್ಕೈದು, ಹಸಿಮೆಣಸಿನ ಕಾಯಿ 1, ಉಪ್ಪು ರುಚಿಗೆ.

ವಿಧಾನ: ಒಂದು ಪಾತ್ರೆಯಲ್ಲಿ ಮೊಸರು ಹಾಕಿ, ಅದಕ್ಕೆ ಉಪ್ಪು ಮತ್ತು ಜಜ್ಜಿದ ಬೆಳ್ಳುಳ್ಳಿ, ಹೆಚ್ಚಿದ ಹಸಿಮೆಣಸಿನಕಾಯಿ ಸೇರಿಸಿ. ಬಿಸಿಬಿಸಿ ಅನ್ನಕ್ಕೆ ರುಚಿಯಾಗಿರುತ್ತದೆ.

ಉಪ್ಪಿನಕಾಯಿ ಮಿಡಿಯ ತಂಬುಳಿ

ಸಾಮಗ್ರಿ: ಉಪ್ಪಿನ ಕಾಯಿ ಮಿಡಿ 2, ಕಾಯಿ ತುರಿ ಅರ್ಧ ಕಪ್, ಎಳ್ಳು ಕಾಲು ಚಮಚ, ಕಡೆದ ಮಜ್ಜಿಗೆ 1 ಲೋಟ, ಉಪ್ಪು ರುಚಿಗೆ.

ವಿಧಾನ: ಉಪ್ಪಿನ ಕಾಯಿ ಮಿಡಿಯನ್ನು ತೊಳೆದು ಹೆಚ್ಚಿ ಅದರೊಳಗಿನ ಬೀಜ ತೆಗೆದು ನಾಲ್ಕು ಹೋಳು ಮಾಡಿಕೊಳ್ಳಿ. ಅದರೊಂದಿಗೆ ಎಳ್ಳು, ತೆಂಗಿನ ತುರಿ ಹಾಕಿ ನುಣ್ಣಗೆ ರುಬ್ಬಿ. ನಂತರ ಈ ಮಿಶ್ರಣಕ್ಕೆ ಮಜ್ಜಿಗೆ ಮತ್ತು ಕಾಲು ಲೋಟ ನೀರು ಸೇರಿಸಿ, ಉಪ್ಪು ಹಾಕಿ.





ಬಾಳೆಹಣ್ಣಿನ ರಸಾಯನ

ಸಾಮಗ್ರಿ: ಯಾವುದೇ ಬಾಳೆ ಹಣ್ಣು 4, ಬೆಲ್ಲ 4 ಚಮಚ, ಹಾಲು 1 ಕಪ್, ಕಾಯಿ ತುರಿ ಕಾಲು ಕಪ್, ಏಲಕ್ಕಿ ಪುಡಿ ಚಿಟಿಕೆ.

ವಿಧಾನ: ಬಾಳೆಹಣ್ಣನ್ನು ಘನಾಕಾರವಾಗಿ ಹೆಚ್ಚಿ. ಅದಕ್ಕೆ ಬೆಲ್ಲ, ಹಾಲು ಸೇರಿಸಿ. ತೆಂಗಿನ ತುರಿಯನ್ನು ರುಬ್ಬಿ ಹಾಕಿ. ಏಲಕ್ಕಿ ಪುಡಿ ಸೇರಿಸಿ.

ಇದೇ ರೀತಿ ವಿವಿಧ ಹಣ್ಣುಗಳಿಂದಲೂ ರಸಾಯನ ಮಾಡಬಹುದು. ಈ ರಸಾಯನಕ್ಕೆ ಕುಂಬಳ ಬೀಜ, ಚಿಯಾ ಬೀಜ, ಬಿಳಿ ಎಳ್ಳುಗಳನ್ನೂ ಸೇರಿಸಿದರೆ ಪೌಷ್ಟಿಕಾಂಶ ಇನ್ನೂ ಹೆಚ್ಚು. ದೇಹಕ್ಕೂ ತಂಪು. ಈ ರಸಾಯನಗಳನ್ನು ಬೆಳಗಿನ ತಿಂಡಿ ರೂಪದಲ್ಲೇ ಸೇವಿಸಬಹುದು. ಒಳ್ಳೆ ಡಯಟ್ ಫುಡ್ ಇದು.

ಮೂಲಂಗಿ ಹಕಿ

ಸಾಮಗ್ರಿ: ಮೂಲಂಗಿ 1, ಈರುಳ್ಳಿ 1, ಹಸಿಮೆಣಸಿನಕಾಯಿ 1, ತೆಂಗಿನ ತುರಿ ಅರ್ಧ ಕಪ್, ಮೊಸರು ಅರ್ಧ ಕಪ್, ಉಪ್ಪು ರುಚಿಗೆ.

ಸಾಮಗ್ರಿ: ಮೂಲಂಗಿ ಮತ್ತು ಈರುಳ್ಳಿ, ಹಸಿಮೆಣಸಿನ ಕಾಯಿಯನ್ನು ಸಣ್ಣಗೆ ಹೆಚ್ಚಿಕೊಳ್ಳಿ. ಈ ಮಿಶ್ರಣಕ್ಕೆ ನುಣ್ಣಗೆ ರುಬ್ಬಿದ ತೆಂಗಿನ ತುರಿ, ಮೊಸರು, ಉಪ್ಪನ್ನು ಸೇರಿಸಿ ಚೆನ್ನಾಗಿ ಕಲಸಿ. ಕಡೆಯಲ್ಲಿ ಸಣ್ಣಗೆ ಹೆಚ್ಚಿದ ಕೊತ್ತಂಬರಿ ಸೊಪ್ಪನ್ನು ಸೇರಿಸಿ.

ಜಜ್ಜ ಮೂಲಂಗಿ

ಮೂಲಂಗಿ 1, ತೆಂಗಿನ ತುರಿ ಅರ್ಧ ಕಪ್, ಹಸಿಮೆಣಸಿನ ಕಾಯಿ 2, ಬೆಳ್ಳುಳ್ಳಿ ನಾಲ್ಕೈದು ಎಸಳು, ಉಪ್ಪು ರುಚಿಗೆ.

ವಿಧಾನ: ತೆಂಗಿನ ತುರಿ ಮತ್ತು ಹಸಿಮೆಣಸಿನ ಕಾಯಿಗಳನ್ನು ನುಣ್ಣಗೆ ರುಬ್ಬಿ ಒಂದು ಪಾತ್ರೆಗೆ ಹಾಕಿ. ನಂತರ ಹೆಚ್ಚಿದ ಮೂಲಂಗಿ ಮತ್ತು ಬೆಳ್ಳುಳ್ಳಿ ಎಸಳುಗಳನ್ನು ಒಂದು ಕುಟಾಣಿಗೆ ಹಾಕಿ ಜಜ್ಜಿ. ಇದನ್ನು ರುಬ್ಬಿದ ತೆಂಗಿನ ತುರಿ ಮಿಶ್ರಣಕ್ಕೆ ಹಾಕಿ ಚೆನ್ನಾಗಿ ಕಲಸಿ. ಇದು ರೊಟ್ಟಿ, ಚಪಾತಿ, ದೋಸೆ, ಅನ್ನಕ್ಕೆಲ್ಲ ಚೆನ್ನಾಗಿರುತ್ತದೆ. ಬೇಕಿದ್ದರೆ ಇದಕ್ಕೆ ಅರ್ಧ ಕಪ್ ಮೊಸರನ್ನೂ ಸೇರಿಸಬಹುದು.

ಕ್ಯಾರೆಟ್ ಹಕಿ

ಸಾಮಗ್ರಿ: ಕ್ಯಾರೆಟ್ 1, ಹಸಿ ಈರುಳ್ಳಿ 1, ಹಸಿಮೆಣಸಿನಕಾಯಿ 1, ತೆಂಗಿನ ತುರಿ ಅರ್ಧ ಕಪ್, ಮೊಸರು ಅರ್ಧ ಕಪ್, ಉಪ್ಪು ರುಚಿಗೆ.

ವಿಧಾನ: ಕ್ಯಾರೆಟ್ ತುರಿದುಕೊಳ್ಳಿ, ಈರುಳ್ಳಿಯನ್ನು ಸಣ್ಣಗೆ ಹೆಚ್ಚಿಕೊಳ್ಳಿ. ಎರಡನ್ನೂ ಸೇರಿಸಿ, ಹಸಿಮೆಣಸಿನಕಾಯಿಯನ್ನು ನುರಿದು, ಇದಕ್ಕೆ ರುಬ್ಬಿದ ತೆಂಗಿನ ತುರಿ ಹಾಗೂ ಮೊಸರು ಮತ್ತು ಉಪ್ಪು ಸೇರಿಸಿ. (ಇದೇ ವಿಧಾನದಲ್ಲಿ ಬೀಟ್ರೂಟ್, ನವಿಲುಕೋಲುಗಳ ಹಸಿಗಳನ್ನೂ ಮಾಡಬಹುದು.)

ಈ ಬೇಸಿಗೆಯ ಧಗೆಗೆ ರಸಾಯನ ಹೇಳಿ ಮಾಡಿಸಿದ ಆಹಾರ. ಅದರಕ್ಕೂ ಸಿಹಿ, ಉದರಕ್ಕೂ ಉತ್ತಮ. ವಿವಿಧ ಹಣ್ಣುಗಳಿಂದ ತಯಾರಿಸಿದ ರಸಾಯನ ಬಲು ರುಚಿ ಕೂಡ.

ಕಡಿಮೆ ಬೆಂಕಿ ಬಳಸಿ ಮಾಡುವ ಪದಾರ್ಥಗಳು

ಮಜ್ಜಿಗೆ ಪಲಧ್ಯ

ಸಾಮಗ್ರಿ: ಮಜ್ಜಿಗೆ 1 ಲೋಟ, ತೆಂಗಿನ ತುರಿ 2 ಚಮಚ, ನೀರು 2 ಲೋಟ, ಉಪ್ಪು ರುಚಿಗೆ, ಅಮಚೂರು ಪುಡಿ ಕಾಲು ಚಮಚ, ಒಗ್ಗರಣೆಗೆ, ಎಣ್ಣೆ (ತೆಂಗಿನೆಣ್ಣೆಯಾದರೆ ಉತ್ತಮ, ಕಳ್ಳೆಕಾಯಿ ಎಣ್ಣೆಯಾದರೂ ಓಕೆ) 2 ಚಮಚ, ಉದ್ದಿನ ಬೇಳೆ ಕಾಲು ಚಮಚ, ಸಾಸಿವೆ ಕಾಳು ಕಾಲು ಚಮಚ, ಕರಿಬೇವಿನ ಸೊಪ್ಪು 1 ಕಡ್ಡಿ, ಬೆಳ್ಳುಳ್ಳಿ ನಾಲ್ಕೈದು ಎಸಳು, ಹಸಿಮೆಣಸಿನ ಕಾಯಿ 1.

ವಿಧಾನ: ಒಂದು ದಪ್ಪ ತಳದ ಪಾತ್ರೆಯಲ್ಲಿ 2 ಚಮಚ ಎಣ್ಣೆ ಹಾಕಿ, ಸಾಸಿವೆಕಾಳು ಹಾಕಿ, ಅದು ಚಿಟಿಗುಟ್ಟಿದ ಮೇಲೆ ಉದ್ದಿನ ಬೇಳೆ ಹಾಕಿ. ನಂತರ ಕರಿಬೇವು, ಹೆಚ್ಚಿದ ಹಸಿಮೆಣಸಿನಕಾಯಿ, ಜಜ್ಜಿದ ಬೆಳ್ಳುಳ್ಳಿ, ಹಾಕಿ, ಬೆಂದ ಮೇಲೆ ನೀರು, ಉಪ್ಪು, ಹುಳಿಪುಡಿ ಮತ್ತು ತೆಂಗಿನ ತುರಿ

UASB LIBRARY



ಹಾಕಿ ಕುದಿಸಿ ಗ್ಯಾಸ್ ಬಂದ್ ಮಾಡಿ. ನಂತರ ಕಡೆದಿರುವ ಮಜ್ಜಿಗೆಯನ್ನು ಸೇರಿಸಿ. ಇದು ರಾತ್ರಿಯ ಊಟಕ್ಕೆ ಹೇಳಿಮಾಡಿಸಿದ ಪದಾರ್ಥ. ದೇಹಕ್ಕೆ ತಂಪು ಮತ್ತು ಜೀರ್ಣಕಾರಿ.

ಅಪ್ಪೆಹುಳಿ

ಸಾಮಗ್ರಿ: ಮಾವಿನ ಕಾಯಿ/ ಅಪ್ಪೆಕಾಯಿ ದೊಡ್ಡಗಾತ್ರದ್ದು 1, ಹಸಿಮೆಣಸು 1, ಉಪ್ಪು ರುಚಿಗೆ, ಒಣಮೆಣಸಿನ ಕಾಯಿ 1, ಒಗ್ಗರಣೆಗೆ ಎಣ್ಣೆ ಒಂದು ಚಮಚ. ಸಾಸಿವೆ ಕಾಳು ಕಾಲು ಚಮಚ, 2 ಲೋಟ ನೀರು.

ವಿಧಾನ: ಮಾವಿನಕಾಯಿ/ಅಪ್ಪೆಕಾಯಿಯನ್ನು ಸಿಪ್ಪೆ ತೆಗೆದು, ಹಸಿಮೆಣಸಿನಕಾಯಿ ಹಾಕಿ ನುಣ್ಣಗೆ ರುಬ್ಬಿಕೊಳ್ಳಬೇಕು. ಇದಕ್ಕೆ ಹುಳಿಗೆ ತಕ್ಕಷ್ಟು ನೀರು ಹಾಕಿ. ಉಪ್ಪು ಸೇರಿಸಿದರೆ ಅಪ್ಪೆಹುಳಿ ರೆಡಿ. ಇದಕ್ಕೆ ಸಾಸಿವೆಕಾಳು, ಕರಿಬೇವು, ಇಂಗಿನ ಒಗ್ಗರಣೆ ಕೊಟ್ಟರೆ ರುಚಿ ಹೆಚ್ಚು. ಒಗ್ಗರಣೆ ಇಲ್ಲದೆಯೂ ಮಾಡಬಹುದು. ಇದು ಬಿಸಿಬಿಸಿ ಅನ್ನಕ್ಕೆ ಒಳ್ಳೆ ರುಚಿ. (ಇದೇ ಕಾಯಿಗಳನ್ನು ಬೇಯಿಸಿ, ನಂತರ ಸಿಪ್ಪೆ ತೆಗೆದು ಕಿವುಚಿ. ಅದಕ್ಕೆ ಸಾಕಷ್ಟು ಪ್ರಮಾಣದಲ್ಲಿ ನೀರು ಸೇರಿಸಿ ಇದೇ ವಿಧಾನದಲ್ಲಿ ಅಪ್ಪೆಹುಳಿ ಮಾಡಬಹುದು.)



ಮೊಸರು

ಹೆರಳೆಕಾಯಿ ಅಪ್ಪೆಹುಳಿ

ಹೆರಳೆಕಾಯಿ, ನಿಂಬೆ ಹಣ್ಣು, ಹುಣಸೆ ಹಣ್ಣು, ಒಟ್ಟಿನಲ್ಲಿ ಹುಳಿ ಇರುವ ಯಾವುದೇ ಕಾಯಿಗಳಿಂದಲೂ ಈ ಅಪ್ಪೆಹುಳಿಯನ್ನು ತಯಾರಿಸಬಹುದು.

ಸಾಮಗ್ರಿ: ಹೆರಳೆ ಕಾಯಿ 1, ಹಸಿಮೆಣಸಿನ ಕಾಯಿ 1, ಉಪ್ಪು ರುಚಿಗೆ. ನೀರು 2 ಲೋಟ.

ವಿಧಾನ: ಮೊದಲಿಗೆ ಹೆರಳೆ ಕಾಯಿಯ ಸಿಪ್ಪೆ ತೆಗೆದು ಎರಡು ಹೋಳು ಮಾಡಿಕೊಳ್ಳಿ. ನಂತರ ಒಂದು ಪಾತ್ರೆಯಲ್ಲಿ ಉಪ್ಪು ಹಾಕಿ ಅದಕ್ಕೆ ಹಸಿಮೆಣಸಿನ ಕಾಯಿಯನ್ನು ನುರಿಯಿರಿ. ಅದಕ್ಕೆ ಈ ಹೆರಳೇ ಕಾಯಿ ರಸವನ್ನು ಹಿಂಡಿ ಹಾಕಿ. ನಂತರ ಅದಕ್ಕೆ 2 ಲೋಟ ನೀರು ಸೇರಿಸಿದರೆ ಅಪ್ಪೆಹುಳಿ ರೆಡಿ. ಇದು ಕೂಡ ಬಿಸಿ ಅನ್ನಕ್ಕೆ ರುಚಿ. ಹಾಗೆಯೇ ಊಟದ ಕೊನೆಯಲ್ಲಿ ಕುಡಿಯಲೂ ರುಚಿ. (ಇದೇ ಮಾದರಿಯಲ್ಲೇ ಮಿಕ್ಕ ಸಾಮಗ್ರಿಗಳಿಂದ ಅಪ್ಪೆಹುಳಿ ತಯಾರಿಸಬಹುದು.)

ಹುಣಸೆ ಹಣ್ಣಿನ ತಂಬುಳಿ

ಸಾಮಗ್ರಿ: ಹುಣಸೆ ಹಣ್ಣು ದೊಡ್ಡ ನಿಂಬೆ ಗಾತ್ರದಷ್ಟು, ಈರುಳ್ಳಿ 1, ಹಸಿಮೆಣಸಿನಕಾಯಿ 1, ಒಣಮೆಣಸಿನ ಕಾಯಿ 1, ಬೆಲ್ಲ 4 ಚಮಚ, ಉಪ್ಪು ರುಚಿಗೆ. ಒಗ್ಗರಣೆಗೆ ಜೀರಿಗೆ, ಸಾಸಿವೆ, ಕರಿಬೇವು. ಇಂಗು ಚಿಟಿಕೆ.



ರಾಗಿ ಸಿಹಿ ಮಜ್ಜಿಗೆ

ವಿಧಾನ: ಹುಣಸೆಹಣ್ಣನ್ನು ಅರ್ಧಗಂಟೆ ನೆನಹಾಕಿ. ಅದು ನೆಂದ ಮೇಲೆ ಚೆನ್ನಾಗಿ ಕಿವುಚಿ ರಸ ತೆಗೆಯಿರಿ. ಆ ರಸಕ್ಕೆ ಎರಡು ಲೋಟ ನೀರು ಸೇರಿಸಿ, ಹಸಿಮೆಣಸಿನ ಕಾಯಿ ನುರಿದು ಉಪ್ಪು ಮತ್ತು ಬೆಲ್ಲವನ್ನು ಸೇರಿಸಿ. ನಂತರ ಸಣ್ಣಗೆ ಕತ್ತರಿಸಿದ ಈರುಳ್ಳಿ, ಕೊತ್ತಂಬರಿ ಸೊಪ್ಪನ್ನು ಹಾಕಿದರೆ ರುಚಿ ಇನ್ನೂ ಹೆಚ್ಚು. ಇದಕ್ಕೆ ಬೇಕಿದ್ದರೆ ಜೀರಿಗೆ ಸಾಸಿವೆ ಕರಿಬೇವು ಹಾಕಿ ಒಗ್ಗರಣೆ ಕೊಡಬಹುದು.

ಒಗ್ಗರಣೆ ಇಲ್ಲದೆಯೂ ಇದನ್ನು ಊಟಕ್ಕೆ ಬಳಸಬಹುದು. ಈ ಬೇಸಿಗೆಗೆ ಹುಣಸೆ ಹಣ್ಣು ತಂಬುಳಿ ದೇಹಕ್ಕೆ ತಂಪು ನೀಡುವುದಲ್ಲದೆ ರುಚಿಕಟ್ಟಾಗಿಯೂ ಇರುತ್ತದೆ. ಅಲ್ಲದೆ ಹುಣಸೆ ಹಣ್ಣು ಬೆಲ್ಲ ಎರಡೂ ಸೇರುವುದರಿಂದ ಪಿತ್ತ ನಾಶಕವಾಗಿಯೂ ಕೆಲಸ ಮಾಡುತ್ತದೆ. ವಾರಕ್ಕೆ ಒಂದೆರೆಡು ಬಾರಿ ಈ ತಂಬುಳಿಯನ್ನು ಮಾಡಿಕೊಂಡು ಊಟ ಮಾಡಿದರೆ ಒಳಿತು. ಪಾನಕದ ರೀತಿಯಲ್ಲಿ ಇದನ್ನು ಕುಡಿಯಲೂ ಬಹುದು.

ಸೌತೆಕಾಯಿ ಕಲ್ಲಜ್ಜೆ

ಸಾಮಗ್ರಿ: ಸೌತೆಕಾಯಿ 1, ಉದ್ದಿನ ಬೇಳೆ ಅರ್ಧ ಚಮಚ, ಬಿಳಿ ಎಳ್ಳು ಕಾಲು ಚಮಚ, ಹಸಿಮೆಣಸಿನ ಕಾಯಿ ಅರ್ಧ, ತೆಂಗಿನ ತುರಿ ಕಾಲು ಕಪ್, ಉಪ್ಪು ರುಚಿಗೆ. ನೀರು 2 ಲೋಟ.

ವಿಧಾನ: ಸೌತೆಕಾಯಿ ಸಿಪ್ಪೆ ತೆಗೆದು ಹೆಚ್ಚಿಕೊಳ್ಳಿ. ಉದ್ದಿನ ಬೇಳೆ ಮತ್ತು ಎಳ್ಳು ಹಸಿಮೆಣಸಿನ ಕಾಯಿಯನ್ನು ಎಣ್ಣೆಯಲ್ಲಿ ಹುರಿದು ತೆಂಗಿನ ತುರಿ, ಸೌತೆಕಾಯಿಯೊಂದಿಗೆ ತರಿತರಿಯಾಗಿ ರುಬ್ಬಿ. ಇದಕ್ಕೆ ನೀರು ಮತ್ತು ಉಪ್ಪು ಸೇರಿಸಿ. ರಾತ್ರಿ ಹೊತ್ತು ಬಿಸಿ ಅನ್ನಕ್ಕೆ ಇದು ರುಚಿಯಾಗಿರುತ್ತದೆ.

ಮಸಾಲೆ ಅವಲಕ್ಕಿ

ಸಾಮಗ್ರಿ: ಪೇಪರ್/ ತೆಳು ಅವಲಕ್ಕಿ 3 ಮುಷ್ಟಿ, ಹಸಿ ಮೆಣಸಿನಕಾಯಿ 1, ಒಣಮೆಣಸಿನಕಾಯಿ 1, ಉಪ್ಪು ರುಚಿಗೆ, ಬೆಲ್ಲ ಸ್ವಲ್ಪ, ತೆಂಗಿನ ತುರಿ ಕಾಲು ಕಪ್, ನಿಂಬೆ ರಸ ಒಂದು ಚಮಚ, ಒಗ್ಗರಣೆಗೆ 1 ಚಮಚ ಎಣ್ಣೆ, ಕೇಂಗಾ 2 ಚಮಚ, ಉದ್ದಿನಬೇಳೆ 1 ಚಮಚ, ಕಡ್ಲೆ ಬೇಳೆ 1 ಚಮಚ, ಸಾಸಿವೆ, ಜೀರಿಗೆ ತಲಾ ಅರ್ಧ ಚಮಚ. ಅರಿಶಿನ ಚಿಟಿಕೆ. ಕೊತ್ತಂಬರಿ ಬೀಜ ಕಾಲು ಚಮಚ.

ವಿಧಾನ: ಅವಲಕ್ಕಿಗೆ ಉಪ್ಪು, ಬೆಲ್ಲ ಸೇರಿಸಿ ಚೆನ್ನಾಗಿ ಕಲಸಿಡಿ. ಅದಕ್ಕೆ ಒಗ್ಗರಣೆ ಸಾಮಗ್ರಿ ಹಾಕಿ , ಕಾಯಿಸುಳಿ, ನಿಂಬೆ ರಸವನ್ನು ಸೇರಿಸಿ ಚೆನ್ನಾಗಿ ಕಲಸಿದರೆ ಮಸಾಲೆ ಅವಲಕ್ಕಿ ರೆಡಿ. ಬೆಳಗಿನ ತಿಂಡಿಗೂ ಇದನ್ನು ಸೇವಿಸಬಹುದು.

ಉಪ್ಪಿನಕಾಯಿ ಮಸಾಲೆ ಅವಲಕ್ಕಿ

ಸಾಮಗ್ರಿ: ದಪ್ಪ ಅವಲಕ್ಕಿ 2 ಮುಷ್ಟಿ, ಉಪ್ಪಿನಕಾಯಿ 3 ಚಮಚ, ಉಪ್ಪು ರುಚಿಗೆ, ಬೆಲ್ಲ ಅರ್ಧ ಚಮಚ, ತೆಂಗಿನ ತುರಿ ಕಾಲು ಕಪ್, ತೆಂಗಿನ ಎಣ್ಣೆ ಅರ್ಧ ಚಮಚ.

ವಿಧಾನ: ಎರಡು ಬಾರಿ ಚೆನ್ನಾಗಿ ಅವಲಕ್ಕಿ ತೊಳೆದು ನೀರು ಬಸಿದು 2 ನಿಮಿಷ ಹಾಗೇ ಬಿಡಿ. ನಂತರ ಅದಕ್ಕೆ ಉಪ್ಪಿನ ಕಾಯಿ, ಬೆಲ್ಲ, ಉಪ್ಪು ಸೇರಿಸಿ ಚೆನ್ನಾಗಿ ಕಲಸಿ. ನಂತರ ಅದಕ್ಕೆ ತೆಂಗಿನ ತುರಿ ಮತ್ತು ತೆಂಗಿನ ಎಣ್ಣೆಯನ್ನು ಸೇರಿಸಿದರೆ ರುಚಿಯಾದ ಉಪ್ಪಿನ ಕಾಯಿ ಅವಲಕ್ಕಿ ರೆಡಿ. (ಅವುಗಾಯಿ, ಕಡಗಾಯಿ ಉಪ್ಪಿನ ಕಾಯಿಯನ್ನು ಹಾಕಿ ಮಾಡಿದ ಅವಲಕ್ಕಿ ಹೆಚ್ಚು ರುಚಿ.)



ಕೈಗೊಮ್ಮು

ಮಸಾಲೆ ಅರಳು

ಸಾಮಗ್ರಿ: ಅರಳು 2 ಮುಷ್ಟಿ, ಹಸಿಮೆಣಸಿನ ಕಾಯಿ 1, ತೆಂಗಿನ ತುರಿ ಕಾಲು ಕಪ್, ತೆಂಗಿನ ಎಣ್ಣೆ 2 ಚಮಚ. ಉಪ್ಪು ರುಚಿಗೆ, ನಿಂಬೆ ರಸ ಕಾಲು ಚಮಚ. ಸಕ್ಕರೆ ಅರ್ಧ ಚಮಚ. (ಸಕ್ಕರೆ ಬೇಡದವರು ಬಿಡಬಹುದು.)

ವಿಧಾನ: ಅರಳನ್ನು ಚೆನ್ನಾಗಿ ಕೇರಿಕೊಂಡು ಸ್ವಚ್ಛಗೊಳಿಸಿ. ಅದಕ್ಕೆ ಉಪ್ಪು, ನಿಂಬೆ ರಸ, ತೆಂಗಿನ ಎಣ್ಣೆಯನ್ನು ಸೇರಿಸಿ, ಹಸಿಮೆಣಸಿನ ಕಾಯಿಯನ್ನು ನುರಿದು ಚೆನ್ನಾಗಿ ಕಲಸಿ. ನಂತರ ಅದಕ್ಕೆ ತೆಂಗಿನ ತುರಿ, ಸಕ್ಕರೆ ಹಾಗೂ ಸಣ್ಣಗೆ ಹೆಚ್ಚಿದ ಕೊತ್ತಂಬರಿ ಸೊಪ್ಪನ್ನು ಸೇರಿಸಿದರೆ ರುಚಿಯಾದ ಮಸಾಲೆ ಅರಳು ರೆಡಿ. ಇದು ಕೂಡ ಬೆಳಗಿನ ತಿಂಡಿಗೆ ಹಾಗೂ ಸಂಜೆಯ ಸ್ನ್ಯಾಕ್ಸ್‌ಗೂ ಸೇವಿಸಬಹುದು.

ಪ್ರತಿಕ್ರಿಯೆಗೆ: feedback@sudha.co.in

UASB LIBRARY

ಬಿರುಬಿಸಿಲು ದಿನೇದಿನೇ ಏರುತ್ತಿದೆ. ತಲೆಸಿಡಿತ, ಉಷ್ಣಶೀತ ಮುಂತಾದ ಆರೋಗ್ಯ ಸಮಸ್ಯೆಗಳೂ ಹೆಚ್ಚುತ್ತಿವೆ. ಬಿಸಿಲ ಸಮಸ್ಯೆಯ ನಿವಾರಣೆ ಹೇಗೆ? ದೇಹ ತಂಪಾಗಿರಿಸಿ ಆರೋಗ್ಯಪೂರ್ಣವಾಗಿರಲು ಏನು ಮಾಡಬೇಕು? ಯಾವೆಲ್ಲ ಮನೆಮದ್ದು ಪರಿಣಾಮಕಾರಿ? ಇಲ್ಲಿದೆ ಆಯುರ್ವೇದ ತಜ್ಞೆ ಮಾಡಿರುವ ಆರೋಗ್ಯ ವಿಶ್ಲೇಷಣೆ...

ಬಿಸಿಲಾಘಾತ ಹೆಚ್ಚುತ್ತಿದೆ ತಲೆಸಿಡಿತ



■ ಡಾ. ವಸುಂಧರಾ ಭೂಪತಿ

ಬಿರುಬಿಸಿಲು ಅಟ್ಟಹಾಸ ಮೆರೆಯುತ್ತಿದೆ. ತೀವ್ರವಾದ ಬಿಸಿಲಿಗೆ ದೀರ್ಘಕಾಲ ದೇಹವನ್ನು ಒಡ್ಡಿಕೊಳ್ಳುವುದರಿಂದ ಮತ್ತು ಅತಿ ಹೆಚ್ಚು ತಾಪಮಾನದಲ್ಲಿ ಕೆಲಸ ಮಾಡುವುದರಿಂದ ಅಥವಾ ತೀವ್ರ ದೈಹಿಕ ಚಟುವಟಿಕೆಗಳನ್ನು ಮಾಡುವುದರಿಂದ ಬಿಸಿಲಾಘಾತ ಉಂಟಾಗುತ್ತದೆ. ಇದರಿಂದ ಅಪಾಯಕಾರಿ ಆರೋಗ್ಯ ತೊಡಕುಗಳು ಕಾಣಿಸಿಕೊಳ್ಳುತ್ತವೆ.

ಬಿಸಿಲಾಘಾತದಿಂದ ಮೈಯಲ್ಲಿ ಗುಳ್ಳೆಯಾಗುವುದು, ತಲೆಸಿಡಿತ ಮತ್ತು ಉಷ್ಣಶೀತ ಇವು ಸಾಮಾನ್ಯವಾಗಿ ಕಂಡುಬರುವ ತೊಂದರೆಗಳಾಗಿವೆ. ಹೆಚ್ಚು ಬಿಸಿಲು, ಬೆವರು ಮತ್ತು ಚರ್ಮದ ರಂಧ್ರಗಳು ಮುಚ್ಚಿಕೊಳ್ಳುವುದರಿಂದ ಚರ್ಮದಲ್ಲಿ ಸಣ್ಣ ಗುಳ್ಳೆಗಳು ಅಥವಾ ಕೆಂಪು ಚುಕ್ಕೆಗಳು ಕಾಣಿಸಿಕೊಳ್ಳುತ್ತವೆ. ಬಿಸಿಲು ಮತ್ತು ಬೆವರಿನಿಂದ ಚರ್ಮ ಬಿಸಿಯಾಗಿ ಚುರುಕೆನಿಸುತ್ತದೆ. ಇದನ್ನು ತಪ್ಪಿಸಲು ದೇಹವನ್ನು ಬಹಳ ಸ್ವಚ್ಛವಾಗಿಡಬೇಕು, ದಿನವೂ ತಣ್ಣೀರಿನ ಸ್ನಾನ ಮಾಡಬೇಕು ಮತ್ತು ಬೆವರು ಹೆಚ್ಚಾಗದಂತೆ ನೋಡಿಕೊಳ್ಳಬೇಕು. ಹಗುರವಾದ ಹತ್ತಿ ಬಟ್ಟೆ ಧರಿಸುವುದು ಉತ್ತಮ.

ಬಿಸಿಲಿನಿಂದ ತಲೆಸಿಡಿತ ಬೇಸಿಗೆ ಕಾಲದಲ್ಲಿ ಸಾಮಾನ್ಯವಾಗಿ ಕಾಣಿಸಿಕೊಳ್ಳುವ ಸಮಸ್ಯೆಯಾಗಿದೆ. ಹೆಚ್ಚು ಸಮಯ ಬಿಸಿಲಿನಲ್ಲಿ ಇರುವುದರಿಂದ ದೇಹದ ತಾಪಮಾನ ಏರಿಕೆಯಾಗುತ್ತದೆ ಮತ್ತು ನೀರಿನ ಕೊರತೆಯಿಂದ ತಲೆನೋವು ಉಂಟಾಗುತ್ತದೆ. ಇದರ ಲಕ್ಷಣಗಳಲ್ಲಿ ತಲೆಭಾರ, ತಲೆಸುತ್ತು, ದೌರ್ಬಲ್ಯ, ಕಣ್ಣು ಮುಸುಕಾಗುವುದು ಸೇರಿವೆ.



ಈ ಸಮಸ್ಯೆಯನ್ನು ತಪ್ಪಿಸಲು ಸಾಕಷ್ಟು ಶುದ್ಧ ನೀರು ಕುಡಿಯುವುದು ಅತ್ಯಂತ ಮುಖ್ಯ. ಮಜ್ಜಿಗೆ, ನಿಂಬೆಹಣ್ಣಿನ ಪಾನಕ, ಎಳನೀರು ಮುಂತಾದ ಪಾನೀಯಗಳನ್ನು ಸೇವಿಸುವುದು ದೇಹವನ್ನು ತಂಪಾಗಿರಿಸುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಬಿಸಿಲಿನ ತೀವ್ರ ಸಮಯದಲ್ಲಿ ಹೊರಗೆ ಹೋಗುವುದನ್ನು ತಪ್ಪಿಸಿ ತಂಪಾದ ಸ್ಥಳದಲ್ಲಿ ಇದ್ದು ವಿಶ್ರಾಂತಿ ಪಡೆಯಬೇಕು.

ಉಷ್ಣ ಶೀತ ಅಥವಾ ಸಮ್ಮರ್ ಕೋಲ್ಡ್ ಎಂದರೆ ಬೇಸಿಗೆ ಕಾಲದಲ್ಲಿಯೇ ಕಾಣಿಸಿಕೊಳ್ಳುವ ನೆಗಡಿಯ/ಶೀತದ ಒಂದು ರೂಪ. ಸಾಮಾನ್ಯವಾಗಿ ಇದು ವೈರಸ್ ಸೋಂಕಿನಿಂದ ಉಂಟಾಗುತ್ತದೆ. ಆದರೆ ತೀವ್ರ ಬಿಸಿಲಿನಿಂದ ತಣ್ಣನೆಯ ಪರಿಸರಕ್ಕೆ ಹಠಾತ್ ಹೋಗುವುದು, ಫ್ರಿಜ್ ನೀರು/ಐಸ್ ಪದಾರ್ಥಗಳನ್ನು ಹೆಚ್ಚು ಸೇವಿಸುವುದು, ಎಸಿ (ಹವಾನಿಯಂತ್ರಿತ) ಕೊಠಡಿಯಲ್ಲಿ ಹೆಚ್ಚು ಕಾಲ ಇರುವುದರಿಂದ ದೇಹದ ಸಮತೋಲನ ಹದಗೆಟ್ಟು ಈ ಸಮಸ್ಯೆ ಹೆಚ್ಚಾಗುತ್ತದೆ.

ಉಷ್ಣ ಶೀತದ ಲಕ್ಷಣಗಳಲ್ಲಿ ಮೂಗಿನಿಂದ ನೀರು ಸೋರುವುದು, ಗಂಟಲಿನಲ್ಲಿ ಕಿರಿಕಿರಿ ಅಥವಾ ನೋವು, ಕೆಮ್ಮು, ತಲೆನೋವು, ದೌರ್ಬಲ್ಯ, ಕೆಲವೊಮ್ಮೆ ಸಣ್ಣಗೆ ಜ್ವರವೂ ಕಾಣಿಸಿಕೊಳ್ಳುತ್ತದೆ. ಬೇಸಿಗೆಯಲ್ಲಿ ಬೆವರು ಮತ್ತು ದೇಹದ ಶಕ್ತಿಯ ಕಡಿಮೆಯಿಂದ ರೋಗನಿರೋಧಕ ಶಕ್ತಿ ಕುಗ್ಗಿದಾಗ ಈ ಸೋಂಕು ಸುಲಭವಾಗಿ ತಗುಲುತ್ತದೆ. ಉಷ್ಣಶೀತದ ನಿವಾರಣೆಗೆ ಅತಿ ತಣ್ಣಗಿರುವ ಪದಾರ್ಥಗಳನ್ನು (ಐಸ್‌ಕ್ರೀಂ, ಸ್ಮೂದಿ ಮತ್ತು ಫ್ರೂಟ್ ಸಲಾಡ್) ಅಥವಾ ಕುಡಿಯುವುದನ್ನು (ಫ್ರಿಜ್ಜಿನಲ್ಲಿಟ್ಟಿರುವ ನೀರು, ಐಸ್ ಕ್ಯೂಬ್‌ಗಳನ್ನು ನೀರಿಗೆ/ಜ್ಯೂಸಿಗೆ/ಸೋಡಾ) ಸೇವಿಸುವುದನ್ನು ಕಡಿಮೆ ಮಾಡುವುದು. ಸ್ವಲ್ಪ ಬಿಸಿ ನೀರು ಅಥವಾ ಹದವಾಗಿ ಸ್ವಲ್ಪ ತಣ್ಣಗಿರುವ ಪಾನೀಯಗಳನ್ನು

UASB LIBRARY





ಸೌತೆಕಾಯಿ ತಿನ್ನಿ

ನೀರಿನಂಶ ಹೆಚ್ಚಾಗಿರುವ ಸೌತೆಕಾಯಿಯನ್ನು ತಿಂದರೆ ದೇಹವೂ ತಂಪಾಗುತ್ತದೆ. ಜೊತೆಗೆ ಮಾವಿನಹಣ್ಣು, ಕಲ್ಲಂಗಡಿ ಮತ್ತು ಕರಬೂಜ ಹಣ್ಣುಗಳನ್ನು ಇಡಿಯಾಗಿ ಅಥವಾ ಸಕ್ಕರೆ ಬೆರೆಸದೇ ಜ್ಯೂಸ್ ಮಾಡಿ ಕುಡಿಯಬಹುದು.

(ಎಳನೀರು, ಪಾನಕ) ಸೇವಿಸುವುದು ಉತ್ತಮ. ತುಪ್ಪದ ನೀರು, ಯಾವುದಾದರೂ ಹಗುರ ಕಷಾಯ, ಬಿಸಿ ಸೂಪ್‌ಗಳು ಗಂಟಲಿಗೆ ಆರಾಮ ಕೊಡುತ್ತವೆ. ಸಾಕಷ್ಟು ವಿಶ್ರಾಂತಿ, ಸ್ವಚ್ಛತೆ ಮತ್ತು ಸಮತೋಲನ ಆಹಾರ ಪಾಲನೆ ಮಾಡಿದರೆ ಈ ಸಮಸ್ಯೆಯನ್ನು ಸುಲಭವಾಗಿ ನಿಯಂತ್ರಿಸಬಹುದು.

ಸಾಮಾನ್ಯವಾಗಿ ಬಿಸಿಲಾಘಾತ ಉಂಟಾದಾಗ ಎಲ್ಲಕ್ಕಿಂತ ಮುಖ್ಯವಾಗಿ ದೇಹದ ತಾಪಮಾನ ಗಮನಾರ್ಹವಾಗಿ ಹೆಚ್ಚಾಗುತ್ತದೆ. ಹೃದಯ ಬಡಿತ ಹೆಚ್ಚಳ ಮತ್ತು ಉಸಿರಾಟದ ಗತಿ ತ್ವರಿತವಾಗುತ್ತದೆ. ಹೆಚ್ಚಿನ ಶಾಖದಿಂದಾಗಿ ಚರ್ಮವು ಬಿಸಿಯಾಗಿ ಹೆಚ್ಚಾಗಿ ಬೆವರುತ್ತದೆ ಮತ್ತು ಕೆಂಪಾಗುತ್ತದೆ. ಕೆಲವೊಮ್ಮೆ ಒಣಗುತ್ತದೆ. ನಿಧಾನವಾಗಿ ವಾಕರಿಕೆ, ಮನಸ್ಥಿತಿಯಲ್ಲಿ ಚಂಚಲತೆ, ವಾಂತಿ, ಅತಿಸಾರ (ಭೇದಿ) ಮತ್ತು ಜಠರಗರುಳಿನ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ಸ್ನಾಯು ಸೆಳೆತ, ದೌರ್ಬಲ್ಯ ಮತ್ತು ಆಯಾಸದ ಅನುಭವವಾಗುತ್ತದೆ.

ದೇಹದ ತಾಪಮಾನವನ್ನು ಕಡಿಮೆ ಮಾಡಲು ಪ್ರತಿ ದಿನ ಕನಿಷ್ಠ ನಾಲ್ಕು ಲೀಟರ್ ನೀರನ್ನು ಕುಡಿಯಬೇಕು. ಕುದಿಸಿ ಆರಿಸಿದ ನೀರು ಉತ್ತಮ. ನೀರನ್ನು ಕುಡಿಯದಿದ್ದರೆ ನಿರ್ಜಲೀಕರಣ ಉಂಟಾಗಿ ಅನೇಕ ಸಮಸ್ಯೆಗಳು ಉಂಟಾಗುತ್ತವೆ.

ಬೇಸಿಗೆಯಿಂದಾಗಿ ಚರ್ಮ ಹೆಚ್ಚು ಬಿಸಿಯಾಗಿದ್ದರೆ ಒದ್ದೆ ಬಟ್ಟೆಯಿಂದ ಮೈಯನ್ನು ಚೆನ್ನಾಗಿ ಒರೆಸಬೇಕು. ದೇಹವನ್ನು ತಂಪಾಗಿಸಬೇಕು. ಬಿಗಿ ಅಥವಾ ದಪ್ಪ ಬಟ್ಟೆಯನ್ನು ಧರಿಸಬಾರದು. ತಂಪು ಗಾಳಿ ದೇಹವನ್ನು ಮುಟ್ಟುವಂತೆ ನೋಡಿಕೊಳ್ಳಬೇಕು. ಗಾಢ ಬಣ್ಣದ ಬಟ್ಟೆಗಳನ್ನು ಹಾಕಿಕೊಳ್ಳಬಾರದು. ಏಕೆಂದರೆ ಅವು ಶಾಖವನ್ನು ಹೀರಿಕೊಳ್ಳುತ್ತವೆ. ತಣ್ಣೀರನ್ನು ಮೈಗೆ ಸಿಂಪಡಿಸಬೇಕು. ಮುಖದ ಮೇಲೆ ಆಗಾಗ ನೀರನ್ನು ಚಿಮುಕಿಸಿಕೊಳ್ಳಬೇಕು. ಅತಿಯಾಗಿ ಸೋಪು ಹಚ್ಚಿಕೊಂಡು ಮುಖ ತೊಳೆಯಬಾರದು. ಮನೆಯಲ್ಲಿ ಫ್ಯಾನ್ ಅಥವಾ ಎಸಿ ಲಭ್ಯವಿದ್ದರೆ ಬಳಕೆ ಮಾಡಬೇಕು. ಇದರಿಂದ ದೇಹದ ತಾಪಮಾನವನ್ನು ಬೇಗ ನಿಯಂತ್ರಿಸಬಹುದು. ಆದರೆ ಅವುಗಳ ಮೇಲೆಯೇ ಅತಿಯಾಗಿ ಅವಲಂಬಿತರಾಗಿರಬಾರದು.

ಈ ಸಮಯದಲ್ಲಿ ಸಾಕಷ್ಟು ನೀರಿನಂಶ ಇರುವ ಆಹಾರ ಸೇವಿಸಬೇಕು. ತೆಳ್ಳಗಿನ ಅಕ್ಕಿ/ರಾಗಿ/ಜೋಳದ ಗಂಜಿ, ಹಾಲು ಮತ್ತು ಎಳನೀರು ಹೆಚ್ಚಾಗಿ ಸೇವಿಸಿ. ನೀರಿಗೆ ಲಾವಂಚದ ಬೇರು, ತುಳಸಿ ಬೀಜ ಮತ್ತು ಚಿಯಾ ಬೀಜಗಳನ್ನು ಸೇರಿಸಿ ಕುಡಿದರೆ ಉತ್ತಮ. ಕಾಮಕಸ್ತೂರಿ ಬೀಜಗಳನ್ನು ನೀರಿನಲ್ಲಿ ನೆನಸಿ ಕುಡಿಯಬಹುದು. ಹೆಚ್ಚು ಖಾರ ಮತ್ತು ಮಸಾಲೆ ಪದಾರ್ಥ ಬೇಡ. ನೆಲ್ಲಿಕಾಯಿ ಜ್ಯೂಸ್ ಮತ್ತು ಮೊರಬ್ಬ ಸೇವಿಸಿ.

ದೇಹವನ್ನು ತಂಪಾಗಿಸುವ ಹೆಸರುಕಾಳನ್ನು ಬೇಯಿಸಿ ರುಬ್ಬಿಕೊಂಡು ಬೆಲ್ಲ ಸೇರಿಸಿ ಕುಡಿದರೆ ಆರೋಗ್ಯವೂ ಉತ್ತಮವಾಗುತ್ತದೆ. ಪುದಿನಾ, ಕಾಳುಮೆಣಸು, ತೆಂಗಿನಕಾಯಿ, ಇಂಗು ಮತ್ತು ಕೊತ್ತಂಬರಿ ಸೊಪ್ಪು ಸೇರಿಸಿ ತಂಬುಳಿ ಮಾಡಿ ನಿತ್ಯವೂ ಸೇವಿಸಿದರೆ ಒಳ್ಳೆಯದು.

ಪ್ರತಿದಿನ ಕನಿಷ್ಠ ಎರಡು ಲೋಟ ತಿಳಿ ಮಜ್ಜಿಗೆ ಸೇವಿಸಿ. ಮಜ್ಜಿಗೆಗೆ ಸ್ವಲ್ಪ ಉಪ್ಪು ಮತ್ತು ನೀರನ್ನು ಸೇರಿಸಿ ಸೇವಿಸಿದರೆ ಹಿತ. ಉಪ್ಪು ಹಾಕದಿದ್ದರೂ ಆಯಿತು. ಹುಣಸೆ ಹಣ್ಣು ದೇಹದ ತಾಪ ಕಡಿಮೆ ಮಾಡಲು ಸಹಾಯಕವಾಗಿದೆ. ಇದು ಹಲವಾರು ವಿಟಮಿನ್ ಮತ್ತು ಖನಿಜಗಳಿಂದ ತುಂಬಿರುವ ಸಮೃದ್ಧ ಆಹಾರವಾಗಿದೆ. ಹುಣಸೆಹಣ್ಣಿಗೆ ಸ್ವಲ್ಪ ನೀರು ಬೆರೆಸಿ ಬೆಲ್ಲ ಅಥವಾ ಜೇನುತುಪ್ಪ ಸೇರಿಸಿ ದಿನಕ್ಕೊಂದು ಬಾರಿ ಸೇವಿಸಿದರೆ ದೇಹದ ತಾಪಮಾನ ಕಡಿಮೆಯಾಗುತ್ತದೆ.

ಬೇಸಿಗೆಯಲ್ಲಿ ಧಾರಾಳವಾಗಿ ಸಿಗುವ ಮಾವಿನ ಕಾಯಿಯನ್ನು ಚೆನ್ನಾಗಿ ಬೇಯಿಸಿ ಚಿಟಿಕೆ ಉಪ್ಪು, ಜೀರಿಗೆ, ಸಕ್ಕರೆ ಸೇರಿಸಿ ಮಿಕ್ಸಿ ಮಾಡಿ ನೀರು ಸೇರಿಸಿ ಜ್ಯೂಸಿನಂತೆ ಮಾಡಿಕೊಂಡು ಮಿತವಾಗಿ ಸೇವಿಸಿ.

ಹರಳೆಣ್ಣೆ, ಕೊಬ್ಬರಿ ಎಣ್ಣೆ ಅಥವಾ ಬಾದಾಮಿ ಎಣ್ಣೆಯಿಂದ ದೇಹವನ್ನು ಮೃದುವಾಗಿ ಮಸಾಜು ಮಾಡಿಕೊಂಡರೆ ದೇಹದ ತಾಪಮಾನ ನಿಯಂತ್ರಣ ಬರುತ್ತದೆ. ಹೊರಾಂಗಣ ಚಟುವಟಿಕೆಯನ್ನು ಮಿತಿಗೊಳಿಸಿ. ಸಾಮಾನ್ಯವಾಗಿ ಪ್ರತಿದಿನ 10 ಗಂಟೆಯಿಂದ ಸಂಜೆ 5–6 ಗಂಟೆಯವರೆಗೆ ಶ್ರಮದಾಯಕ ಕೆಲಸಗಳನ್ನು ಮಾಡಬಾರದು. ಕೆಲಸಕ್ಕೆ ಹೋಗುವವರನ್ನು ಬಿಟ್ಟು ಇತರರು ಆದಷ್ಟೂ ಹೊರಗೆ ಹೋಗದಿರುವುದೇ ಒಳ್ಳೆಯದು. ಹೊರಗೆ ಹೋದರೆ ಹೆಚ್ಚು ಬಿಸಿಲಿಗೆ ಮೈ ಒಡ್ಡಬಾರದು. ಕೊಡೆಯನ್ನು ಕಡ್ಡಾಯವಾಗಿ ಬಳಸಬೇಕು. ವಿರಾಮ ತೆಗೆದುಕೊಳ್ಳಬೇಕು. ಆಗಾಗ ಕರ್ಚೀಫನ್ನು ನೀರಿನಿಂದ ತೋಯಿಸಿ ಮುಖವನ್ನು ಒರೆಸಿಕೊಳ್ಳಬೇಕು.

ಈ ಕಾಲದಲ್ಲಿ ಮಕ್ಕಳು, ವೃದ್ಧರು ಮತ್ತು ದೀರ್ಘಕಾಲದ ವೈದ್ಯಕೀಯ ಸಮಸ್ಯೆಗಳಿಂದ ಬಳಲುವವರ ಮೇಲೆ ನಿಗಾ ಇರಿಸಿ.

UASB LIBRARY

ಅಂದಗೆಡಿಸುವ ಅತಿನೇರಳೆ ಕಿರಣ



UASB LIBRARY

ಬಿಸಿಲು ಹೆಚ್ಚಾದಾಗ ಹೊರಗೆ ಹೋದರೆ ತ್ವಚೆಯ ಅಂದಗೆಡುವುದು ಸಹಜ. ಬೇಸಿಗೆಯಲ್ಲಿ ಸೂರ್ಯನ ಅತಿನೇರಳೆ ಕಿರಣಗಳು ಚರ್ಮಕ್ಕೆ ನೇರವಾಗಿ ತಾಗುವುದರಿಂದ ಸನ್‌ಬರ್ನ್ ಆಗಿ ತ್ವಚೆ ಕಳಾಹೀನವಾಗುತ್ತದೆ. ಸೌಂದರ್ಯಪ್ರಿಯರ ನಿದ್ದೆಗೆಡಿಸುವ ಈ ಸನ್‌ಬರ್ನ್, ಸನ್‌ಟ್ಯಾನ್‌ನಿಂದ ಮುಕ್ತಿ ಪಡೆಯಲೇಬೇಕಾಗಿದೆ.

■ ಉಮಾ ವೇಣೂರು

ತ್ವಚೆಯನ್ನು ಕಾಂತಿಹೀನವನ್ನಾಗಿ ಮಾಡಿ ಅಂದಗೆಡಲು ಸನ್‌ಬರ್ನ್ ದೊಡ್ಡ ಅತಂಕ. ಚಳಿಗಾಲದಲ್ಲಿ ರಾತ್ರಿ ಮತ್ತು ಬೆಳಗ್ಗಿನ ಜಾವ ಚಳಿಯ ವಾತಾವರಣವಿದ್ದರೂ ಹಗಲಿನಲ್ಲಿ ಮಾತ್ರ ಬಿಸಿಲು ಚುರುಗುಟ್ಟುತ್ತಿರುತ್ತದೆ. ವಾತಾವರಣದಲ್ಲಿ ತೇವಾಂಶವೂ ಕಡಿಮೆಯಾಗಿ ಸೂರ್ಯನ ಅತಿನೇರಳೆ ಕಿರಣಗಳು ದೇಹದ ಮೇಲೆ ಬಿದ್ದಾಗ ಸನ್‌ಬರ್ನ್ ಆಗಬಹುದು. ಹೀಗಾದಾಗ ಚರ್ಮದ ಅಂದಗೆಡುತ್ತದೆ, ಆರೋಗ್ಯ ಹದಗೆಡುತ್ತದೆ. ಅಲೊವೆರಾ ಜೆಲ್ ಹಾಕಿ ಮಸಾಜ್ ಮಾಡಿಕೊಂಡರೆ ತ್ವಚೆ ಒರಟಾಗುವುದನ್ನು ತಡೆಯಬಹುದು.

'ಬಿರು ಬಿಸಿಲು ಇದ್ದಾಗ ಹೊರಗೆ ಹೋಗಲೇ ಬೇಕೆಂದಿದ್ದಲ್ಲಿ ಮುಖ ಕೈಕಾಲುಗಳಿಗೆ ಸನ್‌ಸ್ಕ್ರೀನ್ ಲೋಷನ್ ಹಚ್ಚಿಕೊಳ್ಳಿ. ಕೊಬ್ಬರಿ ಎಣ್ಣೆಯನ್ನು ತೆಳುವಾಗಿ ಲೇಪಿಸಿಕೊಂಡರೂ ಚರ್ಮಕ್ಕೆ ಹಾನಿಯಾಗುವುದನ್ನು ತಡೆಯಬಹುದು. ಹೊರಗಿನಿಂದ ಬಂದ ಮೇಲೆ ಫೇಸ್‌ವಾಶ್ ಸಹಕಾರಿಯಾಗಬಹುದು' ಎಂದು ಸಲಹೆ ನೀಡುತ್ತಾರೆ ಬೆಂಗಳೂರಿನ ಕತ್ರಿಗುಪ್ಪೆಯಲ್ಲಿರುವ ಸೌಂದರ್ಯತಜ್ಞೆ ರೇಖಾರಾವ್.

'ಚರ್ಮ ಒಣಗದಿರಲು ಅಲೊವೆರಾ ಜೆಲ್ ಬಳಸಿ' ಎನ್ನುವ ಅವರು, ಚರ್ಮಕ್ಕೆ ಹದವಾಗಿ ಸ್ಕ್ರಬ್ ಮಾಡಿಕೊಳ್ಳುವುದು ಸಹಕಾರಿ. ಪುದಿನಾ ಅಥವಾ ತುಳಸಿಯ ಫೇಸ್‌ವಾಶ್ ಬಳಸಿದರೂ ಪರಿಣಾಮಕಾರಿಯಾಗಿರುತ್ತದೆ' ಎಂದು ಹೇಳುತ್ತಾರೆ.

'ಸಾಮಾನ್ಯವಾಗಿ ಸೂರ್ಯನ ತೀಕ್ಷ್ಣವಾದ ಕಿರಣಗಳು ಚರ್ಮದ ಅಂದಗೆಡಿಸಿ ಕಂದು ಬಣ್ಣವನ್ನಾಗಿಸುತ್ತದೆ. ಅತಿನೇರಳೆ ಕಿರಣಗಳು ಹೊರಚರ್ಮದ (Epidermis) ಕೆಳಗಿನ ಪದರಗಳು ಮತ್ತು ಮೆಲನೊಸೈಟ್ ಎಂಬ ವಿಶೇಷ ಜೀವಕೋಶವನ್ನು ಪ್ರಚೋದಿಸುತ್ತವೆ. ಈ ಜೀವಕೋಶಗಳು ಮೆಲನಿನ್ ಅನ್ನು ಉತ್ಪಾದಿಸಿ ಟ್ಯಾನಿಂಗ್ ಸಮಸ್ಯೆಯನ್ನು ತರುತ್ತದೆ.





ಹೀಗಾಗಿ ಬಿಸಿಲಲ್ಲಿ ಹೊರಗೆ ಹೋಗುವಾಗ ಎಚ್ಚರವಹಿಸಬೇಕಾಗುತ್ತದೆ' ಎನ್ನುತ್ತಾರೆ ಈ ಸೌಂದರ್ಯತಜ್ಞೆ.

ಬಿರುಬೇಸಿಗೆ ಸಮಯದಲ್ಲಿ ಮನೆಯೊಳಗೆ ಇದ್ದರೂ, ನೆರಳಿನಲ್ಲಿ ಇದ್ದರೂ ಸನ್‌ಸ್ಕ್ರೀನ್ ಲೋಷನ್ ಬಳಸುವುದು ಒಳ್ಳೆಯದು. ಸೂರ್ಯನ ಅತಿಯಾದ ಶಾಖ, ಅತಿನೇರಳೆ ಕಿರಣ ಮನೆಯೊಳಗಿನ ಕಿಟಕಿಗಳ ಮೂಲಕವೂ ಬರಬಹುದು. ಹೀಗಾಗಿ ಕೈಕಾಲು, ಮುಖ, ತೋಳುಗಳನ್ನು ರಕ್ಷಿಸಿಕೊಳ್ಳಬೇಕು. ಬೇಸಿಗೆಯಲ್ಲಿ ಒಮ್ಮೆ ಚರ್ಮ ಹಾನಿಗೊಳಗಾಯಿತು ಎಂದರೆ ಅದು ಮತ್ತೆ ಸಹಜ ಸ್ಥಿತಿಗೆ ಬರಲು ಹಲವು ಸಮಯವೇ ಬೇಕಾಗಬಹುದು. ಗುಳ್ಳೆಗಳಾದರೆ, ಸುಟ್ಟ ಗಾಯಗಳಾದರೆ ಗುಣವಾಗಲು ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ. ಸೂಕ್ತ ಚಿಕಿತ್ಸೆ ಪಡೆಯದಿದ್ದರೆ ಚರ್ಮ ಶಾಶ್ವತವಾಗಿ ಹಾನಿಗೊಳಗಾಗುವ ಅಪಾಯವಿದೆ.

ಸನ್‌ಬರ್ನ್ ಮತ್ತು ಸನ್‌ಟ್ಯಾನ್ ಎರಡೂ ಚರ್ಮದ ಆರೋಗ್ಯಕ್ಕೆ ಹಾನಿಯುಂಟು ಮಾಡುತ್ತದೆ. ಇದರಿಂದ ಸಣ್ಣ ವಯಸ್ಸಿನಿದ್ದರೂ ಹೆಚ್ಚು ವಯಸ್ಸಾದಂತೆ ಕಾಣುವ ಸಾಧ್ಯತೆ ಅಧಿಕ. ಸೂರ್ಯನ ಅತಿನೇರಳೆ ಕಿರಣಗಳಿಗೆ ನೇರವಾಗಿ ಒಡ್ಡಿಕೊಳ್ಳುವುದರಿಂದ ತ್ವಚೆ ಕಪ್ಪಾಗುತ್ತದೆ. ಇದನ್ನು ನಿವಾರಿಸಬೇಕಾದರೆ ಕೆಲವೊಂದು ಮನೆಮದ್ದುಗಳನ್ನು ಬೇಸಿಗೆಯಿದ್ದಕ್ಕೂ ಪಾಲಿಸಬೇಕು ಎನ್ನುವುದು ರೇಖಾರಾವ್ ಸಲಹೆ.

ಮನೆಯಲ್ಲೇ ಇರುವ ಅರಿಶಿನ, ಮೊಸರು, ಕಡಲೆಹಿಟ್ಟು, ನಿಂಬೆ, ಬಾದಾಮಿ, ಹಾಲು, ಈರುಳ್ಳಿ, ಬೆಳ್ಳುಳ್ಳಿ, ಸೌತೆಕಾಯಿ, ಆಲೂಗೆಡ್ಡೆ, ಟೊಮ್ಯಾಟೊ, ಅಲೊವೆರಾ ಮುಂತಾದವುಗಳನ್ನು ಬಳಸಿ ತ್ವಚೆಯ ಆರೋಗ್ಯ ಕಾಪಾಡಿಕೊಳ್ಳಬಹುದು. ಅಂದವನ್ನು ಹೆಚ್ಚಿಸಿಕೊಳ್ಳಬಹುದು.

ಅರಿಶಿನ ಚರ್ಮದ ಸಮಸ್ಯೆ ನಿವಾರಣೆಗೆ ಸಹಕಾರಿ. ಇದರಲ್ಲಿರುವ ಆ್ಯಂಟಿ ಬ್ಯಾಕ್ಟೀರಿಯಲ್ ಗುಣವು ಚರ್ಮ ಸಮಸ್ಯೆಗಳನ್ನು ಬಗೆಹರಿಸುತ್ತದೆ. ಚರ್ಮಕ್ಕೆ ಹೊಳಪು ತರುತ್ತದೆ. ತ್ವಚೆಯನ್ನು ಮೃದುವಾಗಿಸಲೂ ಸಹಕಾರಿ.

ಒಂದು ಬೌಲ್‌ನಲ್ಲಿ ಎರಡು ಚಮಚ ಅರಿಶಿನ ಪುಡಿ ಹಾಕಿ ನಾಲ್ಕು ಚಮಚ ಮೊಸರು ಸೇರಿಸಿ ಚೆನ್ನಾಗಿ ಮಿಶ್ರ ಮಾಡಿ. ಇದನ್ನು ತ್ವಚೆ, ಕೈಕಾಲುಗಳಿಗೆ ಲೇಪಿಸಿ ಸುಮಾರು ಅರ್ಧ ಗಂಟೆ ಹಾಗೆಯೇ ಬಿಟ್ಟು ತಣ್ಣೀರಿನಲ್ಲಿ ತೊಳೆದುಕೊಂಡರೆ ಸನ್‌ಟ್ಯಾನ್‌ನಿಂದ ಮುಕ್ತಿ ಪಡೆಯಬಹುದು.

ನಿಂಬೆರಸದಲ್ಲಿರುವ ವಿಟಮಿನ್ ಸಿ ಚರ್ಮದ ಆಳಕ್ಕೆ ಇಳಿದು ನಿರ್ಜೀವ ಕಣಗಳನ್ನು ತೆಗೆದುಹಾಕುತ್ತದೆ. ಇದೊಂದು ಅದ್ಭುತವಾದ ಮನೆಮದ್ದು ಆಗಿದ್ದು, ಸನ್ ಟ್ಯಾನ್ ಹೋಗಲಾಡಿಸುತ್ತದೆ. ಇದರ ಆಮ್ಲೀಯ ಗುಣವು ಚರ್ಮವನ್ನು ತೇವಾಂಶ ಕಾಪಾಡುವಂತೆ ಮಾಡುವುದರಿಂದ ಚರ್ಮ ಒಣಗುವ ಸಾಧ್ಯತೆ ಇಲ್ಲ. ತ್ವಚೆಯ ತಾಜಾತನಕ್ಕೆ ನಿಂಬೆ ಹೇಳಿಮಾಡಿಸಿದ ಮದ್ದು. ಕೈ ಮತ್ತು ಕಾಲುಗಳಿಗೆ ನಿಂಬೆಹೋಳಿನಿಂದ ನಿಧಾನವಾಗಿ ಉಜ್ಜಿ ಹದಿನೈದು ನಿಮಿಷಗಳ ನಂತರ ತೊಳೆಯಬೇಕು.

ಕಡಲೆಹಿಟ್ಟನ್ನು ಮೊಸರಿನಲ್ಲಿ ಕಲಸಿ ಮುಖಕ್ಕೆ ಹಚ್ಚುವುದರಿಂದ ಮುಖದ ಚರ್ಮ ನಯವಾಗುತ್ತದೆ. ಆದರೆ ಒಣತ್ವಚೆಯವರಿಗೆ ಈ ಮನೆಮದ್ದು ಹಿತಕಾರಿಯಲ್ಲ.

ಅಲೊವೆರಾ ಅಥವಾ ಲೋಳೆಸರ ಸರ್ವಕಾಲಕ್ಕೂ ಉತ್ತಮ ಸೌಂದರ್ಯವರ್ಧಕ. ಮಾರುಕಟ್ಟೆಯಲ್ಲಿ ಸಿಗುವ ಅಲೊವೆರಾ ಜೆಲ್ ಬಳಸುವುದಕ್ಕಿಂತಲೂ ಮನೆಯಲ್ಲೇ ಬೆಳೆದಿರುವ ತಾಜಾ ಅಲೊವೆರಾ ಬಳಕೆ ಹೆಚ್ಚು ಪರಿಣಾಮಕಾರಿ. ಬಿಸಿಲಿನಿಂದ ಹಾನಿಗೊಳಗಾದ ಚರ್ಮಕ್ಕೆ ಅಲೊವೆರಾ ಉತ್ತಮ ಮದ್ದು. ಇದರಲ್ಲಿನ ಉತ್ಕರ್ಷಣ ನಿರೋಧಕಗಳು ಅನೇಕ ಚರ್ಮ ಸಮಸ್ಯೆಗಳಿಂದ ಪಾರು ಮಾಡುತ್ತದೆ.

ಬಾದಾಮಿ ವಿಟಮಿನ್‌ನಿಂದ ಸಮೃದ್ಧವಾಗಿದೆ. ಬಿರುಬೇಸಿಗೆ ಕಾಲದಲ್ಲಿ ಅನ್ನು ಚರ್ಮಕ್ಕೆ ಆರೋಗ್ಯ ಲಾಭ ಪಡೆಯಬಹುದು. ಅಲ್ಲದೆ ಇದು ಚರ್ಮವನ್ನು ಹೊಳಪಾಗಿಸಿ, ಮೃದುವಾಗಿಸುತ್ತದೆ. ಸನ್‌ಟ್ಯಾನ್‌ನಿಂದ ಪಾರು ಮಾಡುತ್ತದೆ.

ಸೌತೆಕಾಯಿ ತಂಪುಗುಣವನ್ನು ಹೊಂದಿರುವುದರಿಂದ ದೇಹವನ್ನು ಕಾಂತಿಯುಕ್ತವಾಗಿಸಲು ಸಹಕಾರಿ. ಬಿಸಿಲಿನಿಂದ ಸುಟ್ಟ ಚರ್ಮಕ್ಕೆ ಇದು ಸಂಜೀವಿನಿಯಂತೆ ಕೆಲಸ ಮಾಡುತ್ತದೆ. ಕಣ್ಣುಗಳ ಸುತ್ತ ಇರುವ ಕಪ್ಪುವರ್ತುಲವನ್ನು ಹೋಗಲಾಡಿಸುತ್ತದೆ. ಇದರಲ್ಲಿರುವ ನೀರಿನ ಅಂಶವು ಚರ್ಮವನ್ನು ಹೈಡ್ರೇಟ್ ಮಾಡುತ್ತದೆ. ಜೀವಸತ್ವಗಳು ಸೂರ್ಯನ ಬೆಳಕಿನಿಂದ ಉಂಟಾಗುವ ಹಾನಿಯನ್ನು ಕಡಿಮೆ ಮಾಡುತ್ತದೆ.

ಸೌತೆಕಾಯಿ ಹೋಳುಗಳು ಮತ್ತು ರಸವನ್ನು ನೇರವಾಗಿ ಚರ್ಮಕ್ಕೆ ಹಚ್ಚಬಹುದು, ಇದು ಚರ್ಮವನ್ನು ಪುನರುಜ್ಜೀವನಗೊಳಿಸುತ್ತದೆ. ಇದೇ ರೀತಿ ಆಲೂಗೆಡ್ಡೆ ಕೂಡ ಪರಿಣಾಮಕಾರಿ ಮನೆಮದ್ದು.

ನಾಲ್ಕು ಸ್ಪೂನ್ ಬೆರಿ ಹಣ್ಣಿನ ರಸಕ್ಕೆ ಒಂದು ಚಮಚ ಕೆನೆ ಹಾಕಿ ಚೆನ್ನಾಗಿ ಅರೆದು ಪೇಸ್ಟ್ ತಯಾರಿಸಿ ಮುಖಕ್ಕೆ ಹಚ್ಚಿದರೆ ತ್ವಚೆ ಮೃದುವಾಗುತ್ತದೆ.

ಮೂರು ಚಮಚ ತೆಂಗಿನ ಹಾಲಿನೊಂದಿಗೆ ಒಂದು ಚಮಚ ಗುಲಾಬಿ ಜಲ ಹಾಗೂ ಎರಡು ಚಮಚ ಅಲೊವೆರಾ ಜೆಲ್ ಬೆರೆಸಿ ಒಂದು ಶುಭ್ರವಾದ ಬಾಟಲಿಗೆ ಹಾಕಿ ಇಡಿ. ದಿನಕ್ಕೆ ಎರಡು ಬಾರಿ ಇದನ್ನು ಹಚ್ಚುವುದರಿಂದ ಚರ್ಮದ ಬಿರುಕುಗಳು ಮಾಯವಾಗಿ ತ್ವಚೆ ರೇಷ್ಮೆಯಂತೆ ಹೊಳೆಯುತ್ತದೆ.

ಆಲೂಗೆಡ್ಡೆ ಹಾಗೂ ಒಂದು ಕ್ಯಾರೆಟ್ ತುರಿದು ಅದರ ರಸ ತೆಗೆದು ಒಂದು ಚಮಚ ಜೇನುತುಪ್ಪ, ಎರಡು ದೊಡ್ಡ ಚಮಚ ರೋಸ್ ವಾಟರ್ ಸೇರಿಸಿ ಚೆನ್ನಾಗಿ ಮಿಕ್ಸ್ ಮಾಡಿ ಮುಖಕ್ಕೆ, ಕೈಕಾಲುಗಳಿಗೆ ಹಚ್ಚಿಕೊಳ್ಳಿ. ಇದರಿಂದ ಸನ್ ಟ್ಯಾನ್ ತಪ್ಪಿಸಬಹುದು.

ಬಿಸಿಲಿನಲ್ಲಿ ಹೊರಗೆ ಹೋಗುವಾಗ ತೆಳುವಾಗಿ ಫೌಂಡೇಷನ್ ಕ್ರೀಮ್ ಲೇಪಿಸಿಕೊಳ್ಳಿ, ಮಾಯಶ್ಚರೈಸರ್ ಕೂಡ ಬಳಸಬಹುದು.

ಮಾರುಕಟ್ಟೆಯಲ್ಲಿ ಸಿಗುವ ದುಬಾರಿ ಸೌಂದರ್ಯವರ್ಧಕ ಬಳಸುವ ಬದಲಾಗಿ ಮನೆಯಲ್ಲೇ ಇರುವ ಉತ್ಪನ್ನಗಳಿಂದ ಸೌಂದರ್ಯ ಕಾಪಾಡಿಕೊಳ್ಳಬಹುದು. ರಾಸಾಯನಿಕಮುಕ್ತವಾಗಿರುವ ಈ ಮನೆಮದ್ದು ಸನ್‌ಬರ್ನ್, ಸನ್‌ಟ್ಯಾನ್‌ಗಳಿಂದ ರಕ್ಷಣೆ ಕೊಡುತ್ತದೆ. ಬೇಸಿಗೆಯಲ್ಲಿ 'ಚಂದ ಕಾಣಾಕ' ಹರಸಾಹಸ ಪಡುವ ಸೌಂದರ್ಯಪ್ರಿಯರು ಈ ಎಲ್ಲಾ ಟಿಪ್ಸ್‌ಗಳನ್ನು ಪಾಲಿಸಿ ಅಂದವಾಗಿ ಕಾಣಬಹುದು.



UASB LIBRARY



ನಿಮ್ಮ ಪುಟ

ಕಣ್ಮರೆಯಾದ ಸುಣ್ಣದ ಗುಮ್ಮಿ

ಅಮಾವಾಸ್ಯೆ ಮತ್ತು ಹುಣ್ಣಿಮೆಗಳಿಗೆ ತೊಳೆಯೋದು, ಬಳಿಯೋದು ಹಿಂದಿನ ಕಾಲದಲ್ಲಿ ಸಾಮಾನ್ಯವಾಗಿತ್ತು. ಪ್ರತಿ ಹಳ್ಳಿಗಳು ಸುಣ್ಣದ ಗುಮ್ಮಿಗಳೆಂಬ ಸಿಲಿಂಡರ್ ಆಕಾರದ ಗೂಡುಗಳನ್ನು ಊರ ಹೊರಗಿನ ಬಯಲಿನಲ್ಲಿ ಹೊಂದಿರುತ್ತಿದ್ದವು. ಅವುಗಳೆಂದು ಅಪರೂಪವಾಗಿವೆ. ಈಗೆನಿದ್ದರೂ ಸಿಂಥೆಟಿಕ್ ಬಣ್ಣದ್ದೇ ಪಾರುಪತ್ಯ. ಇದು ಹಳ್ಳಿಹಳ್ಳಿಗೂ ಬಂದಾಗಿದೆ. ಹಬ್ಬ ಹರಿದಿನ ಬಂದಾಗಲೆಲ್ಲ ನೆನಪಾಗುತ್ತಿದ್ದ ಸುಣಗಾರ ಹನುಮವ್ವ ಮರೆತು ಹೋಗಿದ್ದಾಳೆ. ಬಣ್ಣಗಳ ಭರಾಟೆಯಲ್ಲಿ ಸುಣ್ಣ ತನ್ನ ಅಸ್ತಿತ್ವ ಕಳೆದುಕೊಳ್ಳುತ್ತಿದೆ. ಬೇಕಾದಾಗ ಅಂಗಡಿಯಲ್ಲಿ ದೊರೆಯುವ ಪಾಕೆಟ್ ಸುಣ್ಣಕ್ಕೆ ಮೊರೆ ಹೋಗುತ್ತಿದ್ದೇವೆ.

ಮುಂಡರಗಿ ತಾಲ್ಲೂಕಿನಲ್ಲಿ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಡಂಬಳ ಗ್ರಾಮವಿದೆ. ಅಲ್ಲಿ ಇಂದಿಗೂ ಸುಣ್ಣದ ಗುಮ್ಮಿಗಳನ್ನು ಕಾಣಬಹುದು. ಅಲ್ಲಿ ಈಗಲೂ ಸುಣ್ಣದ ಕಲ್ಲುಗಳನ್ನು ಸುಡಲಾಗುತ್ತದೆ. ಸುಣ್ಣದ ಕಲ್ಲನ್ನು ಸಣ್ಣ ಸಣ್ಣ ತುಂಡುಗಳನ್ನಾಗಿ ಮಾಡಿ, ಕಟ್ಟಿಗೆಯ ಚಿಕ್ಕ ತುಂಡುಗಳು ಮತ್ತು ಇದ್ದಿಲಿನೊಂದಿಗೆ ಬೆರಸಿ, ಗುಮ್ಮಿಗಳಿಗೆ ತುಂಬಲಾಗುತ್ತದೆ. ನಂತರ ಗುಮ್ಮಿಯ ತಳಭಾಗದಲ್ಲಿ ಬೆಂಕಿ ಹಚ್ಚಿದಾಗ, ನಿಧಾನವಾಗಿ ಅದರೊಳಗೆ 700ರಿಂದ 800 ಡಿಗ್ರಿ ಸೆಲ್ಸಿಯಸ್‌ವರೆಗೆ ತಾಪ ಹೆಚ್ಚಿ, ಸುಣ್ಣದ ಕಲ್ಲುಗಳು ಕಾರ್ಬನ್ ಡೈ ಆಕ್ಸೈಡ್ ಹೊರ ಹಾಕಿ, ಸುಟ್ಟ ಸುಣ್ಣವಾಗಿ ಪರಿವರ್ತನೆ ಆಗುತ್ತದೆ. ಇದನ್ನು ಬುಟ್ಟಿಯಲ್ಲಿ ಹೊತ್ತು ಮಾರುತ್ತಿದ್ದರು. ಮನೆಗೆ ಬಳಿಯುವಾಗ ಸುಟ್ಟ ಸುಣ್ಣಕ್ಕೆ ನೀರು ಹಾಕಿದಾಗ, ಆರಳಿದ ಸುಣ್ಣವಾಗುತ್ತಿತ್ತು. ಇದನ್ನು ಗೋಡೆಗೆ ಹಚ್ಚಿದಾಗ, ಗಾಳಿಯಲ್ಲಿರುವ ಕಾರ್ಬನ್ ಡೈ ಆಕ್ಸೈಡ್‌ನೊಡನೆ ವರ್ತಿಸಿ ಮತ್ತೆ ಕ್ಯಾಲ್ಸಿಯಮ್ ಕಾರ್ಬೋನೇಟ್ (ಸುಣ್ಣದ ಕಲ್ಲು) ಆಗಿ ಗೋಡೆ ಬೆಳ್ಳಗೆ ಕಾಣುತಿತ್ತು.

–ರವಿ ಸೋ. ದೇವರಡ್ಡಿ, ಮುಂಡರಗಿ





ಬೆಲ್ಲದ ಜೊತೆಗೆ ಸಿಹಿಯ ಸ್ವಾದ

ಅಯ್ಯೋ... ಇದೇನು ಐಸ್ ಕ್ರೀಮ್ ಎಂದುಕೊಂಡಿರಾ... ಖಂಡಿತ ಅಲ್ಲ. ಮಲೆನಾಡಿನ ಆಲೆಮನೆ ಸಂಭ್ರಮದಲ್ಲಿ ಇಂತಹ ಅನೇಕ ಅನುಭವದ ನೋಟಗಳು ನಮ್ಮನ್ನು ಬೆರಗಾಗಿಸುತ್ತವೆ. ಮಕ್ಕಳಿಂದ ಮುದುಕರವರೆಗೆ ಜೋನಿ ಬೆಲ್ಲ ತಿನ್ನಲು ತೆಂಗಿನಕಾಯಿ ಗೊರಟೆ ಕೆತ್ತುವುದು, ಅದಕ್ಕೆ ಬಿದಿರಿನ ಚಮಚ ಮಾಡುವುದು, ಅಡಿಕೆ ಹಾಳೆ ಕೊಟ್ಟೆ ಕಟ್ಟಿ ಕಬ್ಬಿನ ಹಾಲು ಕುಡಿಯುವುದು ಸಾಮಾನ್ಯವಾಗಿ ಕಂಡುಬರುತ್ತದೆ. ಕೊಪ್ಪರಿಗೆಯಲ್ಲಿ ಬೆಲ್ಲ ಹದ ಬರಲು ಮೂರು ತಾಸು ಬೇಕಾಗುತ್ತದೆ. ಈ ನಡುವೆ ಅದರಲ್ಲಿ ಕಬ್ಬಿನ ಹಾಲು ಕಾಯಿಸುವಾಗ ಖರ್ಚಿಲ್ಲದೆ, ಸಿಹಿ ತಿನಿಸೊಂದು ತಯಾರಾಗುತ್ತದೆ. ಅದು ಮಾರುಕಟ್ಟೆಯಲ್ಲಿ ಸಿಗದ, ಯಾವ ಕಂಪನಿಯೂ ಉತ್ಪಾದಿಸದ, ಇತರೆ ತಿಂಡಿ ತಿನಿಸುಗಿಂತಲೂ ಸ್ವಾದಭರಿತ ಸಿಹಿ.

ಬೆಲ್ಲದ ಕೊಪ್ಪರಿಗೆಯ ಬಳಿಗಳಿಗೆ ನೇತು ಬೀಳುವ ಸಿಹಿ ಸ್ವಾದವನ್ನು ಬಲ್ಲವರೇ ಬಲ್ಲರು. ಕಬ್ಬಿನ ಹಾಲು ಕುದಿಯುವ ಸಂದರ್ಭದಲ್ಲಿ ಅದೇ ಕೊಪ್ಪರಿಗೆಯ ಬಳಿಗಳಿಗೆ ಬಾಳೆದಿಂಡು, ಕೊಬ್ಬರಿ, ಪಪ್ಪಾಯಿ ಚೂರುಗಳನ್ನು ಪಂಜಿಯಲ್ಲಿ ಕಟ್ಟಿ ಬೇಯಿಸಲಾಗುತ್ತದೆ. ಬಿಸಿ ಬೆಲ್ಲದ ಜೊತೆ ಬೆಂದು ತಯಾರಾಗುವ ಈ ಸಿಹಿಯ ಸ್ವಾದ ನಾಲಗೆಯ ರುಚಿಗೆ ಅಚ್ಚುಮೆಚ್ಚು. ಆರೋಗ್ಯಯುಕ್ತ ಜೀವನ ಶೈಲಿಯ ಅಂಶಗಳು ಬೆಲ್ಲದ ಕೊಪ್ಪರಿಗೆಯಲ್ಲಿ ಅಡಕವಾಗಿದ್ದು, ಈ ದೇಸಿಯತೆ ಉಳಿಸಿಕೊಳ್ಳುವ ಕಾಳಜಿ ನಮ್ಮದಾಗಬೇಕಿದೆ.

–ದತ್ತಾತ್ರೇಯ ಭಟ್ಟ, ಕಣ್ಣಿಪಾಲ

ಬಹುಪಯೋಗಿ ಮರದ ಮರಿಗೆ

ಮರಿಗೆ, ಮರ್ಗಿ, ಪಟಾರಿ ಇತ್ಯಾದಿ ಸ್ಥಳೀಯವಾಗಿ ಬೇರೆ ಬೇರೆ ಹೆಸರಿನಿಂದ ಕರೆಯುವ ಇದು ದೋಣಿಯಾಕಾರದ ಮರದ ಪಾತ್ರೆ. ಆಕಾರದಲ್ಲಿ ದೊಡ್ಡದು. ನೂರಾರು ವರ್ಷಗಳ ಹಿಂದೆ ಜನರಿಗೆ, ವಿಶೇಷವಾಗಿ ಹಳ್ಳಿಮನೆಗಳ ರೈತರಿಗೆ ಆಹಾರಧಾನ್ಯಗಳನ್ನು ಸಂಗ್ರಹಿಸಿಡಲು ಮರದಿಂದ ತಯಾರಿಸಲಾದ ಇಂತಹ ದೊಡ್ಡ ಪಾತ್ರೆಯೇ ಹೆಚ್ಚು ಸುರಕ್ಷಿತ ಮತ್ತು ಅನುಕೂಲಕರ. ಇಲಿ, ಹೆಗ್ಗಣ, ಗೆದ್ದಲು, ಇರುವೆಗಳಿಗೆ ಸಿಗದಂತೆ ಮತ್ತು ವಾತಾವರಣದ ತೇವಾಂಶದಿಂದ ಆಹಾರ ಧಾನ್ಯಗಳು, ಕಾಳುಗಳು ಹಾಳಾಗದಂತೆ ಸಂರಕ್ಷಿಸಲು ಈ ಮರದ ಪಾತ್ರೆಯು ಬಹುಮುಖ್ಯ ಪಾತ್ರವಹಿಸಿತ್ತು. ಧಾನ್ಯಗಳನ್ನು ಮನೆಯಲ್ಲೇ ಸಂಗ್ರಹ ಮಾಡಿಟ್ಟುಕೊಂಡು, ಅವನ್ನು ಅವಶ್ಯಕತೆ ಇದ್ದಾಗ ಬಳಸುವುದು ರೈತರು ಅನುಸರಿಸುವ ಸಾಮಾನ್ಯ ಕ್ರಮವಾಗಿತ್ತು.

2–5 ಕ್ವಿಂಟಲ್‌ವರೆಗೂ ಧಾನ್ಯಗಳನ್ನು ಮರಿಗೆಯಲ್ಲಿ ಗಾಳಿಯಾಡದಂತೆ ಬೆಚ್ಚಗೆ ಇಡಬಹುದು. ಪಶುಆಹಾರ, ಹಿಂಡಿ, ಅಕ್ಕಿದೂಳು, ಗೋಧಿಬೂಸಾ ಮೊದಲಾದ ಪಶು ಆಹಾರವನ್ನೂ ಇದರಲ್ಲಿ ಸಂಗ್ರಹಿಸಬಹುದು. ಒಟ್ಟಾರೆ ಇದೊಂದು ಸೂಕ್ತ ಮುಚ್ಚಳವೂ ಇರುವ, ಬಹುಪಯೋಗಿ ಎನಿಸಿರುವ ಮರದ ಪಾತ್ರೆಯಾಗಿದೆ. ಈಗಿನ ಕಾಲಕ್ಕೆ ಇದು ಅಪರೂಪ.

–ಅರ್ಚನಾ ಜಿ. ಬೊಮ್ಮಳ್ಳಿ



UASB LIBRARY



ಬೆಂಕಿಕಡ್ಡಿಗಳಿಂದ ಕಲಾತ್ಮಕ ಶಿವಲಿಂಗ

ಬೆಂಕಿಕಡ್ಡಿಮಯ ಆಗಿರುವ ಈ ಶಿವಲಿಂಗದ ಪ್ರತಿಮೆಯು ಉಡುಪಿಯ ಮಣಿಪಾಲ ಸನಿಹದ ಪರೀಕಾದಲ್ಲಿರುವ ಧರ್ಮಸ್ಥಳ ಮಂಜುನಾಥೇಶ್ವರ ಯೋಗ ಮತ್ತು ಪ್ರಕೃತಿ ಚಿಕಿತ್ಸಾಲಯದಲ್ಲಿದೆ. ಚಿಕಿತ್ಸಾಲಯದ ಒಳ ಪ್ರವೇಶಿಸಿದ ನಂತರ ಕಾಣಸಿಗುವ ಈ ಶಿವಲಿಂಗಕ್ಕೆ ಭಕ್ತಿಯಿಂದ ಕೈ ಮುಗಿಯುತ್ತಲೇ ಕೆಳಗೆ ನಮೂದಿಸಲಾಗಿರುವ, 'ಒಟ್ಟು 16,400 ಬೆಂಕಿಕಡ್ಡಿಗಳಿಂದ ರಚಿಸಲಾಗಿದೆ' ಎಂಬ ಸೂಚನೆ ಗಮನಸೆಳೆಯುತ್ತದೆ. ಆಗ ಸನಿಹ ದೃಷ್ಟಿಯಿಂದ ಆಮೂಲಾಗ್ರವಾಗಿ ಪರಿಶೀಲಿಸಿದಾಗ ಕಲಾ ಸೃಷ್ಟಿಯ ಅದ್ಭುತ ಗೋಚರಕ್ಕೆ ನಿಲುಕುತ್ತದೆ. ಅಷ್ಟೊಂದು ಬೆಂಕಿಕಡ್ಡಿಗಳನ್ನು ಬಳಸಿ ಇದರ ಮೇಲ್ಮೈಯನ್ನು ಅಲಂಕರಿಸಿ ರಚಿಸಲಾಗಿದೆ. ಮೂಲ ಶಿಲಾವಿಗ್ರಹದ ಪೀಠ, ಶಿವಲಿಂಗ, ನಾಗಹೆಡೆಗಳ ಮೇಲೆಲ್ಲಾ ಬೆಂಕಿಕಡ್ಡಿಗಳನ್ನು ಒತ್ತೊತ್ತಾಗಿ ಜೋಡಿಸಿ ನಿರ್ಮಿಸಲಾಗಿದೆ. ಶಿವಲಿಂಗದ ಮೇಲ್ಮೈಗೆ ಕಪ್ಪು ಬಣ್ಣವನ್ನೂ ಪೀಠ ಮತ್ತು ನಾಗಹೆಡೆಗಳಿಗೆ ಹಳದಿ ಬಣ್ಣವನ್ನೂ ಒಪ್ಪುವಂತೆ ಬಳಿದು ಸ್ವಾಭಾವಿಕ ಶಿವಲಿಂಗವೆಂಬಂತೆ ನಿರ್ಮಿಸಲಾಗಿದೆ.

–ರಮಣ್ ಶೆಟ್ಟಿ ರೆಂಜಾಳ, ಮುಂಬೈ

ಉದ್ಯಾನ ನಗರದಲ್ಲಿ ಕಬ್ಬಿಣದ ವೀಣೆ

ಕಾರ್ಖಾನೆಯಲ್ಲಿ ಬಳಸುವ ಚಕ್ರಗಳು, ಗೇಟುಗಳಿಗೆ ಬಳಸುವ ಸಣ್ಣ ಪುಟ್ಟ ಅಲಂಕಾರಿಕ ತುಂಡುಗಳು, ಚೂಪು ಕಡ್ಡಿಗಳು, ಸರಪಳಿಗಳು, ಬೈಸಿಕಲ್ ಪೆಡಲ್‌ಗಳು, ನಟ್ಟು ಬೋಲ್ಟುಗಳು ಹೀಗೆ ಕಬ್ಬಿಣದ ನಾನಾ ರೀತಿಯ ಬಿಡಿ ಭಾಗಗಳು ಸುಂದರ ವೀಣೆಯಾಗಿ ಇಲ್ಲಿ ರೂಪುಗೊಂಡಿದೆ. ಸಾಮಾನ್ಯರಾರು ಲೆಕ್ಕಕ್ಕೂ ಮೀರಿದ ಕಚ್ಚಾ ವಸ್ತುಗಳನ್ನು ಬಳಸಿ ಅತ್ಯಂತ ನಾಜೂಕಿನಿಂದ ರೂಪಿಸಿದ ಈ ವೀಣೆಯ ಪ್ರತಿಕೃತಿಯು ಕಂಡುಬಂದದ್ದು ಬೆಂಗಳೂರು ದಕ್ಷಿಣ ಭಾಗದ ಬೇಗೂರು ದಾರಿ ಬದಿಯಲ್ಲಿ.



ಈ ಭಾಗದ ಸರ್ ಎಂ. ವಿಶ್ವೇಶ್ವರಯ್ಯ ಮುಖ್ಯ ರಸ್ತೆಯ ಸರ್ಕಲ್‌ನಲ್ಲಿ ಇರುವ ಈ ವೀಣೆಯ ದಾರಿಹೋಕರನ್ನು ಅತ್ಯಾಕರ್ಷಕವಾಗಿ ಸೆಳೆಯುತ್ತಿದೆ. ಈ ವೀಣೆಯ ಉದ್ದ ಸುಮಾರು ಇಪ್ಪತ್ತ ಮೂರು ಅಡಿ ಉದ್ದ ಹಾಗೂ ಹತ್ತು ಅಡಿ ಅಗಲ. ಹಳದಿ ಮಿಶ್ರಿತ ಬಣ್ಣ ಇದರದ್ದು. ಆದರೆ, ಸೂಕ್ಷ್ಮ ನಿರ್ವಹಣೆಯ ಕೊರತೆ ಇಲ್ಲಿ ಎದ್ದು ಕಾಣುತ್ತಿದೆ. ಇದರ ಸುತ್ತಲೂ ಕಬ್ಬಿಣದ ತಂತಿಗಳ ಬೇಲಿ ಹಾಕಿದ್ದರೆ ಬಹುಶಃ ಇನ್ನೂ ಚೆನ್ನಾಗಿ ಇರುತ್ತಿತ್ತು.

–ಆರ್. ವೀರೇಶ್ ಕುಮಾರ್, ಬೆಂಗಳೂರು

UASB LIBRARY



ಬೆಂಕಿ ನಿರೋಧಕ ಮರ

ಅಮೆರಿಕದ 'ಸೆಕ್ವೋಯಾ ಮತ್ತು ಕಿಂಗ್ಸ್ ಕ್ಯಾನ್ಯನ್' ರಾಷ್ಟ್ರೀಯ ಉದ್ಯಾನವನಗಳಲ್ಲಿ ಕಂಡುಬರುವ ಸೆಕ್ವೋಯಾ ಮರಗಳು ಪ್ರಪಂಚದಾದ್ಯಂತ ಪ್ರವಾಸಿಗರನ್ನು ಸೆಳೆಯುತ್ತವೆ. ಸೆಕ್ವೋಯಾಗಳ ಮರ ಮತ್ತು ತೊಗಟೆಯಲ್ಲಿರುವ ಟ್ಯಾನಿನ್ ಎಂಬ ರಾಸಾಯನಿಕವು ಮರ ಜೀವ ಕಳೆದುಕೊಂಡ ಬಳಿಕವೂ ಬೇಗ ಕೊಳೆಯದಂತೆ ನೋಡಿಕೊಳ್ಳುತ್ತದೆ. ಈ ಮರಗಳು ಬೆಂಕಿ ನಿರೋಧಕ ಗುಣದವು. ದಟ್ಟವಾದ ತೊಗಟೆಯನ್ನು ಹೊಂದಿರುವ ಈ ಮರಗಳು ಬೆಂಕಿಗೆ ಪ್ರತಿರೋಧ ಒಡ್ಡುತ್ತವೆ.

ಮರಗಳು ಸತ್ತರೂ ಅವುಗಳ ಕಾಂಡಗಳು ನೂರಾರು ವರ್ಷಗಳ ಕಾಲ ಕಾಡಿನಲ್ಲಿ ಉಳಿಯುತ್ತವೆ. ದೀರ್ಘಕಾಲದವರೆಗೆ ಉಳಿಯುವ ಈ ಮರಗಳನ್ನು ವಿಜ್ಞಾನಿಗಳು ಇಲ್ಲಿನ ಸ್ಥಳೀಯ ಪರಿಸರದ ವ್ಯವಸ್ಥೆಯನ್ನು ಅರ್ಥಮಾಡಿಕೊಳ್ಳಲು ಸಂಶೋಧನೆಗೆ ಬಳಸುತ್ತಾರೆ. ಬಿದ್ದ ದೈತ್ಯ ಮರವೊಂದು ಶತಮಾನಕ್ಕೂ ಹಿಂದಿನ ಕಾಲ ಇದ್ದಂತೆಯೇ ಕಾಣುತ್ತಿತ್ತು. ಇಂತಹದ್ದೇ ಮರದ ದೈತ್ಯ ಮರದ ಒಳಭಾಗದ ಟೊಳ್ಳಿನೊಳಗೆ ನಿಂತು ತೆಗೆದ ಚಿತ್ರ ಯಾವುದೋ ಸುರಂಗದೊಳಗೆ ನಿಂತ ಹಾಗೆ ಕಾಣುತ್ತದೆ.

–ಎಸ್. ಪ್ರಭಾವತಿ, ಬೆಂಗಳೂರು

ಆಹಾ, ಮಾವಿನಕಾಯಿ ವ್ಯಂಜನ





ಮಾವಿನಕಾಯಿ ಎಂದಾಕ್ಷಣ ಬಾಯಿಯಲ್ಲಿ ನೀರೂರುತ್ತದೆ. ಉಪ್ಪು, ಖಾರ ಹಾಕಿ ಮೆಲ್ಲುವ ರುಚಿಯೇ ಅದ್ಭುತ. ಇದರಿಂದ ತಯಾರಿಸುವ ವ್ಯಂಜನಗಳು ಅಷ್ಟೇ ರುಚಿಕರ.

■ ಪುಷ್ಪ ಎನ್.ಕೆ. ರಾವ್



UASB LIBRARY

ಮಾವಿನಕಾಯಿ ಚಟ್ನಿ

ಏನೇನು ಬೇಕು?

- ಮಾವಿನಕಾಯಿ ಒಂದು
- ತೆಂಗಿನತುರಿ ಒಂದು ಬಟ್ಟಲು
- ಹಸಿಮೆಣಸಿನಕಾಯಿ ನಾಲ್ಕು
- ಸಾಸಿವೆ ಎರಡು ಚಮಚ
- ಉಪ್ಪು ರುಚಿಗೆ
- ಉದ್ದಿನ ಬೇಳೆ, ಕಡಲೆ ಬೇಳೆ ಒಂದೊಂದು ಚಮಚ
- ಎಣ್ಣೆ ಎರಡು ಚಮಚ
- ಕರಿಬೇವು

ಮಾಡೋದು ಹೇಗೆ?

ಮಾವಿನಕಾಯಿ ಸಿಪ್ಪೆ ತೆಗೆದು ಸಣ್ಣ ಹೋಳುಗಳಾಗಿ ಮಾಡಿ. ಒಂದು ಮಿಕ್ಸಿ ಜಾರಿಗೆ ತೆಂಗಿನತುರಿ, ಮಾವಿನಕಾಯಿ ಹಸಿಮೆಣಸಿನಕಾಯಿ, ಉಪ್ಪು, ಒಂದು ಚಮಚ ಸಾಸಿವೆ ಹಾಕಿ ಚೆನ್ನಾಗಿ ರುಬ್ಬಿ. ಒಂದು ಬೌಲ್‌ಗೆ ತೆಗೆಯಿರಿ. ಈಗ ಒಂದು ಸೌಟಿನಲ್ಲಿ ಎಣ್ಣೆ, ಉದ್ದಿನ ಬೇಳೆ, ಸಾಸಿವೆ, ಕಡಲೆ ಬೇಳೆಯನ್ನು ಹಾಕಿ ಕರಿಬೇವಿನೊಂದಿಗೆ ಒಗ್ಗರಣೆ ಕೊಡಿ.

ಮಾವಿನಕಾಯಿ ಸಾರು

ಮಾಡೋದು ಹೇಗೆ?

ಮಾವಿನಕಾಯಿಯನ್ನು ಸಿಪ್ಪೆ ತೆಗೆದು ಹೋಳು ಮಾಡಿ ಮೆತ್ತಗೆ ಬೇಯಿಸಿಡಿ. ಆರಿದ ನಂತರ ಮಿಕ್ಸಿಗೆ ಹಾಕಿ ರುಬ್ಬಿ. ಒಂದು ಪಾತ್ರೆಗೆ ಎರಡು ಲೋಟ ನೀರು ಹಾಕಿ ಕುದಿಯಲು ಇಡಿ. ಇದಕ್ಕೆ ಅರಿಶಿನ, ಉಪ್ಪು, ಬೆಲ್ಲ, ಒಂದು ಚಮಚ ಜೀರಿಗೆ, ಪುಡಿ ಮಾಡಿದ ಕರಿಮೆಣಸನ್ನು ಸೇರಿಸಿ ಕುದಿಸಿ. ನಂತರ ರುಬ್ಬಿದ ಮಾವಿನಕಾಯಿ ಹಾಕಿ ಚೆನ್ನಾಗಿ ಮಿಶ್ರಮಾಡಿ ಮತ್ತೊಮ್ಮೆ ಕುದಿಸಿ. ತುಪ್ಪದಲ್ಲಿ ಒಗ್ಗರಣೆ ಕೊಟ್ಟು, ಇಂಗಿನ ನೀರನ್ನು ಸೇರಿಸಿ ಕೊತ್ತಂಬರಿ ಸೊಪ್ಪನ್ನು ಹಾಕಿ. ಬಾಯಿ ರುಚಿಗೆ ಸೊಗಸಾದ ಸಾರು ಸಿದ್ಧ.

ಏನೇನು ಬೇಕು?

- ಮಾವಿನಕಾಯಿ ಎರಡು
- ಹಸಿಮೆಣಸಿನಕಾಯಿ ಎರಡು
- ಜೀರಿಗೆ ಒಂದು ಚಮಚ
- ಕರಿಮೆಣಸು ನಾಲ್ಕು
- ಅರಿಶಿನ ಪುಡಿ ಅರ್ಧ ಚಮಚ
- ಇಂಗು ಸ್ವಲ್ಪ
- ಉಪ್ಪು ರುಚಿಗೆ
- ಬೆಲ್ಲ ಸ್ವಲ್ಪ
- ಕೊತ್ತಂಬರಿ ಸೊಪ್ಪು ಸ್ವಲ್ಪ
- ಒಗ್ಗರಣೆಗೆ ತುಪ್ಪ, ಸಾಸಿವೆ, ಜೀರಿಗೆ, ಕರಿಬೇವು





ಮಾವಿನಕಾಯಿಯ ಪಲ್ಯ

ಏನೇನು ಬೇಕು?

- ತೋತಾಪುರಿ ಮಾವಿನಕಾಯಿ ಎರಡು
- ಬ್ಯಾಡಗಿ ಮೆಣಸು ಐದು
- ತೆಂಗಿನ ತುರಿ ಅರ್ಧ ಬಟ್ಟಲು
- ಎಣ್ಣೆ ಎರಡು ಚಮಚ
- ಉದ್ದಿನ ಬೇಳೆ ಎರಡೂವರೆ ಚಮಚ
- ಕಡಲೆ ಬೇಳೆ ಎರಡು ಚಮಚ
- ಬೆಲ್ಲದ ಪುಡಿ ಒಂದೂವರೆ ಚಮಚ
- ಉಪ್ಪು ರುಚಿಗೆ
- ಒಗ್ಗರಣೆಗೆ ಸಾಸಿವೆ, ಉದ್ದಿನ ಬೇಳೆ, ಕಡಲೆ ಬೇಳೆ, ಕರಿಬೇವು

ಮಾಡೋದು ಹೇಗೆ?

ಮಾವಿನಕಾಯಿ ಸಿಪ್ಪೆ ಸಮೇತ ದೊಡ್ಡ ದೊಡ್ಡ ಹೋಳುಗಳಾಗಿ ಕತ್ತರಿಸಿಕೊಳ್ಳಿ. ಒಂದು ಬಾಣಲೆಗೆ ಎಣ್ಣೆ ಹಾಕಿ ಮೆಣಸಿನಕಾಯಿ ಉದ್ದಿನ ಬೇಳೆ, ಕಡಲೆ ಬೇಳೆ, ಕರಿಬೇವು ಹಾಕಿ ಹುರಿಯಿರಿ. ಇದನ್ನು ಮಿಕ್ಸಿಗೆ ಹಾಕಿ ತೆಂಗಿನ ತುರಿಯೊಂದಿಗೆ ಸ್ವಲ್ಪ ನೀರು ಸೇರಿಸಿ ರುಬ್ಬಿಡಿ. ಈಗ ಒಂದು ಬಾಣಲೆಗೆ ಉಳಿದ ಎಣ್ಣೆಯನ್ನು ಹಾಕಿ ಸಾಸಿವೆ, ಉದ್ದಿನ ಬೇಳೆ, ಕಡಲೆ ಬೇಳೆ, ಕರಿಬೇವು ಹಾಕಿ. ಇದಕ್ಕೆ ಮಾವಿನಕಾಯಿಯ ಹೋಳುಗಳನ್ನು ಹಾಕಿ ಸ್ವಲ್ಪ ನೀರು ಚಿಮುಕಿಸಿ, ಬೇಯಲು ಬಿಡಿ. ನಂತರ ಉಪ್ಪು, ಬೆಲ್ಲ ಅರಿಶಿನ ಸೇರಿಸಿ ಕೈಯಾಡಿಸಿ. ಬೆಂದ ಮಿಶ್ರಣಕ್ಕೆ ರುಬ್ಬಿಟ್ಟ ಮಿಶ್ರಣವನ್ನು ಸೇರಿಸಿ ಚೆನ್ನಾಗಿ ಮಿಶ್ರ ಮಾಡಿ. ನೀರನ್ನು ಸೇರಿಸುವುದು ಬೇಡ.



ಮಾವಿನಕಾಯಿ ಹಿಂಡಿ

ಮಾಡೋದು ಹೇಗೆ?

ಮಾವಿನಕಾಯಿಗಳನ್ನು ತೊಳೆದು ಒರೆಸಿಡಿ. ನಂತರ ಮೇಲಿನ ಸಿಪ್ಪೆ ತೆಗೆದು, ಸಣ್ಣ ಹೋಳುಗಳನ್ನು ಮಾಡಿ. ಒಂದು ಡಬ್ಬಿಗೆ ಉಪ್ಪಿನ ಜೊತೆ ಸೇರಿಸಿ ಮುಚ್ಚಳ ಮುಚ್ಚಿ ಒಂದು ದಿನ ಬಿಡಿ. ಮರುದಿನ ಅದರಲ್ಲಿದ್ದ ಉಪ್ಪಿನ ನೀರನ್ನೆಲ್ಲ ಹಿಂಡಿ ತೆಗೆಯಿರಿ. ಮೆಣಸಿನಕಾಯಿ, ಸಾಸಿವೆ, ಪುಡಿ ಮಾಡಿದ ಅರಿಶಿನದ ಕೊಂಬು ಎಲ್ಲವನ್ನೂ ಮಿಕ್ಸಿ ಜಾರಿಗೆ ಹಾಕಿ ನುಣ್ಣಗೆ ಪುಡಿ ಮಾಡಿ. ಅರ್ಧ ಪುಡಿಯನ್ನು ತೆಗೆದಿಟ್ಟು, ಹಿಂಡಿದ ಮಾವಿನಕಾಯಿ ಹೋಳುಗಳನ್ನು ಹಾಕಿ ರುಬ್ಬಿ. ಅದನ್ನು ತೆಗೆದಿಟ್ಟು ಉಳಿದ ಹೋಳುಗಳನ್ನು ಇದೇ ರೀತಿ ಉಳಿದ ಪುಡಿ ಸೇರಿಸಿ ಇಂಗನ್ನೂ ಹಾಕಿ ರುಬ್ಬಿಕೊಳ್ಳಿ.

ಏನೇನು ಬೇಕು?

- ಮಾವಿನಕಾಯಿ ಮೂರು
- ಮೆಣಸಿನಕಾಯಿ ಕಾಲು ಕೆ.ಜಿ.
- ಸಾಸಿವೆ ಎರಡು ಹಿಡಿ
- ಕಲ್ಲು ಉಪ್ಪು ಮೂರು ಹಿಡಿ
- ಇಂಗು ಸ್ವಲ್ಪ
- ಅರಿಶಿನ ಕೊಂಬು ಎರಡು ಆಂಗುಲ



ಆಹಾ ಕಾಯಿರಸ

ಏನೇನು ಬೇಕು?

- ಮಾವಿನಕಾಯಿ ಎರಡು
- ಬ್ಯಾಡಗಿ ಮೆಣಸಿನಕಾಯಿ ನಾಲ್ಕು
- ತೆಂಗಿನ ತುರಿ ಒಂದು ಬಟ್ಟಲು
- ಎಣ್ಣೆ, ಉದ್ದಿನ ಬೇಳೆ ನಾಲ್ಕು ಚಮಚ
- ದನಿಯಾ ಎರಡು ಚಮಚ
- ಕಡಲೆ ಬೇಳೆ ಒಂದು ಚಮಚ
- ಎಳ್ಳು ನಾಲ್ಕು ಚಮಚ
- ಬೆಲ್ಲದ ಪುಡಿ ಮೂರು ಚಮಚ
- ಉಪ್ಪು ರುಚಿಗೆ, ಕರಿಬೇವು ಸ್ವಲ್ಪ

ಮಾಡೋದು ಹೇಗೆ?

ಮಾವಿನ ಕಾಯಿಯ ಹೋಳುಗಳನ್ನು ಚಿಕ್ಕದಾಗಿ ಮಾಡಿಟ್ಟುಕೊಳ್ಳಿ. ಒಂದು ಬಾಣಲೆಗೆ ಎಣ್ಣೆ, ಮೆಣಸಿನಕಾಯಿ ಮತ್ತು ಎಲ್ಲಾ ಮಸಾಲೆಗಳನ್ನೂ ಹಾಕಿ ಕೆಂಪಗೆ ಹುರಿಯಿರಿ. ಎಳ್ಳನ್ನು ಮಾತ್ರ ಎಣ್ಣೆ ಹಾಕದೆ ಬೇರೆ ಹುರಿದು, ಎಲ್ಲವನ್ನೂ ಮಿಕ್ಸಿ ಜಾರಿಗೆ ಹಾಕಿ ತೆಂಗಿನತುರಿಯೊಂದಿಗೆ ನುಣ್ಣಗೆ ರುಬ್ಬಿ. ಹೋಳುಗಳನ್ನು ಒಂದು ಪಾತ್ರೆಗೆ ಹಾಕಿ ಚಿಟಿಕೆ ಅರಿಶಿನ ಪುಡಿ ಹಾಕಿ. ನಂತರ ಅದಕ್ಕೆ ಬೇಕಿದ್ದಷ್ಟು ಉಪ್ಪು, ಬೆಲ್ಲ ಸೇರಿಸಿ. ಒಂದು ಕುದಿ ಬಂದ ನಂತರ ರುಬ್ಬಿದ ಮಸಾಲೆಯ ಮಿಶ್ರಣವನ್ನು ಹಾಕಿ ಚೆನ್ನಾಗಿ ಮಿಶ್ರ ಮಾಡಿ ಕರಿಬೇವು ಸೇರಿಸಿ.



UASB LIBRARY

ಸೊಪ್ಪನ್ನು ಸಣ್ಣದಾಗಿ ಹೆಚ್ಚಿಕೊಳ್ಳಿ. ಕ್ಯಾರೆಟ್, ನವಿಲುಕೋಸು/ ಮೂಲಂಗಿಗಳನ್ನು ತುರಿದು ಚಕ್ರಮುನಿ ಸೊಪ್ಪಿಗೆ ಹಾಕಿ. ಹಸಿಮೆಣಸಿನಕಾಯಿಯನ್ನು ನುರಿದು, ಉಪ್ಪು, ನಿಂಬೆ ರಸ ಸೇರಿಸಿ. ಇದು ಚಪಾತಿ, ರೊಟ್ಟಿ, ದೋಸೆಗೂ ಒಳ್ಳೆ ಕಾಂಬಿನೇಶನ್.

ಕಡಲೆ ಕಾಳು ಸಲಾಡ್

ಸಾಮಗ್ರಿ: ಕಡಲೆ ಕಾಳು ಅರ್ಧ ಕಪ್, ಈರುಳ್ಳಿ 1, ನಿಂಬೆ ರಸ ಅರ್ಧ ಚಮಚ, ಟೊಮ್ಯಾಟೊ 1, ಕೊತ್ತಂಬರಿ ಸೊಪ್ಪು ಸ್ವಲ್ಪ, ಉಪ್ಪು ರುಚಿಗೆ. ಹಸಿಮೆಣಸಿನ ಕಾಯಿ 1.

ವಿಧಾನ: ಕಡಲೆ ಕಾಳನ್ನು ಏಳೆಂಟು ತಾಸು ನೆನೆಸಿಡಿ. ನಂತರ ಆ ನೀರನ್ನು ತೆಗೆದು, ಸಣ್ಣಗೆ ಹೆಚ್ಚಿದ ಈರುಳ್ಳಿ, ಹಸಿಮೆಣಸಿನಕಾಯಿ, ಟೊಮ್ಯಾಟೊ, ಕೊತ್ತಂಬರಿ ಸೊಪ್ಪು, ನಿಂಬೆರಸ, ಉಪ್ಪು ಸೇರಿಸಿ. ಇದು ಬೆಳಗಿನ ತಿಂಡಿಗೂ ಪೌಷ್ಟಿಕ ಆಹಾರ. (ಇದೇ ರೀತಿ ಹೆಸರು ಕಾಳಿನದ್ದೂ ಮಾಡಬಹುದು.)

ಮರಿಗೆ ಗೊಜ್ಜು



ಸಾಮಗ್ರಿ: ಗಟ್ಟಿ ಮೊಸರು 1 ಕಪ್, ಜಜ್ಜಿದ ಬೆಳ್ಳುಳ್ಳಿ ನಾಲ್ಕೈದು, ಹಸಿಮೆಣಸಿನ ಕಾಯಿ 1, ಉಪ್ಪು ರುಚಿಗೆ.

ವಿಧಾನ: ಒಂದು ಪಾತ್ರೆಯಲ್ಲಿ ಮೊಸರು ಹಾಕಿ, ಅದಕ್ಕೆ ಉಪ್ಪು ಮತ್ತು ಜಜ್ಜಿದ ಬೆಳ್ಳುಳ್ಳಿ, ಹೆಚ್ಚಿದ ಹಸಿಮೆಣಸಿನಕಾಯಿ ಸೇರಿಸಿ. ಬಿಸಿಬಿಸಿ ಅನ್ನಕ್ಕೆ ರುಚಿಯಾಗಿರುತ್ತದೆ.

ಉಪ್ಪಿನಕಾಯಿ ಮಿಡಿಯ ತಂಬುಳಿ

ಸಾಮಗ್ರಿ: ಉಪ್ಪಿನ ಕಾಯಿ ಮಿಡಿ 2, ಕಾಯಿ ತುರಿ ಅರ್ಧ ಕಪ್, ಎಳ್ಳು ಕಾಲು ಚಮಚ, ಕಡೆದ ಮಜ್ಜಿಗೆ 1 ಲೋಟ, ಉಪ್ಪು ರುಚಿಗೆ.

ವಿಧಾನ: ಉಪ್ಪಿನ ಕಾಯಿ ಮಿಡಿಯನ್ನು ತೊಳೆದು ಹೆಚ್ಚಿ ಅದರೊಳಗಿನ ಬೀಜ ತೆಗೆದು ನಾಲ್ಕು ಹೋಳು ಮಾಡಿಕೊಳ್ಳಿ, ಅದರೊಂದಿಗೆ ಎಳ್ಳು, ತೆಂಗಿನ ತುರಿ ಹಾಕಿ ನುಣ್ಣಗೆ ರುಬ್ಬಿ. ನಂತರ ಈ ಮಿಶ್ರಣಕ್ಕೆ ಮಜ್ಜಿಗೆ ಮತ್ತು ಕಾಲು ಲೋಟ ನೀರು ಸೇರಿಸಿ, ಉಪ್ಪು ಹಾಕಿ.





ಬಾಳೆಹಣ್ಣಿನ ರಸಾಯನ

ಸಾಮಗ್ರಿ: ಯಾವುದೇ ಬಾಳೆ ಹಣ್ಣು 4, ಬೆಲ್ಲ 4 ಚಮಚ, ಹಾಲು 1 ಕಪ್, ಕಾಯಿ ತುರಿ ಕಾಲು ಕಪ್, ಏಲಕ್ಕಿ ಪುಡಿ ಚಿಟಿಕೆ.

ವಿಧಾನ: ಬಾಳೆಹಣ್ಣನ್ನು ವೃತ್ತಾಕಾರವಾಗಿ ಹೆಚ್ಚಿ. ಅದಕ್ಕೆ ಬೆಲ್ಲ, ಹಾಲು ಸೇರಿಸಿ. ತೆಂಗಿನ ತುರಿಯನ್ನು ರುಬ್ಬಿ ಹಾಕಿ. ಏಲಕ್ಕಿ ಪುಡಿ ಸೇರಿಸಿ.

ಇದೇ ರೀತಿ ವಿವಿಧ ಹಣ್ಣುಗಳಿಂದಲೂ ರಸಾಯನ ಮಾಡಬಹುದು. ಈ ರಸಾಯನಕ್ಕೆ ಕುಂಬಳ ಬೀಜ, ಚಿಯಾ ಬೀಜ, ಬಿಳಿ ಎಳ್ಳುಗಳನ್ನೂ ಸೇರಿಸಿದರೆ ಪೌಷ್ಟಿಕಾಂಶ ಇನ್ನೂ ಹೆಚ್ಚು. ದೇಹಕ್ಕೂ ತಂಪು. ಈ ರಸಾಯನಗಳನ್ನು ಬೆಳಗಿನ ತಿಂಡಿ ರೂಪದಲ್ಲೇ ಸೇವಿಸಬಹುದು. ಒಳ್ಳೆ ಡಯಟ್ ಫುಡ್ ಇದು.

ಮೂಲಂಗಿ ಹಚಿ

ಸಾಮಗ್ರಿ: ಮೂಲಂಗಿ 1, ಈರುಳ್ಳಿ 1, ಹಸಿಮೆಣಸಿನಕಾಯಿ 1, ತೆಂಗಿನ ತುರಿ ಅರ್ಧ ಕಪ್, ಮೊಸರು ಅರ್ಧ ಕಪ್, ಉಪ್ಪು ರುಚಿಗೆ.

ಸಾಮಗ್ರಿ: ಮೂಲಂಗಿ ಮತ್ತು ಈರುಳ್ಳಿ, ಹಸಿಮೆಣಸಿನ ಕಾಯಿಯನ್ನು ಸಣ್ಣಗೆ ಹೆಚ್ಚಿಕೊಳ್ಳಿ. ಈ ಮಿಶ್ರಣಕ್ಕೆ ನುಣ್ಣಗೆ ರುಬ್ಬಿದ ತೆಂಗಿನ ತುರಿ, ಮೊಸರು, ಉಪ್ಪನ್ನು ಸೇರಿಸಿ ಚೆನ್ನಾಗಿ ಕಲಸಿ. ಕಡೆಯಲ್ಲಿ ಸಣ್ಣಗೆ ಹೆಚ್ಚಿದ ಕೊತ್ತಂಬರಿ ಸೊಪ್ಪನ್ನು ಸೇರಿಸಿ.

ಜಜ್ಜ ಮೂಲಂಗಿ

ಮೂಲಂಗಿ 1, ತೆಂಗಿನ ತುರಿ ಅರ್ಧ ಕಪ್, ಹಸಿಮೆಣಸಿನ ಕಾಯಿ 2, ಬೆಳ್ಳುಳ್ಳಿ ನಾಲ್ಕೈದು ಎಸಳು, ಉಪ್ಪು ರುಚಿಗೆ.

ವಿಧಾನ: ತೆಂಗಿನ ತುರಿ ಮತ್ತು ಹಸಿಮೆಣಸಿನ ಕಾಯಿಗಳನ್ನು ನುಣ್ಣಗೆ ರುಬ್ಬಿ ಒಂದು ಪಾತ್ರೆಗೆ ಹಾಕಿ. ನಂತರ ಹೆಚ್ಚಿದ ಮೂಲಂಗಿ ಮತ್ತು ಬೆಳ್ಳುಳ್ಳಿ ಎಸಳುಗಳನ್ನು ಒಂದು ಕುಟಾಣಿಗೆ ಹಾಕಿ ಜಜ್ಜಿ. ಇದನ್ನು ರುಬ್ಬಿದ ತೆಂಗಿನ ತುರಿ ಮಿಶ್ರಣಕ್ಕೆ ಹಾಕಿ ಚೆನ್ನಾಗಿ ಕಲಸಿ. ಇದು ರೊಟ್ಟಿ, ಚಪಾತಿ, ದೋಸೆ, ಅನ್ನಕ್ಕೆಲ್ಲ ಚೆನ್ನಾಗಿರುತ್ತದೆ. ಬೇಕಿದ್ದರೆ ಇದಕ್ಕೆ ಅರ್ಧ ಕಪ್ ಮೊಸರನ್ನೂ ಸೇರಿಸಬಹುದು.

ಕ್ಯಾರೆಟ್ ಹಚಿ

ಸಾಮಗ್ರಿ: ಕ್ಯಾರೆಟ್ 1, ಹಸಿ ಈರುಳ್ಳಿ 1, ಹಸಿಮೆಣಸಿನಕಾಯಿ 1, ತೆಂಗಿನ ತುರಿ ಅರ್ಧ ಕಪ್, ಮೊಸರು ಅರ್ಧ ಕಪ್, ಉಪ್ಪು ರುಚಿಗೆ,

ವಿಧಾನ: ಕ್ಯಾರೆಟ್ ತುರಿದುಕೊಳ್ಳಿ, ಈರುಳ್ಳಿಯನ್ನು ಸಣ್ಣಗೆ ಹೆಚ್ಚಿಕೊಳ್ಳಿ. ಎರಡನ್ನೂ ಸೇರಿಸಿ. ಹಸಿಮೆಣಸಿನಕಾಯಿಯನ್ನು ನುರಿದು, ಇದಕ್ಕೆ ರುಬ್ಬಿದ ತೆಂಗಿನ ತುರಿ ಹಾಗೂ ಮೊಸರು ಮತ್ತು ಉಪ್ಪು ಸೇರಿಸಿ. (ಇದೇ ವಿಧಾನದಲ್ಲಿ ಬೀಟ್‌ರೂಟ್, ನವಿಲುಕೋಲುಗಳ ಹಚಿಗಳನ್ನೂ ಮಾಡಬಹುದು.)

ಈ ಬೇಸಿಗೆಯ ಧಗೆಗೆ ರಸಾಯನ ಹೇಳಿ ಮಾಡಿಸಿದ ಆಹಾರ. ಅದರಕ್ಕೂ ಸಿಹಿ, ಉದರಕ್ಕೂ ಉತ್ತಮ. ವಿವಿಧ ಹಣ್ಣುಗಳಿಂದ ತಯಾರಿಸಿದ ರಸಾಯನ ಬಲು ರುಚಿ ಕೂಡ.

ಕಡಿಮೆ ಬೆಂಕಿ ಬಳಸಿ ಮಾಡುವ ಪದಾರ್ಥಗಳು

ಮಜ್ಜಿಗೆ ಪಲದ್ಯ

ಸಾಮಗ್ರಿ: ಮಜ್ಜಿಗೆ 1 ಲೋಟ, ತೆಂಗಿನ ತುರಿ 2 ಚಮಚ, ನೀರು 2 ಲೋಟ, ಉಪ್ಪು ರುಚಿಗೆ, ಅಮಚೂರು ಪುಡಿ ಕಾಲು ಚಮಚ, ಒಗ್ಗರಣೆಗೆ, ಎಣ್ಣೆ (ತೆಂಗಿನೆಣ್ಣೆಯಾದರೆ ಉತ್ತಮ, ಕಳ್ಳೆಕಾಯಿ ಎಣ್ಣೆಯಾದರೂ ಓಕೆ) 2 ಚಮಚ, ಉದ್ದಿನ ಬೇಳೆ ಕಾಲು ಚಮಚ, ಸಾಸಿವೆ ಕಾಳು ಕಾಲು ಚಮಚ, ಕರಿಬೇವಿನ ಸೊಪ್ಪು 1 ಕಡ್ಡಿ, ಬೆಳ್ಳುಳ್ಳಿ ನಾಲ್ಕೈದು ಎಸಳು, ಹಸಿಮೆಣಸಿನ ಕಾಯಿ 1.

ವಿಧಾನ: ಒಂದು ದಪ್ಪ ತಳದ ಪಾತ್ರೆಯಲ್ಲಿ 2 ಚಮಚ ಎಣ್ಣೆ ಹಾಕಿ, ಸಾಸಿವೆಕಾಳು ಹಾಕಿ, ಅದು ಚಿಟಿಗುಟ್ಟಿದ ಮೇಲೆ ಉದ್ದಿನ ಬೇಳೆ ಹಾಕಿ. ನಂತರ ಕರಿಬೇವು, ಹೆಚ್ಚಿದ ಹಸಿಮೆಣಸಿನಕಾಯಿ, ಜಜ್ಜಿದ ಬೆಳ್ಳುಳ್ಳಿ, ಹಾಕಿ. ಬೆಂದ ಮೇಲೆ ನೀರು, ಉಪ್ಪು, ಹುಳಿಪುಡಿ ಮತ್ತು ತೆಂಗಿನ ತುರಿ

UASB LIBRARY



ಹಾಕಿ ಕುದಿಸಿ ಗ್ಯಾಸ್ ಬಂದ್ ಮಾಡಿ. ನಂತರ ಕಡೆದಿರುವ ಮಜ್ಜಿಗೆಯನ್ನು ಸೇರಿಸಿ. ಇದು ರಾತ್ರಿಯ ಊಟಕ್ಕೆ ಹೇಳಿಮಾಡಿಸಿದ ಪದಾರ್ಥ. ದೇಹಕ್ಕೆ ತಂಪು ಮತ್ತು ಜೀರ್ಣಕಾರಿ.

ಆಪ್ಪೆಹುಳಿ

ಸಾಮಗ್ರಿ: ಮಾವಿನ ಕಾಯಿ/ ಅಪ್ಪೆಕಾಯಿ ದೊಡ್ಡಗಾತ್ರದ್ದು 1, ಹಸಿಮೆಣಸು 1, ಉಪ್ಪು ರುಚಿಗೆ, ಒಣಮೆಣಸಿನ ಕಾಯಿ 1, ಒಗ್ಗರಣೆಗೆ ಎಣ್ಣೆ ಒಂದು ಚಮಚ. ಸಾಸಿವೆ ಕಾಳು ಕಾಲು ಚಮಚ, 2 ಲೋಟ ನೀರು.

ವಿಧಾನ: ಮಾವಿನಕಾಯಿ/ಅಪ್ಪೆಕಾಯಿಯನ್ನು ಸಿಪ್ಪೆ ತೆಗೆದು, ಹಸಿಮೆಣಸಿನಕಾಯಿ ಹಾಕಿ ನುಣ್ಣಗೆ ರುಬ್ಬಿಕೊಳ್ಳಬೇಕು. ಇದಕ್ಕೆ ಹುಳಿಗೆ ತಕ್ಕಷ್ಟು ನೀರು ಹಾಕಿ. ಉಪ್ಪು ಸೇರಿಸಿದರೆ ಅಪ್ಪೆಹುಳಿ ರೆಡಿ. ಇದಕ್ಕೆ ಸಾಸಿವೆಕಾಳು, ಕರಿಬೇವು, ಇಂಗಿನ ಒಗ್ಗರಣೆ ಕೊಟ್ಟರೆ ರುಚಿ ಹೆಚ್ಚು. ಒಗ್ಗರಣೆ ಇಲ್ಲದೆಯೂ ಮಾಡಬಹುದು. ಇದು ಬಿಸಿಬಿಸಿ ಅನ್ನಕ್ಕೆ ಒಳ್ಳೆ ರುಚಿ. (ಇದೇ ಕಾಯಿಗಳನ್ನು ಬೇಯಿಸಿ, ನಂತರ ಸಿಪ್ಪೆ ತೆಗೆದು ಕಿವುಚಿ. ಅದಕ್ಕೆ ಸಾಕಷ್ಟು ಪ್ರಮಾಣದಲ್ಲಿ ನೀರು ಸೇರಿಸಿ ಇದೇ ವಿಧಾನದಲ್ಲಿ ಅಪ್ಪೆಹುಳಿ ಮಾಡಬಹುದು.)



ಮೊಸರು

ಹೆರಳೆಕಾಯಿ ಅಪ್ಪಹುಳಿ

ಹೆರಳೆಕಾಯಿ, ನಿಂಬೆ ಹಣ್ಣು, ಹುಣಸೆ ಹಣ್ಣು, ಒಟ್ಟಿನಲ್ಲಿ ಹುಳಿ ಇರುವ ಯಾವುದೇ ಕಾಯಿಗಳಿಂದಲೂ ಈ ಅಪ್ಪೆಹುಳಿಯನ್ನು ತಯಾರಿಸಬಹುದು.

ಸಾಮಗ್ರಿ: ಹೆರಳೆ ಕಾಯಿ 1, ಹಸಿಮೆಣಸಿನ ಕಾಯಿ 1, ಉಪ್ಪು ರುಚಿಗೆ. ನೀರು 2 ಲೋಟ.

ವಿಧಾನ: ಮೊದಲಿಗೆ ಹೆರಳೆ ಕಾಯಿಯ ಸಿಪ್ಪೆ ತೆಗೆದು ಎರಡು ಹೋಳು ಮಾಡಿಕೊಳ್ಳಿ. ನಂತರ ಒಂದು ಪಾತ್ರೆಯಲ್ಲಿ ಉಪ್ಪು ಹಾಕಿ ಅದಕ್ಕೆ ಹಸಿಮೆಣಸಿನ ಕಾಯಿಯನ್ನು ನುರಿಯಿರಿ. ಅದಕ್ಕೆ ಈ ಹೆರಳೇ ಕಾಯಿ ರಸವನ್ನು ಹಿಂಡಿ ಹಾಕಿ. ನಂತರ ಅದಕ್ಕೆ 2 ಲೋಟ ನೀರು ಸೇರಿಸಿದರೆ ಅಪ್ಪೆಹುಳಿ ರೆಡಿ. ಇದು ಕೂಡ ಬಿಸಿ ಅನ್ನಕ್ಕೆ ರುಚಿ. ಹಾಗೆಯೇ ಊಟದ ಕೊನೆಯಲ್ಲಿ ಕುಡಿಯಲೂ ರುಚಿ. (ಇದೇ ಮಾದರಿಯಲ್ಲೇ ಮಿಕ್ಕ ಸಾಮಗ್ರಿಗಳಿಂದ ಅಪ್ಪೆಹುಳಿ ತಯಾರಿಸಬಹುದು.)

ಹುಣಸೆ ಹಣ್ಣಿನ ತಂಬುಳಿ

ಸಾಮಗ್ರಿ: ಹುಣಸೆ ಹಣ್ಣು ದೊಡ್ಡ ನಿಂಬೆ ಗಾತ್ರದಷ್ಟು, ಈರುಳ್ಳಿ 1, ಹಸಿಮೆಣಸಿನಕಾಯಿ 1, ಒಣಮೆಣಸಿನ ಕಾಯಿ 1, ಬೆಲ್ಲ 4 ಚಮಚ, ಉಪ್ಪು ರುಚಿಗೆ. ಒಗ್ಗರಣೆಗೆ ಜೀರಿಗೆ, ಸಾಸಿವೆ, ಕರಿಬೇವು. ಇಂಗು ಚಿಟಿಕೆ.

ವಿಧಾನ: ಹುಣಸೆಹಣ್ಣನ್ನು ಅರ್ಧಗಂಟೆ ನೆನಹಾಕಿ. ಅದು ನೆಂದ ಮೇಲೆ ಚೆನ್ನಾಗಿ ಕಿವುಚಿ ರಸ ತೆಗೆಯಿರಿ. ಆ ರಸಕ್ಕೆ ಎರಡು ಲೋಟ ನೀರು ಸೇರಿಸಿ, ಹಸಿಮೆಣಸಿನ ಕಾಯಿ ನುರಿದು ಉಪ್ಪು ಮತ್ತು ಬೆಲ್ಲವನ್ನು ಸೇರಿಸಿ. ನಂತರ ಸಣ್ಣಗೆ ಕತ್ತರಿಸಿದ ಈರುಳ್ಳಿ, ಕೊತ್ತಂಬರಿ ಸೊಪ್ಪನ್ನು ಹಾಕಿದರೆ ರುಚಿ ಇನ್ನೂ ಹೆಚ್ಚು. ಇದಕ್ಕೆ ಬೇಕಿದ್ದರೆ ಜೀರಿಗೆ ಸಾಸಿವೆ ಕರಿಬೇವು ಹಾಕಿ ಒಗ್ಗರಣೆ ಕೊಡಬಹುದು.

ಒಗ್ಗರಣೆ ಇಲ್ಲದೆಯೂ ಇದನ್ನು ಊಟಕ್ಕೆ ಬಳಸಬಹುದು. ಈ ಬೇಸಿಗೆಗೆ ಹುಣಸೆ ಹಣ್ಣು ತಂಬುಳಿ ದೇಹಕ್ಕೆ ತಂಪು ನೀಡುವುದಲ್ಲದೆ ರುಚಿಕಟ್ಟಾಗಿಯೂ ಇರುತ್ತದೆ. ಅಲ್ಲದೆ ಹುಣಸೆ ಹಣ್ಣು ಬೆಲ್ಲ ಎರಡೂ ಸೇರುವುದರಿಂದ ಪಿತ್ತ ನಾಶಕವಾಗಿಯೂ ಕೆಲಸ ಮಾಡುತ್ತದೆ. ವಾರಕ್ಕೆ ಒಂದೆರೆಡು ಬಾರಿ ಈ ತಂಬುಳಿಯನ್ನು ಮಾಡಿಕೊಂಡು ಊಟ ಮಾಡಿದರೆ ಒಳಿತು. ಪಾನಕದ ರೀತಿಯಲ್ಲಿ ಇದನ್ನು ಕುಡಿಯಲೂ ಬಹುದು.



ರಾಗಿ ಸಿಹಿ ಮಜ್ಜಿಗೆ

ಸೌತೆಕಾಯಿ ಕಲ್ಲಜ್ಜಿ

ಸಾಮಗ್ರಿ: ಸೌತೆಕಾಯಿ 1, ಉದ್ದಿನ ಬೇಳೆ ಅರ್ಧ ಚಮಚ, ಬಿಳಿ ಎಳ್ಳು ಕಾಲು ಚಮಚ, ಹಸಿಮೆಣಸಿನ ಕಾಯಿ ಅರ್ಧ, ತೆಂಗಿನ ತುರಿ ಕಾಲು ಕಪ್, ಉಪ್ಪು ರುಚಿಗೆ. ನೀರು 2 ಲೋಟ.

ವಿಧಾನ: ಸೌತೆಕಾಯಿ ಸಿಪ್ಪೆ ತೆಗೆದು ಹೆಚ್ಚಿಕೊಳ್ಳಿ. ಉದ್ದಿನ ಬೇಳೆ ಮತ್ತು ಎಳ್ಳು ಹಸಿಮೆಣಸಿನ ಕಾಯಿಯನ್ನು ಎಣ್ಣೆಯಲ್ಲಿ ಹುರಿದು ತೆಂಗಿನ ತುರಿ, ಸೌತೆಕಾಯಿಯೊಂದಿಗೆ ತರಿತರಿಯಾಗಿ ರುಬ್ಬಿ. ಇದಕ್ಕೆ ನೀರು ಮತ್ತು ಉಪ್ಪು ಸೇರಿಸಿ. ರಾತ್ರಿ ಹೊತ್ತು ಬಿಸಿ ಅನ್ನಕ್ಕೆ ಇದು ರುಚಿಯಾಗಿರುತ್ತದೆ.

ಮಸಾಲೆ ಅವಲಕ್ಕಿ

ಸಾಮಗ್ರಿ: ಪೇಪರ್/ ತೆಳು ಅವಲಕ್ಕಿ 3 ಮುಷ್ಟಿ, ಹಸಿ ಮೆಣಸಿನಕಾಯಿ 1, ಒಣಮೆಣಸಿನಕಾಯಿ 1, ಉಪ್ಪು ರುಚಿಗೆ, ಬೆಲ್ಲ ಸ್ವಲ್ಪ, ತೆಂಗಿನ ತುರಿ ಕಾಲು ಕಪ್, ನಿಂಬೆ ರಸ ಒಂದು ಚಮಚ, ಒಗ್ಗರಣೆಗೆ 1 ಚಮಚ ಎಣ್ಣೆ, ಶೇಂಗಾ 2 ಚಮಚ, ಉದ್ದಿನಬೇಳೆ 1 ಚಮಚ, ಕಡ್ಲೆಬೇಳೆ 1 ಚಮಚ, ಸಾಸಿವೆ, ಜೀರಿಗೆ ತಲಾ ಅರ್ಧ ಚಮಚ. ಅರಿಶಿನ ಚಿಟಿಕೆ. ಕೊತ್ತಂಬರಿ ಬೀಜ ಕಾಲು ಚಮಚ.

ವಿಧಾನ: ಅವಲಕ್ಕಿಗೆ ಉಪ್ಪು, ಬೆಲ್ಲ ಸೇರಿಸಿ ಚೆನ್ನಾಗಿ ಕಲಸಿಡಿ. ಅದಕ್ಕೆ ಒಗ್ಗರಣೆ ಸಾಮಗ್ರಿ ಹಾಕಿ , ಕಾಯಿಸುಳಿ, ನಿಂಬೆ ರಸವನ್ನು ಸೇರಿಸಿ ಚೆನ್ನಾಗಿ ಕಲಸಿದರೆ ಮಸಾಲೆ ಅವಲಕ್ಕಿ ರೆಡಿ. ಬೆಳಗಿನ ತಿಂಡಿಗೂ ಇದನ್ನು ಸೇವಿಸಬಹುದು.

ಉಪ್ಪಿನಕಾಯಿ ಮಸಾಲೆ ಅವಲಕ್ಕಿ

ಸಾಮಗ್ರಿ: ದಪ್ಪ ಅವಲಕ್ಕಿ 2 ಮುಷ್ಟಿ, ಉಪ್ಪಿನಕಾಯಿ 3 ಚಮಚ, ಉಪ್ಪು ರುಚಿಗೆ, ಬೆಲ್ಲ ಅರ್ಧ ಚಮಚ, ತೆಂಗಿನ ತುರಿ ಕಾಲು ಕಪ್, ತೆಂಗಿನ ಎಣ್ಣೆ ಅರ್ಧ ಚಮಚ.

ವಿಧಾನ: ಎರಡು ಬಾರಿ ಚೆನ್ನಾಗಿ ಅವಲಕ್ಕಿ ತೊಳೆದು ನೀರು ಬಸಿದು 2 ನಿಮಿಷ ಹಾಗೇ ಬಿಡಿ. ನಂತರ ಅದಕ್ಕೆ ಉಪ್ಪಿನ ಕಾಯಿ, ಬೆಲ್ಲ, ಉಪ್ಪು ಸೇರಿಸಿ ಚೆನ್ನಾಗಿ ಕಲಸಿ. ನಂತರ ಅದಕ್ಕೆ ತೆಂಗಿನ ತುರಿ ಮತ್ತು ತೆಂಗಿನ ಎಣ್ಣೆಯನ್ನು ಸೇರಿಸಿದರೆ ರುಚಿಯಾದ ಉಪ್ಪಿನ ಕಾಯಿ ಅವಲಕ್ಕಿ ರೆಡಿ. (ಆವುಗಾಯಿ, ಕಡಗಾಯಿ ಉಪ್ಪಿನ ಕಾಯಿಯನ್ನು ಹಾಕಿ ಮಾಡಿದ ಅವಲಕ್ಕಿ ಹೆಚ್ಚು ರುಚಿ.)



ಕೈಗೊಜ್ಜು

ಮಸಾಲೆ ಅರಳು

ಸಾಮಗ್ರಿ: ಅರಳು 2 ಮುಷ್ಟಿ, ಹಸಿಮೆಣಸಿನ ಕಾಯಿ 1, ತೆಂಗಿನ ತುರಿ ಕಾಲು ಕಪ್, ತೆಂಗಿನ ಎಣ್ಣೆ 2 ಚಮಚ. ಉಪ್ಪು ರುಚಿಗೆ, ನಿಂಬೆ ರಸ ಕಾಲು ಚಮಚ. ಸಕ್ಕರೆ ಅರ್ಧ ಚಮಚ. (ಸಕ್ಕರೆ ಬೇಡದವರು ಬಿಡಬಹುದು.)

ವಿಧಾನ: ಅರಳನ್ನು ಚೆನ್ನಾಗಿ ಕೇರಿಕೊಂಡು ಸ್ವಚ್ಛಗೊಳಿಸಿ. ಅದಕ್ಕೆ ಉಪ್ಪು, ನಿಂಬೆ ರಸ, ತೆಂಗಿನ ಎಣ್ಣೆಯನ್ನು ಸೇರಿಸಿ, ಹಸಿಮೆಣಸಿನ ಕಾಯಿಯನ್ನು ನುರಿದು ಚೆನ್ನಾಗಿ ಕಲಸಿ. ನಂತರ ಅದಕ್ಕೆ ತೆಂಗಿನ ತುರಿ, ಸಕ್ಕರೆ ಹಾಗೂ ಸಣ್ಣಗೆ ಹೆಚ್ಚಿದ ಕೊತ್ತಂಬರಿ ಸೊಪ್ಪನ್ನು ಸೇರಿಸಿದರೆ ರುಚಿಯಾದ ಮಸಾಲೆ ಅರಳು ರೆಡಿ. ಇದು ಕೂಡ ಬೆಳಗಿನ ತಿಂಡಿಗೆ ಹಾಗೂ ಸಂಜೆಯ ಸ್ನ್ಯಾಕ್ಸ್‌ಗೂ ಸೇವಿಸಬಹುದು.

ಪ್ರತಿಕ್ರಿಯೆಸಿ: feedback@sudha.co.in

UASB LIBRARY



ರಂಗನತಿಟ್ಟು ಪಕ್ಷಿಧಾಮದಲ್ಲಿ ಬಣ್ಣದ ಕೊಕ್ಕರೆಗಳ ಕಲರವ

UASB LIBRARY

ದ್ವೀಪಗಳ ಉಳಿವು ಪಕ್ಷಿಗಳ ನಲಿವು

ಎಲೆಗಳ ಟೊಂಗೆಯನ್ನು ಕಚ್ಚಿ ತರುವ ಬಾಯ್ಕಳಕ ಕೊಕ್ಕರೆ, ಶರವೇಗದಲ್ಲಿ ಮೀನನ್ನು ಶಿಕಾರಿಯಾಡುವ ಹೆಜ್ಜಾರ್ಲೆ, ಮರಿಗಳಿಗೆ ಗುಟುಕು ತಿನಿಸುವ ಚಮಚದ ಕೊಕ್ಕರೆ, ಕೀಟಗಳನ್ನು ಬೇಟೆಯಾಡುವ ಮಿಂಚುಳ್ಳಿ, ಜಲಕ್ರೀಡೆಯಲ್ಲಿ ತೊಡಗುವ ಬಣ್ಣದ ಕೊಕ್ಕರೆ, ಬಂಡೆಗಳ ಮೇಲೆ ವಿಹರಿಸುವ ನದಿರೀವ, ಬಂಡೆಗಳಡಿ ಗೂಡು ಕಟ್ಟಿಕೊಂಡಿರುವ ಪಟ್ಟೆ ಕತ್ತಿನ ಕವಲುತೋಕೆ, 'ರಂಗನತಿಟ್ಟು ಪಕ್ಷಿಧಾಮ'ಕ್ಕೆ ಭೇಟಿ ನೀಡುವ ಪಕ್ಷಿಪ್ರಿಯರ ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತವೆ.

■ **ಸಿದ್ದು ಆರ್.ಜಿ. ಹಳ್ಳಿ** ಚಿತ್ರಗಳು: ಆನೂಪ್ ರಾಘ ಟಿ.



ಕಲ್ಲು ಗೂರವನ ಕಣ್ಣೋಟ

ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕಿನ 'ರಂಗನತಿಟ್ಟು ಪಕ್ಷಿಧಾಮ', 'ಕರ್ನಾಟಕದ ಪಕ್ಷಿಕಾಶಿ' ಎಂದೇ ಹೆಸರಾಗಿದೆ. ಪಕ್ಷಿಗಳಿಗೆ ಸುರಕ್ಷಿತ ಆಶ್ರಯ ಮತ್ತು ಸಂತಾನೋತ್ಪತ್ತಿಗೆ ಸೂಕ್ತ ವಾತಾವರಣ ಕಲ್ಪಿಸುವ ಜಾಗವೆಂದರೆ 'ದ್ವೀಪಗಳು'. ಇಲ್ಲಿ 26 ಸುಂದರ ದ್ವೀಪಗಳಿದ್ದು, ಅವುಗಳನ್ನು ಸಂರಕ್ಷಣೆ ಮಾಡಲು 'ಮೈಸೂರು ವನ್ಯಜೀವಿ ವಿಭಾಗ' ಮುಂದಾಗಿದೆ.

ಪಕ್ಷಿ ಮತ್ತು ಸಸ್ಯಸಂಕುಲಗಳನ್ನು ಆಧರಿಸಿ



ಬಿಳಿ ಸುಂದರಿಯರು (ದೊಡ್ಡ ಬೆಳ್ಳಕ್ಕಿ)

ಇಲ್ಲಿನ ದ್ವೀಪಗಳಿಗೆ ಅನ್ವರ್ಥನಾಮ ಇಡಲಾಗಿದೆ. ಸ್ಪೂನ್ ಬಿಲ್, ಓಪನ್ ಬಿಲ್, ಕಿಂಗ್ ಫಿಶರ್, ನೈಟ್ ಹೆರಾನ್, ಪಾಂಡ್ ಹೆರಾನ್, ರೈನ್ ಟ್ರೀ, ನೇರಳೆ, ಹೊಂಗೆ ಮುಂತಾದ ಹೆಸರುಗಳಿಂದ 'ಐಲ್ಯಾಂಡ್'ಗಳನ್ನು ಗುರುತಿಸಲಾಗುತ್ತಿದೆ. ಈ ದ್ವೀಪಗಳು ನೆಲದ ಮೇಲೆ ವಾಸಿಸುವ ಪರಭಕ್ಷಕಗಳಿಂದ (ಉದಾಹರಣೆಗೆ, ನರಿ, ಬೆಕ್ಕು) ಪಕ್ಷಿಗಳನ್ನು ರಕ್ಷಿಸುತ್ತವೆ. ವಲಸೆ ಹಕ್ಕಿಗಳು ಮೊಟ್ಟೆ ಮತ್ತು ಮರಿಗಳನ್ನು ಸುರಕ್ಷಿತವಾಗಿ ಬೆಳೆಸಲು ಅನುಕೂಲಕರ ವಾತಾವರಣ ಒದಗಿಸುತ್ತವೆ. ಪಕ್ಷಿಗಳ ಸಂಖ್ಯೆ ವೃದ್ಧಿಗೆ ಸಹಾಯ ಮಾಡುವ ಮೂಲಕ ಪರಿಸರದ ಸಮತೋಲನ ಕಾಯ್ದುಕೊಳ್ಳುತ್ತವೆ.

ಕಾವೇರಿ ನದಿ ಪಾತ್ರದಲ್ಲಿ ಭಾರಿ ಮಳೆಯಾದಾಗ ಮತ್ತು ಕೆಆರ್‌ಎಸ್ ಜಲಾಶಯದಿಂದ ಅಪಾರ ಪ್ರಮಾಣದ ನೀರನ್ನು ಹೊರಬಿಟ್ಟಾಗ ರಂಗನತಿಟ್ಟು ಪಕ್ಷಿಧಾಮವು ಜಲಾವೃತವಾಗುತ್ತದೆ. ಅಷ್ಟೇ ಅಲ್ಲ, ಪ್ರವಾಹದ ರಭಸಕ್ಕೆ ದ್ವೀಪಗಳು ನಲುಗುತ್ತವೆ. ಮಣ್ಣು ಕೊಚ್ಚಿ ಹೋಗಿ ಕೊರಕಲು ಉಂಟಾಗುತ್ತದೆ. 'ದ್ವೀಪಗಳು ಉಳಿದರೆ ಮಾತ್ರ ಪಕ್ಷಿಗಳ ನಲಿವು ಸಾಧ್ಯ' ಎಂಬುದನ್ನು ಅರ್ಥ ಮಾಡಿಕೊಂಡ ಮೈಸೂರು ವನ್ಯಜೀವಿ ವಿಭಾಗದ ಡಿಸಿಎಫ್ ಐ.ಬಿ. ಪ್ರಭುಗೌಡ ಅವರು ವಿಶೇಷ ಕ್ರಮಗಳನ್ನು ಕೈಗೊಂಡಿದ್ದಾರೆ.

ಈ ಹಿಂದೆ ಜಲ ಪ್ರವಾಹದಿಂದ ದ್ವೀಪಗಳನ್ನು ಪಾರು ಮಾಡಲು ಮರಳಿನ ಚೀಲಗಳನ್ನು ದ್ವೀಪಗಳ ಸುತ್ತ ಜೋಡಿಸುವುದು ಮತ್ತು ಸಸಿಗಳನ್ನು ಬೆಳೆಸುವ ಕ್ರಮ ಕೈಗೊಳ್ಳಲಾಗಿತ್ತು. ಉಕ್ಕಿ ಬರುವ 'ಕಾವೇರಿ' ಆರ್ಭಟಕ್ಕೆ ಮರಳಿನ ಚೀಲ, ಸಸಿಗಳು ನೀರು ಪಾಲಾಗುತ್ತಿದ್ದವು. ಹೀಗಾಗಿ ಇದೇ ಮೊದಲ ಬಾರಿಗೆ ಪ್ರಾಯೋಗಿಕವಾಗಿ ಮೂರು

'ಪಕ್ಷಿ ಮಿತ್ರ'ರಾದ 1200 ವಿದ್ಯಾರ್ಥಿಗಳು

ಪರಿಸರ ಶಿಕ್ಷಣ ಮತ್ತು ಪಕ್ಷಿಗಳ ಸಂರಕ್ಷಣೆ ಬಗ್ಗೆ ಶಾಲಾ ವಿದ್ಯಾರ್ಥಿಗಳಿಗೆ ಆರಿವು ಮೂಡಿಸುವ ಉದ್ದೇಶದಿಂದ ರಂಗನತಿಟ್ಟು ಪಕ್ಷಿಧಾಮದಲ್ಲಿ 'ಪಕ್ಷಿ ಮಿತ್ರ' ಎಂಬ ವಿನೂತನ ಕಾರ್ಯಕ್ರಮವನ್ನು ಅರಣ್ಯ ಇಲಾಖೆ ಹಮ್ಮಿಕೊಂಡಿದೆ. ಮೈಸೂರು ಮತ್ತು ಮಂಡ್ಯ ಜಿಲ್ಲೆಯ ವಿವಿಧ ಸರ್ಕಾರಿ ಶಾಲೆಗಳ 8ರಿಂದ 10ನೇ ತರಗತಿಯ ಮಕ್ಕಳು ರಂಗನತಿಟ್ಟಿಗೆ ಆಗಮಿಸಿ ಈ ಕಾರ್ಯಕ್ರಮದ ಪ್ರಯೋಜನ ಪಡೆಯುತ್ತಿದ್ದಾರೆ. ಈಗಾಗಲೇ 1200 ವಿದ್ಯಾರ್ಥಿಗಳನ್ನು 'ಪಕ್ಷಿ ಮಿತ್ರ' ಎಂದು ಘೋಷಿಸಲಾಗಿದೆ.

'ಆಯ್ದ ಸರ್ಕಾರಿ ಶಾಲೆಯಿಂದ 50 ವಿದ್ಯಾರ್ಥಿಗಳನ್ನು ಅರಣ್ಯ ಇಲಾಖೆಯ ವಾಹನದಲ್ಲಿ ರಂಗನತಿಟ್ಟಿಗೆ ಬೆಳಿಗ್ಗೆ 8ಕ್ಕೆ ಕರೆತಂದು ಅವರಿಗೆ ತಿಂಡಿ ಕೊಡುತ್ತೇವೆ. ಪರಿಸರ ಮತ್ತು ಪಕ್ಷಿಗಳ ಕುರಿತು ಕಿರುಪರೀಕ್ಷೆ ನೀಡುತ್ತೇವೆ. ನಂತರ ರಂಗನತಿಟ್ಟು ಪಕ್ಷಿಧಾಮ ಕುರಿತು 'ಪವರ್ ಪಾಯಿಂಟ್ ಪ್ರೆಸೆಂಟೇಶನ್', ದೋಣಿ ವಿಹಾರ, ಪಕ್ಷಿ ವೀಕ್ಷಣೆ ಮುಂತಾದ ಚಟುವಟಿಕೆಗಳು ಇರುತ್ತವೆ. ಸಂಜೆ ವಾಪಸ್ ಹೋಗುವ ವೇಳೆಯಲ್ಲಿ ಮತ್ತೊಂದು ಕಿರುಪರೀಕ್ಷೆ ನೀಡುತ್ತೇವೆ. ಇಲ್ಲಿಗೆ ಬಂದು ಏನನ್ನು ಕಲಿತರು ಎಂಬುದರ ಮೌಲ್ಯಮಾಪನ ಮಾಡುತ್ತೇವೆ. ಈ ಕಾರ್ಯಕ್ರಮ ಸಂಪೂರ್ಣ ಉಚಿತವಾಗಿರುತ್ತದೆ' ಎಂದು ರಂಗನತಿಟ್ಟು ಪಕ್ಷಿಧಾಮದ ಪರಿಸರ ಶಿಕ್ಷಣ ಅಧಿಕಾರಿ ಎಸ್. ಗಗನಾ ಮಾಹಿತಿ ನೀಡಿದರು.



ಕೊಳದ ಬಕ

UASB LIBRARY



ಪೆಲ್ಲಾರ್ಲೆಗಳ ವಿಹಾರ

ದ್ವೀಪಗಳಲ್ಲಿ 'ಗೇಬಿಯಲ್ ಸ್ಟ್ರಕ್ಚರ್' ಮಾದರಿಯ ತಡೆಗೋಡೆ ನಿರ್ಮಿಸಲಾಗುತ್ತಿದೆ. ಅಂದರೆ ದ್ವೀಪದ ಸುತ್ತ ಕಲ್ಲು, ಮಣ್ಣು ಸುರಿದು ಭದ್ರ ಮಾಡಲಾಗುತ್ತಿದೆ. ದ್ವೀಪಗಳಿಗೆ ಸೀರೆ ಉಡಿಸಿದಂತೆ, ಜಾಲರಿಗಳನ್ನು ಅಳವಡಿಸಲಾಗುತ್ತಿದೆ. ಈ ಪ್ರಯೋಗ ಯಶಸ್ವಿಯಾದರೆ ಹಂತ ಹಂತವಾಗಿ ಎಲ್ಲ ದ್ವೀಪಗಳಿಗೂ ವಿಸ್ತರಣೆ ಮಾಡಲಾಗುತ್ತದೆ ಎನ್ನುತ್ತಾರೆ ಪ್ರಭುಗೌಡ.

ಪಕ್ಷಿಗಳಿಗೂ ತಾಯಿ ಕಾವೇರಿ ನದಿ

ಈ ದ್ವೀಪಗಳಲ್ಲಿ ಹೊಳೆಮತ್ತಿ, ನೀರಂಜಿ, ನೇರಳೆ, ಆಲ, ಹೊಂಗೆ, ಬಿದಿರು, ಹತ್ತಿ, ರೈನ್ ಟ್ರೀ ಮುಂತಾದ ಮರಗಳಿವೆ. ಇವುಗಳ ರೆಂಬೆ ಕೊಂಬೆಗಳ ಮೇಲೆ ಪಕ್ಷಿಗಳು ಗೂಡು ಕಟ್ಟುತ್ತವೆ. 30 ಪ್ರಭೇದಗಳ ಜೊಂಡು, ಹಲವಾರು ತರಹದ ಜಲಸಸ್ಯಗಳು, ಹೂವು ಬಿಡದ ಜರಿಸಸ್ಯಗಳು ಇಲ್ಲಿನ ವಿಶೇಷ. ಪಕ್ಷಿಗಳ ಪಾಲಿಗೆ ಪೊರೆಯುವ ತಾಯಿಯೆಂದರೆ ಅದು ಕಾವೇರಿ ನದಿ.

ಮೈಸೂರು ಮಹಾರಾಜರು 1645–48ರ ಸಮಯದಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಕಟ್ಟಿದ ಬಂಗಾರದೊಡ್ಡಿ ಅಣೆಕಟ್ಟೆಯಿಂದ ಈ ನೆಲದಲ್ಲಿ ಪಕ್ಷಿಗಳ ಸ್ವರ್ಗವೇ ಸೃಷ್ಟಿಯಾದೀತು ಎಂದು ಯಾರು ಕಂಡಿದ್ದರು? ಶ್ರೀಕಂಠೀರವ ನರಸರಾಜ ಒಡೆಯರ್ ಕಟ್ಟಿಸಿದ ಕಟ್ಟೆಯಿಂದಾಗಿ ಕಾವೇರಿ ನದಿಯಲ್ಲಿ ಅನೇಕ ಕಿರುದ್ವೀಪಗಳು ಸಹಜವಾಗಿ ಸೃಷ್ಟಿಯಾದವು. ಈ ಹೊಸ ದ್ವೀಪಗಳು ಸ್ಥಳೀಯ ಪಕ್ಷಿಗಳಾದ ಕೊಕ್ಕರೆ, ಬೆಳ್ಳಕ್ಕಿ, ಹೆಜ್ಜಾರ್ಲೆ, ನೀರುಕಾಗೆ ಹಾಗೂ ಇತರೆ ಜಲಪಕ್ಷಿಗಳಿಗೆ ಗೂಡು ಕಟ್ಟಲು ಮತ್ತು ತಂಗಲು ನೆಲೆಯಾದವು. ನದಿಯಲ್ಲಿನ ಮೀನು ಮತ್ತು ಅಕ್ಕಪಕ್ಕದ ಗದ್ದೆಗಳಲ್ಲಿ ಹೇರಳವಾಗಿ ಸಿಗುವ ಜಲಚರ ಅಕಶೇರುಕಗಳು ಪಕ್ಷಿಗಳ ಪ್ರಮುಖ ಆಹಾರವಾಗಿವೆ.

221 ಪ್ರಭೇದಗಳು

ರಂಗನತಿಟ್ಟು ಪಕ್ಷಿಪ್ರಿಯರ ಪಾಲಿಗೆ ಸ್ವರ್ಗ. ಈ ಪಕ್ಷಿಧಾಮವು 67.49 ಹೆಕ್ಟೇರ್ ವಿಸ್ತೀರ್ಣ ಒಳಗೊಂಡಿದೆ. 221ಕ್ಕೂ ಅಧಿಕ ಪಕ್ಷಿ ಪ್ರಭೇದಗಳಿಗೆ ಆಶ್ರಯ ನೀಡಿರುವ ರಂಗನತಿಟ್ಟು 'ಜೀವಸಂಕುಲದ ತೊಟ್ಟಿಲು' ಎನಿಸಿದೆ. ನವೆಂಬರ್, ಡಿಸೆಂಬರ್ ತಿಂಗಳಲ್ಲಿ

'ರಾಮ್‌ಸರ್' ತಾಣದ ಮಾನ್ಯತೆ

2022ರಲ್ಲಿ ಕರ್ನಾಟಕದ ಮೊದಲ 'ರಾಮ್‌ಸರ್' ಸೈಟ್ ಪಟ್ಟಿಗೆ ಸೇರಿದ ಜೌಗು ಪ್ರದೇಶ (ವೆಟ್ ಲ್ಯಾಂಡ್) ಹಾಗೂ ಬರ್ಡ್ ಲೈಫ್ ಇಂಟರ್‌ನ್ಯಾಷನಲ್ ಸಂಸ್ಥೆಯಿಂದ 'ಪ್ರಮುಖ ಪಕ್ಷಿ ಮತ್ತು ಜೀವವೈವಿಧ್ಯ ತಾಣ' (ಐ.ಬಿ.ಎ) ಎಂಬ ಮಾನ್ಯತೆಗಳು ರಂಗನತಿಟ್ಟು ಪಕ್ಷಿಧಾಮಕ್ಕೆ ಸಿಕ್ಕ ಎರಡು ವಿಶೇಷ ಗರಿಗಳು.

'ಜೌಗುತಾಣ' ಎಂದರೆ ವರ್ಷದ ಬಹುಪಾಲು ಅಥವಾ ಶಾಶ್ವತವಾಗಿ ನೀರು ನಿಂತಿರುವ, ಜಲಸಂತೃಪ್ತ ಮಣ್ಣನ್ನು ಹೊಂದಿರುವ ಭೂಮಿ ಮತ್ತು ಜಲಚರ ವರಿಸರ ವ್ಯವಸ್ಥೆಗಳ ನಡುವಿನ ಪರಿವರ್ತನೆಯ ಪ್ರದೇಶ ಎಂದರ್ಥ. ಪರಿಸರವನ್ನು ಶುದ್ಧೀಕರಿಸುವಲ್ಲಿ ಪ್ರಮುಖ ಪಾತ್ರ ವಹಿಸುವ ಜೌಗುತಾಣಗಳನ್ನು 'ಪ್ರಕೃತಿಯ ಮೂತ್ರಪಿಂಡಗಳು' ಎಂದು ಕರೆಯಲಾಗುತ್ತದೆ.



ಗೂಡು ಕಟ್ಟಲು ಪುಟ್ಟ ಟೊಂಗೆ ತರುತ್ತಿರುವ ಬಾಯ್ದಳಕ ಕೊಕ್ಕರೆ

UASB LIBRARY



ಪಕ್ಷಿಧಾಮದಲ್ಲಿ ಬೀಡು ಬಿಟ್ಟಿರುವ ಹಲವಾರು ಪಕ್ಷಿಗಳು



ದ್ವೀಪಗಳ ಸಂರಕ್ಷಣೆಗಾಗಿ 'ಗೇಬಿಯಲ್ ಸ್ಟ್ರಕ್ಚರ್' ಮಾದರಿಯ ತಡೆಗೋಡೆ ನಿರ್ಮಿಸಲು ಜಾಲರಿ ಅಳವಡಿಸುತ್ತಿರುವ ಕಾರ್ಮಿಕರು

ಸಲೀಂ ಅಲಿ ಮಾಹಿತಿ ಕೇಂದ್ರ

ಖ್ಯಾತ ಪಕ್ಷಿಶಾಸ್ತ್ರಜ್ಞ (ಭಾರತದ ಬರ್ಡ್‌ಮ್ಯಾನ್) ಡಾ. ಸಲೀಂ ಅಲಿ ಅವರು 1939–40ರಲ್ಲಿ ಮೈಸೂರು ಭಾಗಕ್ಕೆ ಪಕ್ಷಿಗಳ ಅಧ್ಯಯನಕ್ಕೆ ಬಂದಿದ್ದರು. ರಂಗನತಿಟ್ಟಿನ ಸ್ಥಳ ಗುರುತಿಸಿ ಮೈಸೂರು ಮಹಾರಾಜರಿಗೆ ಮನವಿ ಸಲ್ಲಿಸಿ, 'ಪಕ್ಷಿಧಾಮ' ಎಂದು ಘೋಷಣೆ ಮಾಡುವಲ್ಲಿ ಯಶಸ್ವಿಯಾದರು. 1998ರಲ್ಲಿ ಮರು ಘೋಷಿಸಲ್ಪಟ್ಟು 'ರಂಗನತಿಟ್ಟು ಪಕ್ಷಿಧಾಮ' ಎಂದು ನಾಮಕರಣ ಮಾಡಲಾಯಿತು.

ಸಲೀಂ ಅಲಿ ಸೇನಪಿಗಾಗಿ ಮತ್ತು ಪಕ್ಷಿಗಳ ಕುರಿತ ಮಾಹಿತಿಗಾಗಿ 2015ರಲ್ಲಿ 'ಡಾ. ಸಲೀಂ ಅಲಿ ಮಾಹಿತಿ ಕೇಂದ್ರ'ವನ್ನು ರಂಗನತಿಟ್ಟಿನಲ್ಲಿ ತೆರೆಯಲಾಯಿತು. ಪಕ್ಷಿ ವೀಕ್ಷಕರಿಗೆ ಮತ್ತು ಪ್ರವಾಸಿಗರಿಗೆ ರಂಗನತಿಟ್ಟಿನ ವಿವಿಧ ಪಕ್ಷಿ ಪ್ರಭೇದಗಳು, ಅವುಗಳ ವಲಸೆ ಮತ್ತು ಪಕ್ಷಿಧಾಮದ ಇತಿಹಾಸದ ಬಗ್ಗೆ ಇಲ್ಲಿ ಮಾಹಿತಿ ಲಭ್ಯವಿದೆ.

ಕೊಕ್ಕು ಮತ್ತು ಪಾದಗಳ ರಚನೆ ಮತ್ತು ಪಕ್ಷಿಗಳ ಪ್ರತಿಕೃತಿಗಳು, ಡಿಜಿಟಲ್ ಫಲಕಗಳು, ಪಕ್ಷಿನೋಟವನ್ನು ಕಟ್ಟಿಕೊಡುತ್ತವೆ. ಹಕ್ಕಿಗಳ ಚಿತ್ರದ ಮೇಲಿನ ಬಟನ್ ಒತ್ತಿದರೆ, ಹೊರಬರುವ ಇಂಚರ ಮಕ್ಕಳನ್ನು ಸಂತಸದ ಅಲೆಯಲ್ಲಿ ತೇಲಿಸುತ್ತದೆ.



ಕಾವೇರಿ ನದಿಯಲ್ಲಿ ಬೆಳ ಐಬಿಸ್‌ಗಳ (ಬೆಳ ಕೆಂಬರಲು) ಜಲಕ್ರೀಡೆ

VASB LIBRARY

ಪಕ್ಷಿಗಳು ದೂರದ ಪ್ರದೇಶಗಳಿಂದ ಇಲ್ಲಿಗೆ ವಲಸೆ ಬರುತ್ತವೆ. ಜೂನ್‌ವರೆಗೆ ಇದ್ದು, ಗೂಡು ಕಟ್ಟಿ, ಮೊಟ್ಟೆ ಇಟ್ಟು, ಮರಿ ಮಾಡುತ್ತವೆ. ಆಹಾರದ ಅನ್ವೇಷಣೆ ಮತ್ತು ಹಾರಲು ಕಲಿಸಿದ ನಂತರ ರೆಕ್ಕೆ ಬಲಿತ ಮರಿಗಳೊಂದಿಗೆ ಸ್ವಸ್ಥಾನಕ್ಕೆ ಪಕ್ಷಿಗಳು ಹಾರಿ ಹೋಗುತ್ತವೆ. ಹೀಗಾಗಿಯೇ ರಂಗನತಿಟ್ಟನ್ನು 'ಪಕ್ಷಿಗಳ ಪ್ರಸೂತಿ ಗೃಹ' ಎಂದು ಕರೆಯಲಾಗುತ್ತದೆ.

ಇಲ್ಲಿನ ದ್ವೀಪಗಳು ಮಂಗ, ಮುಂಗುಸಿ, ನೀರುನಾಯಿ, ಮರಬೆಕ್ಕು, ಉಡ, ಸರೀಸೃಪ ಹಾಗೂ ಪಕ್ಷಿಗಳಂತೆ ಹಾರುವ ಸಾಮರ್ಥ್ಯ ಹೊಂದಿರುವ ಜಗತ್ತಿನ ಏಕೈಕ ಸಸ್ತನಿ ಪ್ರಾಣಿ ಬಾವಲಿಗಳಿಗೂ ಆವಾಸಸ್ಥಾನವಾಗಿವೆ. ಸಿಹಿ ನೀರಿನ ಮೊಸಳೆಗಳು, ಪಟ್ಟೆ ಕತ್ತಿನ ಕವಲುತೋಕೆ ಪಕ್ಷಿಗಳು ಇಲ್ಲಿನ ಮತ್ತೊಂದು ಆಕರ್ಷಣೆ.

ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು

ರಂಗನತಿಟ್ಟು ಪಕ್ಷಿಧಾಮದ ವೀಕ್ಷಕರಿಗೆ ಉಲ್ಲಾಸ ತರುವ ಹಾಗೂ ಸುಂದರ ಸಂಗತಿಯೆಂದರೆ ಈ ನದಿರೀವ ಅಥವಾ ನದಿ ಮೀನುಗುಟುಕ. ಕಲ್ಲು ಬಂಡೆಗಳ ಮೇಲೆ ವಿಶ್ರಮಿಸುವ ಈ ಪಕ್ಷಿಯು ಹೊಳೆಯುವ ಕಪ್ಪು ತಲೆ, ಭಿನ್ನವಾಗಿ ಕಾಣುವ ಕತ್ತಳೆ ಬಣ್ಣದ ಕೊಕ್ಕು, ಮೆಹೆಂದಿ ಬಳಿದಂತೆ ಕಾಣುವ ಕಾಲುಗಳು, ಕವಲೊಡೆದ ಬಾಲ, ಚೂಪಾದ ರೆಕ್ಕೆಗಳನ್ನು ಹೊಂದಿರುತ್ತವೆ. ಸಿಹಿ ನೀರಿನಲ್ಲಿ ಹೆಚ್ಚಾಗಿ ಕಂಡುಬರುವ ನದಿರೀವಗಳು ಮೀನು ಹಿಡಿಯುವುದರಲ್ಲಿ ಎತ್ತಿದ ಕೈ. ನೀರಿನೊಳಗೆ ಧುಮುಕಿ ಶಿಕಾರಿಯಾಡುತ್ತವೆ.

ದೋಣಿ ವಿಹಾರದ ಸಂಭ್ರಮ

'ದೋಣಿ ವಿಹಾರ' ರಂಗನತಿಟ್ಟಿನ ಪ್ರಮುಖ ಆಕರ್ಷಣೆ. ವಿಶಾಲವಾಗಿ ಹರಿಯುವ ಕಾವೇರಿ ನದಿಯಲ್ಲಿ ಹಚ್ಚ ಹಸುರಿನ ನಿಸರ್ಗದ ಮಧ್ಯೆ ದೋಣಿಯಲ್ಲಿ ವಿಹರಿಸುತ್ತಾ ರೆಂಬೆ ಕೊಂಬೆಗಳ ಮೇಲೆ ಗೂಡು ಕಟ್ಟಿರುವ ಪಕ್ಷಿಗಳನ್ನು ಹತ್ತಿರದಿಂದ ಕಣ್ತುಂಬಿಕೊಳ್ಳುವುದೇ ಒಂದು ಸಂಭ್ರಮ. ನೀರುನಾಯಿ ಮತ್ತು ಸಿಹಿ ನೀರಿನ ಮೊಸಳೆಗಳನ್ನು ನೋಡುವ ಅನುಭವ ರೋಮಾಂಚಕ. ಮರದಲ್ಲಿ



ಅಮ್ಮನ ತುತ್ತಿಗೆ ಕಾಯುತ್ತಿರುವ ಬಾಯ್ಕಳಕ ಕೊಕ್ಕರೆಯ ಮರಿಗಳು



ಮಳ್ಳಿ ಮಳ್ಳಿ
'ಮಿಂಚುಳ್ಳಿ'

ಜೋತು ಬಿದ್ದಿರುವ ನರಿ ಮುಖದ ಬಾವಲಿಗಳನ್ನು 'ಹಾರುವ ನರಿ' ಎಂದು ಕರೆಯಲಾಗುತ್ತದೆ' ಎನ್ನುತ್ತಾರೆ ಆರ್‌ಎಫ್‌ಒ ಸೈಯದ್ ನದೀಂ.

ಪಕ್ಷಿಗಳ ದರ್ಶನ ಮಾಡಿಸುವ ನಾವಿಕರು

'ಇಲ್ಲಿರುವ 12 ಬೋಟ್‌ಮನ್‌ಗಳು ಕೇವಲ ದೋಣಿ ನಡೆಸುವ ನಾವಿಕರಲ್ಲ. ಪಕ್ಷಿ ಮತ್ತು ಪರಿಸರ ವಿಸ್ಮಯಗಳ ಬಗ್ಗೆ ಮನಮುಟ್ಟುವಂತೆ ಹೇಳುವ ಗೈಡ್‌ಗಳಾಗಿದ್ದಾರೆ. ಇವರೆಲ್ಲರೂ ತರಬೇತಿ ಪಡೆದಿದ್ದು, ಪ್ರವಾಸಿಗರನ್ನು ನಗುಮೊಗದಿಂದ ಸ್ವಾಗತಿಸುತ್ತಾರೆ. ಪಕ್ಷಿಗಳ ದರ್ಶನ ಮಾಡಿಸುತ್ತಾ ರಂಗನತಿಟ್ಟಿನ ಸಮಗ್ರ ಮಾಹಿತಿ ನೀಡುತ್ತಾರೆ. ಇಲ್ಲಿ ಸ್ಪೀಡ್ ಬೋಟ್, ಮೋಟಾರ್ ಬೋಟ್ ಬಳಸಿದರೆ ಪಕ್ಷಿಗಳ ಚಲನವಲನಕ್ಕೆ ಧಕ್ಕೆಯಾಗುತ್ತದೆ ಎಂಬ ಕಾಳಜಿಯಿಂದ ಹರಿಗೋಲಿನಿಂದ ದೋಣಿ ಹುಟ್ಟು ಹಾಕುವ ವ್ಯವಸ್ಥೆ ಕಲ್ಪಿಸಲಾಗಿದೆ' ಎನ್ನುತ್ತಾರೆ ಡಿಆರ್‌ಎಫ್‌ಒ ರವಿ.

ಮಹಾರಾಜ ವ್ಯೂ ಪಾಯಿಂಟ್

ರಂಗನತಿಟ್ಟು ಪಕ್ಷಿಧಾಮದಲ್ಲಿರುವ 'ಮಹಾರಾಜ ವ್ಯೂ ಪಾಯಿಂಟ್' ಕಾವೇರಿ ನದಿಯ ಸುಂದರ ನೋಟ ಮತ್ತು ದ್ವೀಪದಲ್ಲಿನ ಪಕ್ಷಿಗಳನ್ನು ವೀಕ್ಷಿಸಲು ಅತ್ಯುತ್ತಮ ಸ್ಥಳ. ಜಯಚಾಮರಾಜ ಒಡೆಯರ್ ಕಾಲದಲ್ಲಿ ನಿರ್ಮಾಣವಾಗಿರುವ ಈ ವೀಕ್ಷಣಾ ಗೋಪುರ 'ಇಂಡೊ ಸಾರ್ಸೆನಿಕ್' ಶೈಲಿಯಲ್ಲಿದೆ. ಇದು ಪಕ್ಷಿಧಾಮದ ಶಾಂತಿಯುತ ಪರಿಸರದಲ್ಲಿ ಪ್ರಕೃತಿ ಪ್ರೇಮಿಗಳಿಗೆ ಮತ್ತು ಛಾಯಾಗ್ರಾಹಕರಿಗೆ ನೆಚ್ಚಿನ ತಾಣವಾಗಿದೆ. ಇಲ್ಲಿ ಬೋಟಿಂಗ್ ಜೊತೆಗೆ ಪಕ್ಷಿಗಳನ್ನು ಹತ್ತಿರದಿಂದ ನೋಡಬಹುದು.

ಕವಲುತೋಕೆಗಳ ಆಕರ್ಷಣೆ

ಕವಲುತೋಕೆಗಳು ಕೀಟಾಹಾರಿ ಪಕ್ಷಿಗಳಾಗಿವೆ. ಇವುಗಳನ್ನು ಕನ್ನಡದಲ್ಲಿ ಅಂಬರಗುಬ್ಬಿ ಅಥವಾ ಬಾನಾಡಿ ಎಂದೂ ಕರೆಯಲಾಗುತ್ತದೆ. ಗುಬ್ಬಚ್ಚಿ ಗಾತ್ರದ ಇವುಗಳ ಬಾಲ ಕವಲೊಡೆದಂತಿರುತ್ತದೆ. ಹೀಗಾಗಿಯೇ ಕವಲುತೋಕೆ ಎಂಬ ಹೆಸರು ಬಂದಿದೆ. ಕಾವೇರಿ ನದಿ ದಂಡೆಯ ರೈತರ ಹೊಲಗಳಿಗೆ ಹೋಗಿ ಕೆನೆ ಮಣ್ಣು ತಂದು, ಎಂಜಲಿನಿಂದ ಮಿಶ್ರಣ ಮಾಡಿ ಗೂಡು ಕಟ್ಟುವುದನ್ನು ನೋಡುವುದೇ ಒಂದು ವಿಸ್ಮಯ. ಪಕ್ಷಿಗಳ ಪುಕ್ಕಗಳನ್ನು ಆಯ್ದು ತಂದು ಮೆತ್ತನೆ ಹಾಸಿಗೆ ಮಾಡಿಕೊಂಡು ಮೊಟ್ಟೆ ಇಡುತ್ತವೆ. ನೊಣ, ಸೊಳ್ಳೆ, ಇರುವೆ, ಜೇರುಂಡೆ, ಸಣ್ಣ ಪತಂಗಗಳು ಇವುಗಳ ಪ್ರಮುಖ ಆಹಾರ.

ಸಂರಕ್ಷಣೆಯ ಸವಾಲು

'ಭಾರತದ ಪಕ್ಷಿಧಾಮಗಳ ಭೂಪಟದಲ್ಲಿ ರಂಗನತಿಟ್ಟು ಪಕ್ಷಿಧಾಮ ರಾರಾಜಿಸುತ್ತಲೇ ಇರಬೇಕಾದರೆ ನಿಮ್ಮ ಹಾರೈಕೆ, ಸಂರಕ್ಷಣೆ ಹಾಗೂ ನಿರ್ವಹಣೆ ಎಲ್ಲಾ ಬೇಕು. ನದಿಯ ತೀರದ ಸವಕಳಿ, ಅಕ್ರಮ ಮೀನುಗಾರಿಕೆ, ಅಕ್ರಮ ಮರಳು ಮಾರಾಟದ ದಂಧೆ, ಮರಗಳ್ಳತನ, ದನ ಕರುಗಳನ್ನು ಅಕ್ರಮವಾಗಿ ಪಕ್ಷಿಧಾಮದಲ್ಲಿ ಮೇಯಿಸುವುದು ಇವು ನಿತ್ಯ ಎದುರಿಸಬೇಕಾದ ಸವಾಲುಗಳು' ಎನ್ನುತ್ತಾರೆ ಇಲ್ಲಿನ ಅರಣ್ಯ ಇಲಾಖೆ ಸಿಬ್ಬಂದಿ.

'ಈ ಸವಾಲುಗಳನ್ನು ಎದುರಿಸುತ್ತಾ, ಅದರ ಜತೆಗೆ ಸಂಶೋಧನೆ, ಸಂರಕ್ಷಣೆ, ಸಂಯೋಜನೆ, ಸಾರ್ವಜನಿಕರಿಗೆ ಸೌಲಭ್ಯ ಒದಗಿಸುವುದು ಇತ್ಯಾದಿ ಕಾರ್ಯಗಳನ್ನು ನಿರ್ವಹಿಸಬೇಕು' ಎಂಬುದು ಅರಣ್ಯ ಅಧಿಕಾರಿಗಳ ಉವಾಚ.

ರಂಗನತಿಟ್ಟು ಪಕ್ಷಿಧಾಮಕ್ಕೆ ವಾರದ ಏಳೂ ದಿನ ಬೆಳಿಗ್ಗೆ 6ರಿಂದ ಸಂಜೆ 5.30ರವರೆಗೆ ಪ್ರವೇಶಾವಕಾಶವಿದೆ. ಫೆಬ್ರುವರಿ–ಮಾರ್ಚ್‌ನಲ್ಲಿ ನಡೆಸಿದ ಪಕ್ಷಿ ಗಣತಿಯಲ್ಲಿ ಅಂದಾಜು 11,780 ಹಕ್ಕಿಗಳನ್ನು ಗುರುತಿಸಲಾಗಿದೆ. ಸೆಲ್ಫಿ ಪಾಯಿಂಟ್, ರಾಕ್ ಗಾರ್ಡನ್, ತೂಗುಸೇತುವೆ, ಗಾಜಿನ ಸೇತುವೆ, ಮರಗಳ ತೋಪು, ಮಕ್ಕಳ ಆಟದ ಮೈದಾನ, ಸ್ಮರಣಿಕೆ ವಸ್ತುಗಳ ಅಂಗಡಿ, ವೀಕ್ಷಣಾ ಗೋಪುರ ರಂಗನತಿಟ್ಟಿನ ಇತರ ಆಕರ್ಷಣೆಗಳು. ಉಪಾಹಾರ ಕೇಂದ್ರ, ಕುಡಿಯುವ ನೀರು, ಶೌಚಾಲಯ, ವಾಹನ ನಿಲುಗಡೆ ಸ್ಥಳ ಸೇರಿದಂತೆ ಮೂಲಸೌಕರ್ಯವನ್ನು ಒಳಗೊಂಡಿದೆ. ಇದು 'ಪ್ಲಾಸ್ಟಿಕ್ ಮುಕ್ತ ವಲಯ' ಎಂದು ಘೋಷಿಸಲಾಗಿದೆ. ■

ಪಕ್ಷಿಧಾಮದಲ್ಲಿ ಪ್ರವಾಸಿಗರ ದೋಣಿ ವಿಹಾರ



UASB LIBRARY





ಮೈಸೂರಿನ ದೇವರಾಜ ಮಾರುಕಟ್ಟೆಯಲ್ಲಿ ಮೈಸೂರು ಮಲ್ಲಿಗೆ ವ್ಯಾಪಾರ

ಮನಗೆಲ್ಲುವ ಸುವಾಸನೆಯ

ಮೈಸೂರು ಮಲ್ಲಿಗೆ

■ ಶಿವಪ್ರಸಾದ್ ರೈ
ಚಿತ್ರಗಳು: ಅನೂಪ್ ರಾಘ ಟಿ.

'ಮೈಸೂರು ಮಲ್ಲಿಗೆ'... ಈ ಹೆಸರು ಹೇಳಿದ ತಕ್ಷಣ ಪ್ರೇಮಕವಿ ಕೆ.ಎಸ್. ನರಸಿಂಹಸ್ವಾಮಿ ಅವರ ಜನಪ್ರಿಯ ಪ್ರೇಮಕಾವ್ಯ ಸಂಕಲನ ನೆನಪಾಗುತ್ತದೆ. ಆದರೆ ನಾವಿಲ್ಲಿ ಹೇಳ ಹೊರಟಿರುವುದು ತನ್ನ ವಿಶಿಷ್ಟ ಸುವಾಸನೆ, ಗುಣಮಟ್ಟದ ಕಾರಣಕ್ಕಾಗಿ ಭೌಗೋಳಿಕ ಸೂಚ್ಯಂಕ (ಜಿಐ ಟ್ಯಾಗ್) ಹೊಂದಿರುವ 'ಮೈಸೂರು ಮಲ್ಲಿಗೆ' ಕುರಿತು...

ಹಾಲ್ದೊರೆಯ ಬಣ್ಣ, ದುಂಡನೆಯ ಮೊಗ್ಗು, ಅರಳಿದರೆ ಸುಗಂಧ ಬೀರುವ 'ಮೈಸೂರು ಮಲ್ಲಿಗೆ', ಕವಿಗಳಿಂದ ಹಿಡಿದು ಹೆಣ್ಣುಮಕ್ಕಳ ಮನಸ್ಸು ಗೆದ್ದಿದೆ. ರಾಜರ ಕಾಲದಲ್ಲಿ ಕೃಷಿಗಷ್ಟೇ ಸೀಮಿತವಾಗಿದ್ದ ಈ ಮಲ್ಲಿಗೆ ನಂತರ ಉದ್ಯಮವಾಗಿ, ಕವಿ ಕಾಲದ ಗತವೈಭವಕ್ಕೆ ಸಾಕ್ಷಿಯಾಗಿದೆ. ಹಲವು ಕವಿ ಮಹಿಳೆಯರಿಗೆ ಸ್ವ ಉದ್ಯೋಗದ ಭರವಸೆ ನೀಡಿ ಆರ್ಥಿಕ ಶಕ್ತಿಯಾಗಿ ಬೆಳೆದು ನಿಂತಿದೆ.

ಕರ್ನಾಟಕದ ಮಲ್ಲಿಗೆ ಕೃಷಿಯಲ್ಲಿ ಮುಖ್ಯವಾಗಿ ಮೂರು ವಿಧದ ತಳಿಗಳು ಪ್ರಸಿದ್ಧ. ಸುಗಂಧಭರಿತ ಹಾಗೂ ಹಳದಿ ಮಿಶ್ರಿತ ಬಿಳಿ ಬಣ್ಣದ ಮೊಗ್ಗುಗಳನ್ನು ಹೊಂದಿರುವ ಮೈಸೂರು ಮಲ್ಲಿಗೆ, ಕರಾವಳಿ ಭಾಗದಲ್ಲಿ ಜನಪ್ರಿಯವಾಗಿರುವ, ಉದ್ದನೆಯ ಮೊಗ್ಗುಗಳ ಉಡುಪಿ ಮಲ್ಲಿಗೆ (ಶಂಕರಪುರ ಮಲ್ಲಿಗೆ), ಬಾಡದೇ ಸುದೀರ್ಘ ಕಾಲ ಉಳಿಯುವ ಹೂವಿನ ಹಡಗಲಿಯ ಮಲ್ಲಿಗೆ ಜನಮನ ಗೆದ್ದಿವೆ. ಇವುಗಳಲ್ಲಿ ಮೈಸೂರು ಮಲ್ಲಿಗೆ ಹೆಚ್ಚಿನ ಬೇಡಿಕೆ ಹೊಂದಿದ್ದು, ಇತರೆ ಮಲ್ಲಿಗೆಗಿಂತ ದರವೂ ಹೆಚ್ಚಿದೆ.

ಮಹಾರಾಜರ ಕಾಲದಲ್ಲಿ ಈರಯ್ಯನ ಕೆರೆ ಹಾಗೂ ನಂತರ ವೀರನಗೆರೆಯಲ್ಲಿ ಬೆಳೆಯುತ್ತಿದ್ದ ಮೈಸೂರು ಮಲ್ಲಿಗೆಯನ್ನು ಈಗ ಜಿಲ್ಲೆಯ ಕೆಲವೇ ರೈತರು ಬೆಳೆಯುತ್ತಿದ್ದಾರೆ. ಒಂದೊಮ್ಮೆ ಕಾಣಲು ಅಪರೂಪವಾಗಿದ್ದ ಈ ಮಲ್ಲಿಗೆಗೆ 2006ರಲ್ಲಿ ಜಿಐ ಟ್ಯಾಗ್ ಮಾನ್ಯತೆ ದೊರೆತ ಬಳಿಕ ಮರುಜೀವ ದಕ್ಕಿತು. ಬಳ್ಳಿಗಳಲ್ಲಿ ಬೆಳೆಯುತ್ತಿದ್ದ ಮೈಸೂರು ಮಲ್ಲಿಗೆಯನ್ನು ತಮಿಳುನಾಡಿನ ವಿಧಾನದಲ್ಲಿ ಗಿಡಗಳಿಗೆ ರೂಪಾಂತರ ಮಾಡಲಾಯಿತು. ಪ್ರಸ್ತುತ ಮೈಸೂರು, ಶ್ರೀರಂಗಪಟ್ಟಣ, ಪಾಂಡವಪುರ ಮತ್ತು ಹುಣಸೂರು ಪ್ರದೇಶಗಳಲ್ಲಿ ಈ ಬೆಳೆ ಕಾಣಸಿಗುತ್ತದೆ.

ಯದುವಂಶದ ರಾಜರ ಕಾಲದಿಂದಲೂ ರಾಜ ಮರ್ಯಾದೆ ಪಡೆದಿರುವ ಮೈಸೂರು ಮಲ್ಲಿಗೆಗೆ ಇಂದಿಗೂ ವಿಶೇಷ ಸ್ಥಾನಮಾನವಿದೆ. ಮೈಸೂರಿನ ಅಧಿದೇವತೆ ಚಾಮುಂಡೇಶ್ವರಿಯ ನಿತ್ಯ ಅಲಂಕಾರಕ್ಕೆ ಈ ಮಲ್ಲಿಗೆ ಇರಲೇಬೇಕು. ಅದ್ಭುತ ಪರಿಮಳದಿಂದಾಗಿ ಸುಗಂಧದ್ರವ್ಯ ತಯಾರಿಕೆಯಲ್ಲಿಯೂ ಬೇಡಿಕೆ ಹೊಂದಿದೆ. ಇಂದಿಗೂ ಸಾಂಪ್ರದಾಯಿಕ ಕಾರ್ಯಕ್ರಮದಲ್ಲಿ 'ಮೈಸೂರು ಮಲ್ಲಿಗೆ'ಗೆ ಪ್ರಧಾನ ಸ್ಥಾನ.

'ಮೈಸೂರು ಮಲ್ಲಿಗೆ' ಕವನದಲ್ಲಿನ ಪ್ರತಿ ಸಾಲುಗಳು ಮಲ್ಲಿಗೆಯ ಹೆಚ್ಚುಗಾರಿಕೆಯನ್ನು ಎತ್ತಿ ಹಿಡಿದಿವೆ. ಆಗತ್ಯೇ ಮದುವೆಯಾದ ಪತಿರಾಯ ತನ್ನ ಪತ್ನಿಯನ್ನು ಕಾಣಲು ಮಾವನ ಮನೆಗೆ ಬಂದಾಗ 'ಮಾವನ ಮನೆಯಲಿ ಮಲ್ಲಿಗೆ ಹೂಗಳ ಪರಿಮಳ ತುಂಬಿತ್ತು' ಎಂದು ಬಣ್ಣಿಸಿದ್ದಾರೆ. 'ನಿಜದ ಸಂತಸದಲ್ಲಿ ಬಿರಿದ ಮಲ್ಲಿಗೆಯಿಂದ... ಬರುವ ಕಂಪಿನ ಹೆಸರು ಪ್ರೇಮವೆಂದು' ಎಂಬ ವರ್ಣನೆ ಇಂದಿಗೂ ಜನಮಾನಸದಲ್ಲಿ ಹಾಸುಹೊಕ್ಕಾಗಿದೆ. ಈ ಕವನದ ಸಾಲುಗಳನ್ನು ಆಧರಿಸಿ 1991ರಲ್ಲಿ ಟಿ.ಎಸ್. ನಾಗಾಭರಣ ಅವರು 'ಮೈಸೂರು ಮಲ್ಲಿಗೆ' ಎಂಬ ಸಿನಿಮಾ ನಿರ್ಮಿಸಿದರು. ಹೀಗೆ ಮಲ್ಲಿಗೆಯು ತನ್ನ ಗುಣದ ಮೂಲಕ ಮೈಸೂರು ಜಿಲ್ಲೆಗೂ ವಿಶ್ವಮಾನ್ಯತೆ ದೊರೆಯುವಂತೆ ಮಾಡಿದೆ.

UASB LIBRARY



ಮೈಸೂರಿನ ಗುಂಗ್ರಾಲ್ ಛತ್ರದಲ್ಲಿನ ಜಮೀನಿನಲ್ಲಿ ಮೈಸೂರು ಮಲ್ಲಿಗೆ ಕೃಷಿಯಲ್ಲಿ ತೊಡಗಿರುವ ರೈತರು



ಮಲ್ಲಿಗೆ ಮಾಲೆ ಕಟ್ಟುತ್ತಿರುವ ವ್ಯಾಪಾರಿ

ಗಿಡ ಬೆಳೆಸುವ ವಿಧಾನ: ಡಿಸೆಂಬರ್ ಕೊನೆಯಲ್ಲಿ ಅಥವಾ ಜನವರಿ ಆರಂಭದಲ್ಲಿ ಮಲ್ಲಿಗೆ ಗಿಡದ ಕಡ್ಡಿಗಳನ್ನು ತುಂಡರಿಸಿ ನೆಡುತ್ತಾರೆ. 15 ದಿನ ಆ ಕಡ್ಡಿಗೆ ನೀರು ನೀಡದೆ, ಅದು ಒಣಗುವಂತೆ ಮಾಡುತ್ತಾರೆ. ನಂತರ ನಿಯಮಿತವಾಗಿ ನೀರು ನೀಡಿದಾಗ ಹೊಸ ಚಿಗುರು ಮೂಡುತ್ತದೆ. ಅವನ್ನು ಜಮೀನಿನಲ್ಲಿ ನೆಡುತ್ತಾರೆ. ಮಲ್ಲಿಗೆಯು ಕಡಿಮೆ ನೀರಾವರಿ ಬೇಡುವ ಕೃಷಿ ಆಗಿರುವುದರಿಂದ ಗುಡ್ಡ ಪ್ರದೇಶಗಳಲ್ಲಿ ಹೆಚ್ಚು ಬೆಳೆಯುತ್ತಾರೆ. ತಂಪಾದ ವಾತಾವರಣದಲ್ಲಿ ಮಲ್ಲಿಗೆ ಗಿಡಗಳು ಬೆಳೆಯುವುದಿಲ್ಲ. ಹೀಗಾಗಿ ಜೂನ್, ಜುಲೈನಲ್ಲಿ ಬೆಳೆ ಕೈಗೆ ಸಿಗುವುದಿಲ್ಲ. ಗಿಡ ನೆಟ್ಟಾದ ಬಳಿಕ 45 ದಿನಗಳಲ್ಲಿ ಹೂ ಬಿಡಲು ಆರಂಭವಾಗುತ್ತದೆ. ನಂತರ ನಾಲ್ಕರಿಂದ ಐದು ತಿಂಗಳು ಆ ಗಿಡಗಳಲ್ಲಿ ನಿರಂತರವಾಗಿ ಹೂ ಸಿಗುತ್ತವೆ. ಒಂದೇ ತೊಟ್ಟಿನಲ್ಲಿ 6–8 ಹೂಗಳು ಅರಳಿ, ದಟ್ಟವಾದ, ತೀವ್ರವಾದ ಪರಿಮಳವನ್ನು ಬೀರುತ್ತವೆ.

ಈ ಗಿಡಗಳು ದಟ್ಟವಾದ ಎಲೆಗಳನ್ನು ಹೊಂದಿರುವ ಪೊದೆ ಸ್ವರೂಪದಲ್ಲಿದ್ದು, 5–6 ಅಡಿ ಎತ್ತರಕ್ಕೆ ಬೆಳೆಯುತ್ತದೆ. ಮೈಸೂರು ಮಲ್ಲಿಗೆಯು ಅರಳುವ ವೇಳೆ ಕಿಲೋಮೀಟರ್‌ಗಟ್ಟಲೆ ದೂರದವರೆಗೂ ಅದರ ಸುವಾಸನೆ ಹಬ್ಬುತ್ತದೆ. ಪರಿಮಳದ ಮೂಲಕವೇ ಮಲ್ಲಿಗೆ ಬೆಳೆಯುವ ಜಮೀನನ್ನು ಕಂಡುಹಿಡಿಯಬಹುದು.



ಮೇ 07ರ ಸಂಚಿಕೆಯ 'ಚಿನ್ನುಡಿ' 'ಸಕ್ರಿ ಸಂಕೇಶ್ವರ' ಕೇಳಿ, ರವೀಂದ್ರ ವೀ ಮುನ್ನೋಳಿಮಠ ಅವರ ಧ್ವನಿಯಲ್ಲಿ...

ಪಾಡ್‌ಕಾಸ್ಟ್ ಕೇಳಲು ಕ್ಯೂಆರ್ ಕೋಡ್ ಸ್ಕಾನ್ ಮಾಡಿ

ಎಲ್ಲಾ ಕೃಷಿ ಬೆಳೆಯಂತೆ ಇದೂ ಮುಂಜಾನೆಯ ಶ್ರಮ ಬೇಡುತ್ತದೆ. ಬೆಳಿಗ್ಗೆ 11ರೊಳಗೆ ಮಾರುಕಟ್ಟೆಗೆ ಹೂ ನೀಡಿದರೆ ಉತ್ತಮ ಬೆಲೆ ದೊರೆಯುತ್ತದೆ. ಹೀಗಾಗಿ ಮುಂಜಾನೆಯಿಂದಲೇ ಮೊಗ್ಗುಗಳನ್ನು ಕೊಯ್ದು, ನಂತರ ಮಾರುಕಟ್ಟೆಗೆ ತೆರಳುತ್ತಾರೆ. ತಮಿಳುನಾಡಿನ ಮಲ್ಲಿಗೆಗಿಂತ ಮೈಸೂರು ಮಲ್ಲಿಗೆಗೆ ₹100 ಹೆಚ್ಚು ಬೆಲೆ ಇದೆ. ಯುಗಾದಿ, ಶಿವರಾತ್ರಿ ಹಾಗೂ ಹಬ್ಬ ಹರಿದಿನಗಳ ಸಮಯದಲ್ಲಿ ಈ ಮಲ್ಲಿಗೆಗೆ ಹೆಚ್ಚಿನ ಬೇಡಿಕೆ.

ಕೆಲವೆಡೆ ದೊಡ್ಡ ಪ್ರಮಾಣದಲ್ಲಿ ಮಲ್ಲಿಗೆ ಬೆಳೆದರೆ, ಮಹಿಳೆಯರು ಮನೆಯ ಬಳಿ ಸಣ್ಣ ಆದಾಯಕ್ಕಾಗಿ ಬೆಳೆಯುವುದನ್ನೂ ಕಾಣಬಹುದು. ಗೃಹಿಣಿಯರಿಗೆ ಸ್ವ ಉದ್ಯೋಗದ ಕನಸು ಸಾಕಾರ ಮಾಡಿದ ಕೀರ್ತಿ ಮಲ್ಲಿಗೆಯದ್ದು.

'ಶ್ರಮವಹಿಸಿ ದುಡಿದರೆ ಮೈಸೂರು ಮಲ್ಲಿಗೆ ಕುಟುಂಬ ನಿರ್ವಹಣೆಗೆ ದಾರಿ ಮಾಡಿಕೊಡುತ್ತದೆ. ಮಾರುಕಟ್ಟೆ ಬೆಲೆಯಲ್ಲಿ ಸ್ಥಿರತೆ ಇಲ್ಲದ ಕಾರಣ ರೈತರು ಆಸಕ್ತಿ ವಹಿಸುತ್ತಿಲ್ಲ. ಕೆಲವೊಮ್ಮೆ ಗಿಡಗಳಲ್ಲಿ ಚಿಟ್ಟೆ ಬಿದ್ದು ಹಾಳಾಗುತ್ತದೆ. ಹಿಂದೆ ಹಲವು ಎಕರೆ ಬೆಳೆಯುತ್ತಿದ್ದವರು, ಈಗ ಕೆಲವು ಗಿಡಗಳನ್ನಷ್ಟೇ ಇಟ್ಟುಕೊಂಡಿದ್ದಾರೆ' ಎಂದು ಡಿಎಂಜೆ ಹಳ್ಳಿಯ ಮಲ್ಲಿಗೆ ಬೆಳೆಗಾರ ಟಿ. ಕೃಷ್ಣಪ್ಪ ಹೇಳುತ್ತಾರೆ.

'ಮೈಸೂರು ಮಲ್ಲಿಗೆಯ ಪರಿಮಳಕ್ಕೆ ಅಲ್ಲಿನ ಮಣ್ಣಿನ ಗುಣವೇ ಕಾರಣ. ನೀರು ಸರಾಗವಾಗಿ ಬಸಿದು ಹೋಗುವ ಫಲವತ್ತಾದ ಕೆಂಪು ಗೋರು ಮಣ್ಣು ಈ ಬೆಳೆಗೆ ಅತ್ಯಗತ್ಯ. 27 ರಿಂದ 32 ಡಿಗ್ರಿ ಸೆಲ್ಸಿಯಸ್ ತಾಪಮಾನದಲ್ಲಿ ಮಾತ್ರ ಈ ಹೂವು ಸಮೃದ್ಧವಾಗಿ ಅರಳುತ್ತದೆ. ಹವಾಮಾನದಲ್ಲಿ ಸ್ವಲ್ಪ ಏರುಪೇರಾದರೂ ಇಳುವರಿ ಮೇಲೆ ಪರಿಣಾಮ ಬೀರುತ್ತದೆ' ಎನ್ನುವುದು ತೋಟಗಾರಿಕಾ ತಜ್ಞರ ಅಭಿಪ್ರಾಯ.

ತೋಟಗಾರಿಕೆ ಇಲಾಖೆಯ ಮೂಲಕ ಸರ್ಕಾರ 'ಮೈಸೂರು ಮಲ್ಲಿಗೆ' ಬೆಳೆಗೆ ಸೌಲಭ್ಯಗಳನ್ನು ನೀಡುತ್ತಿದೆ. ಸಬ್ಸಿಡಿ ಲಭ್ಯವಿದೆ. ಜಾಗೃತಿ ಮೂಡಿಸುವ ಕೆಲಸವೂ ನಡೆಯುತ್ತಿದೆ. ಇಂತಹ ಪಾರಂಪರಿಕ ಬೆಳೆ ಉಳಿಸಲು ಇನ್ನೂ ತೀವ್ರಗತಿಯ ಪ್ರಯತ್ನ ಅಗತ್ಯವಿದೆ ಎನ್ನುವುದು ಮಲ್ಲಿಗೆ ಬೆಳೆಗಾರರ ಅಭಿಮತ. ಸ್ಥಿರ ಮಾರುಕಟ್ಟೆ ಒದಗಿಸುವುದರ ಜೊತೆಗೆ, ಬೆಳೆಗಾರರನ್ನೂ ತಜ್ಞರ ಸಮಿತಿಯಲ್ಲಿ ಸೇರಿಸಿಕೊಳ್ಳಬೇಕು. ಆಗ ಬೆಳೆಗಾರರ ನೈಜ ಸಮಸ್ಯೆ ಸರ್ಕಾರಕ್ಕೆ ತಲುಪುತ್ತದೆ.

ಲಾಭದಾಯಕ ಬೆಳೆ ಆಗಿದ್ದರೂ, ಮೈಸೂರು ಮಲ್ಲಿಗೆ ಬೆಳೆಯುವ ವ್ಯಾಪ್ತಿ ಕಡಿಮೆಯಾಗುತ್ತಾ ಹೋಗುತ್ತಿದೆ. ಜಿಲ್ಲೆಯಲ್ಲಿನ ಕೆಲವೇ ಹಿರಿಯ ಬೆಳೆಗಾರರಿಗೆ ಇದರ ಬಗ್ಗೆ ಸಂಪೂರ್ಣ ಮಾಹಿತಿ ಇದೆ. ಅವರ ಕಾಲಘಟ್ಟದಲ್ಲೇ ಯುವ ಕೃಷಿಕರು 'ಮೈಸೂರು ಮಲ್ಲಿಗೆ' ಕುರಿತು ತಿಳಿದು ಕೃಷಿ ಪರಂಪರೆ ಮುಂದುವರೆಸಬೇಕಿದೆ.



ಮೈಸೂರು ಮಲ್ಲಿಗೆ ಖರೀದಿ ಜೋರು

UASB LIBRARY



ಪಲ್ಪ್ ತಯಾರಿಯಲ್ಲಿ
ನಿರತರಾದ ಕುರುವೇರಿಯ
ನವ್ಯಶ್ರೀ ಮತ್ತು ವಿಶ್ವಕೇಶವ

ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ ರೈತರು ಮತ್ತು ಗ್ರಾಮಗಳ ಆರ್ಥಿಕ ಸ್ವಾವಲಂಬನೆಗೆ ಸಹಕಾರಿ ಆಗುತ್ತದೆ. ಅದರ ಸಾಧ್ಯತೆ ಮತ್ತು ಸವಾಲುಗಳ ಕುರಿತ ಎದುರಾಗುವ ಪ್ರಶ್ನೆಗಳಿಗೆ ಗೇರುಹಣ್ಣಿನ ಶರಬತ್ತಿನ ಪ್ರಯೋಗ ಉತ್ತರದಂತೆ ಇದೆ.

ಶರಬತ್ತೇ ಮಹಾದ್ವಾರ!

■ ಶ್ರೀ ಪಡ್ರೆ

ನಂಬಲು ಕಷ್ಟ! ನಸು ಬಿಳಿಯ ಶರಬತ್ತೊಂದು ಕರ್ನಾಟಕದ ಹಲವೆಡೆ ರೋಮಾಂಚನ ಸೃಷ್ಟಿಸಿದೆ.

'ಈ ಹಣ್ಣಿನಿಂದ ಇಷ್ಟು ರುಚಿಯ ಶರಬತ್ತು ಮಾಡುವುದನ್ನು ಯಾರೂ ಹೇಳಿಕೊಟ್ಟಿಲ್ಲ'. 'ಸುದ್ದಿ ತಿಳಿಯುವುದು ತುಂಬ ತಡವಾಯ್ತು'. 'ತಯಾರಿ ಸುಲಭ, ದಿನನಿತ್ಯ ಮಾಡಿಕೊಳ್ಳಬಹುದು'. 'ಆಯಾಸವಾದಾಗ ಕುಡಿದರೆ ಅದೆಂಥ ಉಲ್ಲಾಸ'– ಮೊದಲಾದ ಪ್ರತಿಕ್ರಿಯೆಗಳು ಕೇಳಿಬರುತ್ತಿವೆ.

ಎರಡೇ ವಾರಗಳೊಳಗೆ ಈ ಪಾನೀಯ ನೂರಾರು ಕೃಷಿಕರ ಮನೆಮನಗಳನ್ನು ಗೆದ್ದಿದೆ. ವಾಟ್ಸ್‌ಆ್ಯಪ್‌ಗಳಲ್ಲಿ ಹರಿದಾಡುತ್ತಿದೆ. ಓಮ್ಮೆ ಕುಡಿದವರು ಉಳಿದವರಿಗೆ ಶಿಫಾರಸು ಮಾಡುತ್ತಲೇ ಇದ್ದಾರೆ.

'ಮಾರುಕಟ್ಟೆಯ ಜ್ಯೂಸುಗಳಿಂದ ಎಷ್ಟೋ ಪಾಲು ಒಳ್ಳೆಯದು. ನನ್ನ ಅಂಗಡಿಯಲ್ಲೂ ಮಾರಬಹುದು' ಎನ್ನುತ್ತಾರೆ ಮೂಡಬಿದರೆಯ ರಾಘವೇಂದ್ರ ಕಾಮತ್.

'ಬೆಂಗಳೂರಿನಿಂದ ಊರಿಗೆ ಬಂದ ಎಂಜಿನಿಯರ್ ಮಗ ಹಿಂದಿರುಗುವಾಗ ತನ್ನ ಕಚೇರಿಯವರಿಗಾಗಿ ಬಾಟ್ಲಿಯಲ್ಲಿ ತುಂಬಿ ಒಯ್ದಿದ್ದಾನೆ' ಎನ್ನುತ್ತಾರೆ ಏತಡ್ಕದ ವೈ.ಕೆ. ಗಣಪತಿ ಭಟ್. 'ಸೀಸನ್ ಮುಗಿಯುವುದರೊಳಗೆ ಗರಿಷ್ಠ ಜನರಿಗೆ ಇದರ ರುಚಿ ಹಬ್ಬಿಸಬೇಕು' ಎನ್ನುತ್ತಾ ಗಣಪತಿ ಭಟ್ ಪ್ರತಿನಿತ್ಯ ಎರಡು ಲೀಟರ್ ಜ್ಯೂಸ್ ತಯಾರಿಸುತ್ತಾರೆ. ತಾವೂ ಕುಡಿದು, ಇತರರಿಗೂ ಕುಡಿಸುತ್ತಾರೆ.

ಅಷ್ಟಕ್ಕೂ ಈ ಶರಬತ್ತು ಏನಿದು? ನೀರಾ ಅಲ್ಲ, ಆದರೆ ತೀರಾ ಹೊಸದು. ಗೇರುಹಣ್ಣಿನ ತಾಜಾ ಜ್ಯೂಸು.

ತಯಾರಿ ಹೇಗೆ?

ಜಖಂ ಆದ, ಬಿದ್ದಿರುವ, ರಸ ಸೋರಿರುವ ಹಣ್ಣು ಬೇಡ. ಇವುಗಳಿಂದ ಸೂಕ್ಷ್ಮಾಣುಜೀವಿಗಳ ಸೋಂಕು ತಟ್ಟುವ ಸಾಧ್ಯತೆ ಇದೆ. ಕೈಯಲ್ಲೇ ಕೊಯ್ಯ, ಚೆನ್ನಾಗಿ ಮಾಗಿದ ಆಯ್ದ ಹಣ್ಣುಗಳನ್ನು ಚೆನ್ನಾಗಿ ತೊಳೆಯಬೇಕು. ಹಣ್ಣಿನ ಮೇಲೆ ಮತ್ತು ಕೆಳಗಿನ ಭಾಗಗಳನ್ನು ಕತ್ತರಿಸಿ ಹೊರಗಿಡಬೇಕು. ಮಿಕ್ಸಿ / ಕೈಯಲ್ಲಿ ರಸ ಹಿಂಡಿಕೊಳ್ಳಬಹುದು. ಗೇರುಹಣ್ಣಿನಲ್ಲಿರುವ ಟ್ಯಾನಿನಿನಿಂದ ಗಂಟಲು ಕೆರೆಯುವ ಗುಣ (ಒಗರು) ಬರುತ್ತದೆ. ಅದನ್ನು ಹೋಗಲಾಡಿಸದೆ ಶರಬತ್ತು ಮಾಡಿದರೆ ಕುಡಿಯಲು ಕಷ್ಟವೇ. ಒಗರನ್ನು ಸುಲಭವಾಗಿ ಇಲ್ಲದಾಗಿಸಬಹುದು. ಸಾಗು / ಸಾಬಕ್ಕಿ / ಸಾಬುದಾನವನ್ನು ನುಣ್ಣನೆಯ ಹುಡಿ ಮಾಡಿ ಸ್ವಲ್ಪ ನೀರು ಸೇರಿಸಿ ಕುದಿಸಿ ಪೇಸ್ಟ್ ಮಾಡಬೇಕು. ಪಾಕ ಸ್ವಲ್ಪ ನೀರಾಗಿರಲಿ. ಅದನ್ನು ತಣಿಸಿ ಇಟ್ಟುಕೊಳ್ಳಿ.



ಗೇರುಹಣ್ಣಿನ
ಶರಬತ್ತು
ಚಿತ್ರ: ದೇಹಳ್ಳಿ
ನಾಗರಾಜ್

UASB LIBRARY



ಪುತ್ತೂರಿನ ಗೇರು ಸಂಶೋಧನಾ ನಿರ್ದೇಶನಾಲಯದಲ್ಲಿ ತರಬೇತಿ ಕೊಡುತ್ತಿರುವ ಜ್ಯೋತಿ ನಿಶಾದ್.

ಒಂದು ಲೀಟರ್ ರಸಕ್ಕೆ ಐದು ಗ್ರಾಮ್ ಸಾಗು ಪೇಸ್ಟ್ ಸಾಕು. ಹಿಂಡಿದ ರಸವನ್ನು ಸೋಸಿ ಸೋಸಿಟ್ಟ ಸಾಗು ಪೇಸ್ಟ್ ಸೇರ್ಸಿ ಚೆನ್ನಾಗಿ ಕದಡಿ. ನಂತರ ಸೆಟ್ಸ್ ಆಗಲು ಬಿಡಿ. ಇಪ್ಪತ್ತು ನಿಮಿಷದಿಂದ ಅರ್ಧ ಗಂಟೆಯಲ್ಲಿ ಟ್ಯಾನಿನ್ ಪದರ ತಳದಲ್ಲಿ ತಂಗುತ್ತದೆ. **ತಳದ ಪದರ ಬಾರದಂತೆ ಮೇಲಿನ ಜ್ಯೂಸನ್ನು ಬೇರೆ ಪಾತ್ರೆಗೆ ವರ್ಗಾಯಿಸಿ. ತಂಪಾಗಿಸಿ ಕುಡಿಯಿರಿ.** ಇದುವೇ ಝೀರೊ ಎಡಿಟಿವ್ ತಾಜಾ ಗೇರುಹಣ್ಣಿನ ಶರಬತ್ತು. ಅವರವರಿಗೆ ಬೇಕಾದರೆ ಸ್ವಲ್ಪ ಸಕ್ಕರೆ, ಲಿಂಬೆ ರಸ ಅಥವಾ ಬೇರೆ ಒಳಸುರಿ ಸೇರಿಸಬಹುದು. ಫ್ರಿಜ್‌ನಲ್ಲಿಟ್ಟು ಎರಡು ದಿನ ಬಳಸಬಹುದು.

ಚಿತ್ರದುರ್ಗದ ಎನ್. ತಿಪ್ಪೇಸ್ವಾಮಿ, ಸಾವಯವ ಕೃಷಿಕರು. ಮೂರು ಎಕರೆ ಗೇರು ತೋಟ. ಪುತ್ತೂರಿನ ಗೇರು ಸಂಶೋಧನಾ ನಿರ್ದೇಶನಾಲಯದ (ಗೇಸಂನಿ) ಸಂಪರ್ಕ. ಅಲ್ಲಿಂದ ಶರಬತ್ತು ಮಾಡಿ ಮಾರಲು ಪ್ರೇರಣೆ ಸಿಕ್ಕಿತು. ಚಿತ್ರದುರ್ಗ ನಗರದಲ್ಲಿ ಐದಾರು ಬಾರಿ ಶರಬತ್ತಿನ ಸ್ಯಾಂಪ್ಲಿಂಗ್, ಪ್ರಾಯೋಗಿಕ ಮಾರಾಟ ಮಾಡಿದರು. ಅರ್ಧ ಲೀಟರಿನ ಜ್ಯೂಸಿಗೆ 50ರೂ. ಬೆಲೆ ನಿಗದಿ ಮಾಡಿದ್ದರು. 10 ಸಾವಿರ ಬೆಲೆಯ ಜ್ಯೂಸರ್ ಯಂತ್ರ ತರಿಸಿ ಸುರು ಮಾಡಿದರು. ದಿನಕ್ಕೆ 15 ಲೀಟರ್ ಮಾರಿದ್ದಿದೆ.



ಗುತ್ತಿಗಾರಿನ ಲತಾ ಅಜಡ್ಕ ಅವರು, ಕಾಸರಗೋಡಿನ ಬೆರಿಯದ ಗೇರುಹಣ್ಣಿನ ಜ್ಯೂಸಿನ ಮಳಿಗೆಗೆ ಅಧ್ಯಯನಕ್ಕೆ ಹೋದರು. ಧೈರ್ಯ ಬಂತು. ಗುತ್ತಿಗಾರಿನ ಸಂತೆಯ ದಿನ ಶರಬತ್ತು ಮಾಡಿ ಹಂಚಿದರು. 'ಹೆಚ್ಚಿನವರಿಗೆ ಗೇರು ಹಣ್ಣಿನ ಜ್ಯೂಸ್ ಬಗ್ಗೆಯೇ ಗೊತ್ತಿಲ್ಲ. ಅವರಲ್ಲಿರುವ ತಪ್ಪಭಿಪ್ರಾಯ ಹೋಗಲಾಡಿಸಬೇಕು' ಎನ್ನುತ್ತಾ ಯಂತ್ರ ತರಿಸಿದ್ದಾರೆ. 'ಶರಬತ್ತು ಅಂಗಡಿ ತೆರೆಯಲು ಸಿದ್ಧರಾಗುತ್ತಿದ್ದಾರೆ.

ಸಕ್ಕರೆ, ನೀರು ಅಥವಾ ಬೇರೇನೂ ಒಳಸುರಿ ಸೇರಿಸದ ಝೀರೊ ಅಡಿಟಿವ್ ಕ್ಯಾಶ್ಯೂ ಆ್ಯಪಲ್ ಶರಬತ್ತಿನ ರುಚಿ ಬಹುತೇಕರಿಗೆ ಗೊತ್ತಿಲ್ಲ. ಕೇರಳದ ಪ್ಲಾಂಟೇಶನ್ ಕಾರ್ಪೊರೇಶನ್ (ಪಿಸಿಕೆ) ಕಳೆದೊಂದು ದಶಕದಿಂದ ಈ ಶರಬತ್ತನ್ನು ಮಾರಿ ಉತ್ತಮ ಲಾಭ ಗಳಿಸುತ್ತಿದೆ. 'ಮಳೆ ತೊಂದರೆ ಕೊಡದಿದ್ದರೆ ಈ ಸೀಸನ್ನಿನಲ್ಲಿ ನಮ್ಮ ಬೆರಿಯ ಕೇಂದ್ರದಲ್ಲಿ ಶರಬತ್ತಿನಿಂದಲೇ ಎರಡು ಲಕ್ಷ ರೂ. ಆದಾಯ ನಿರೀಕ್ಷಿಸುತ್ತಿದ್ದೇವೆ' ಎನ್ನುತ್ತಾರೆ ಗ್ರೂಪ್ ಮ್ಯಾನೇಜರ್ ಸಜೀವನ್ ಉಚ್ಚಕ್ಕಾವಿಲ್.

'ಸರಕಾರಿ ಸಂಸ್ಥೆಯಾಗಿ ನಮಗೆ ಇತಿಮಿತಿಗಳಿವೆ. ನಾವು ಜನನಿಬಿಡ ಪ್ರದೇಶದಲ್ಲಿಲ್ಲ. ಪ್ರಚಾರ ಕೊಡುತ್ತಿಲ್ಲ. ಇದೊಂದು ಉಪ ಕಸುಬು. ಖಾಸಗಿಯವರು ಕೈಹಾಕಿದರೆ ಗೇರುಬೀಜದ ಆದಾಯದ ಐದು ಪಟ್ಟಿನವರೆಗೂ ಹಣ್ಣಿನ ಶರಬತ್ತಿನಿಂದ ಸಂಪಾದಿಸಬಹುದು' ಎನ್ನುತ್ತಾರೆ ಅವರು.

ಭಾರತದ ಒಟ್ಟು ಗೇರುಹಣ್ಣು ಉತ್ಪಾದನೆ 60 ಲಕ್ಷ ಟನ್. ಕರ್ನಾಟಕದ್ದು 4 ಲಕ್ಷ ಟನ್. ಹಿಂಡಿದಾಗ ಹಣ್ಣಿನ ತೂಕದ 50ರಿಂದ 60 ಶೇಕಡಾ ರಸ ಸಿಗುತ್ತದೆ. ಇದು ನಿಜಕ್ಕೂ ಒಂದು ಎನರ್ಜಿ ಡ್ರಿಂಕು. ಶ್ವಾಸಸಂಬಂಧ ಸಮಸ್ಯೆಗೆ ಮತ್ತು ಆಹಾರ ಜೀರ್ಣವಾಗಲು ಸಹಕಾರಿ. ಅದರಲ್ಲಿ ಕತ್ತಳೆಯ ಐದಾರು ಪಟ್ಟು ವಿಟಮಿನ್ ಸಿ ಇದೆ. ಅಂಟಿ ಆಕ್ಸಿಡೆಂಟ್ಸ್, ಕಬ್ಬಿಣ, ಕ್ಯಾಲ್ಸಿಯಂ, ಪೊಟ್ಯಾಸಿಯಂ ಹಾಗೂ ನಾರು ಹೇಬ್ಬಾಗಿದೆ.

ದೇಶದಲ್ಲೇ ಮೊದಲು ಸರಳ ರೀತಿಯಿಂದ ಗೇರುಹಣ್ಣಿನ ತಾಜಾ ಶರಬತ್ತು ಮಾಡಿ ಮಾರುತ್ತಿರುವ ಚಿತ್ರದುರ್ಗದ ಎನ್. ತಿಪ್ಪೇಸ್ವಾಮಿ

ಅದು ರೋಗನಿರೋಧಕ ಶಕ್ತಿ ಹೆಚ್ಚಿಸಿ, ಜೀರ್ಣಕ್ರಿಯೆ ಸುಧಾರಿಸಿ, ಚರ್ಮ ಮತ್ತು ಹೃದಯದ ಆರೋಗ್ಯ ಕಾಪಾಡುತ್ತದೆ. ಸ್ವಾಭಾವಿಕ ಸಕ್ಕರೆಯಿಂದ ತಕ್ಷಣ ಶಕ್ತಿ ನೀಡುವ ಜೊತೆಗೆ ದೇಹವನ್ನು ತಂಪಾಗಿಡುತ್ತದೆ. ಕಡಿಮೆ ಕೊಬ್ಬಿನಿಂದಾಗಿ ತೂಕ ನಿಯಂತ್ರಣಕ್ಕೂ ಸಹಕಾರಿ. ತ್ರಿಶೂರಿನ ಕೇರಳ ಕೃಷಿ ವಿಶ್ವವಿದ್ಯಾಲಯದ ಕ್ಯಾಂಪಸ್ಸಿನಲ್ಲಿ ಗೇರು ಸಂಶೋಧನಾ ಕೇಂದ್ರವಿದೆ. ಪುತ್ತೂರಿನಲ್ಲಿರುವ ಗೇಸಂನಿ ಹತ್ತಕ್ಕೂ ಹೆಚ್ಚು ಉತ್ಪನ್ನ ಅಭಿವೃದ್ಧಿಪಡಿಸಿದೆ. ಇವುಗಳಲ್ಲಿ ಮುಖ್ಯವಾದವು ಬಗೆಬಗೆಯ ಪಾನೀಯಗಳು. ಉಳಿದಂತೆ ಎನರ್ಜಿ ಬಾರ್, ಕ್ಯಾಶ್ಯೂಪ್ರಾಶ್, ದ್ರವ ಬೆಲ್ಲ, ಉಪ್ಪಿನಕಾಯಿ.

ದಶಕಗಳಿಂದ ನೆನೆಗುದಿಗೆ ಬಿದ್ದ ಗೇರುಹಣ್ಣಿನ ಮೌಲ್ಯವರ್ಧನೆಗೆ ಚಾಲನೆ ಕೊಡಲು 'ಕ್ಯಾಶ್ಯೂ ಆ್ಯಪಲ್ ಟು ಮಾರ್ಕೆಟ್' ಎಂಬ ಪಾಟ್ಸ್‌ಆ್ಯಪ್ ಗುಂಪು ಆರಂಭವಾಗಿದೆ. ತಿಪ್ಪೇಸ್ವಾಮಿ, ಲತಾ ಅಜಡ್ಕರಂತಹ ಸ್ಟಾರ್ಟ್‌ಅಪ್‌ಗಳು ರೂಪುಗೊಳ್ಳಲು ಇದೇ ಕಾರಣ. ಕರ್ನಾಟಕದ ಮನೆಮನೆಗಳಲ್ಲಿ ಗೇರುಹಣ್ಣು ಶರಬತ್ತು ತಯಾರು ಮಾಡಲೂ ಪ್ರೇರಣೆ ಅಲ್ಲಿಂದಲೇ. ಗೇರುಹಣ್ಣು ಝೀರೊ ಅಡಿಟಿವ್ ಶರಬತ್ತು ಬಹುಜನರಿಗೆ ಹಿಡಿಸಿದೆ. ರುಚಿ ನೋಡಿದ ಕುಟುಂಬಗಳು ಇದಕ್ಕೆ ಹತ್ತಿರಲ್ಲಿ ಏಳಕ್ಕಿಂತ ಕಡಿಮೆ ಅಂಕ ಕೊಟ್ಟಿಲ್ಲ. ಗೇರುಹಣ್ಣು ವರ್ಷದಲ್ಲಿ ಎರಡು ಮೂರು ತಿಂಗಳು ಮಾತ್ರ ಸಿಗುತ್ತದೆ. ಉಳಿದ ಸಮಯದಲ್ಲಿ ಶರಬತ್ತು ಉತ್ಪಾದನೆ ಹೇಗೆ ಎನ್ನುವ ಪ್ರಶ್ನೆ ಮೂಡುವುದು ಸಹಜ.

'ಪಲ್ಪ್ ತಯಾರಿಸಿ ಫ್ರಿಜ್‌ನಲ್ಲಿ ಇಟ್ಟುಕೊಳ್ಳಿ' ಎನ್ನುತ್ತಾರೆ ಗೇಸಂನಿಯ ಆಹಾರ ತಂತ್ರಜ್ಞೆ ಜ್ಯೋತಿ ನಿಶಾದ್. 'ಮಿಕ್ಸಿ, ಝಿಪ್‌ಲಾಕ್ ಕವರ್ ಮತ್ತು ಫ್ರಿಜ್ ಇದ್ದರೆ ಸಾಕು. ಆಯ್ದ ಹಣ್ಣನ್ನು ಮಿಕ್ಸಿಯಲ್ಲಿ ದೊರಗಾಗಿ ರುಬ್ಬಿಕೊಳ್ಳಬೇಕು. ನಂತರ ಕವರಿಗೆ ಹಾಕಿ ಸೀಲ್ ಮಾಡಿ ಇಡಿ' ಎನ್ನುತ್ತಾರೆ ನವ್ಯಶ್ರೀ ಕುರುವೇರಿ. ಬೇಕೆಂದಾಗ ಈ ಪಲ್ಪಿನಿಂದ ಗೇರುಹಣ್ಣು ಶರಬತ್ತು ಮಾಡಬಹುದು.

ಗೇರುಹಣ್ಣಿನಲ್ಲಿ ಅಮಲಿದೆಯೇನೋ, ನಿಜಕ್ಕೂ ಕುಡಿಯುವಮ್ಮ ಹಿತವಾಗಿದೆಯೇ ಎಂಬೆಲ್ಲಾ ಅನುಮಾನಗಳು ಬಹುಜನರಲ್ಲಿದೆ. ಕಾರಣ, ಈವರೆಗೆ ಒಗರು ತೆಗೆದು ಗೇರುಹಣ್ಣು ಶರಬತ್ತು ಕುಡಿದವರು ಕಮ್ಮಿ. ಗೇರುಹಣ್ಣಿನಿಂದ ಹತ್ತಾರು ವಾಣಿಜ್ಯ ಉತ್ಪನ್ನಗಳನ್ನು ಮಾಡಬಹುದು. ಆದರೆ ಸದ್ಯದ ಪ್ರತಿಕೂಲ ಸ್ಥಿತಿಯಲ್ಲಿ ಜನ ವ್ಯಾಪಕವಾಗಿ ಈ ಹಣ್ಣಿನ ರುಚಿ ನೋಡುವಂತೆ ಪ್ರೇರೇಪಿಸುವುದು ಆದ್ಯತೆಯ ಮೇಲೆ ಆಗಬೇಕಿದೆ. ■

UASB LIBRARY



ನಿಮ್ಮ ಪುಟ

ಬುಡದಲ್ಲೇ ಜೋತುಬಿದ್ದ ಹಲಸು

ನಿಸರ್ಗದ ವಿಸ್ಮಯ ವಿಶಿಷ್ಟತೆಗೆ ನನ್ನ ಮನ ಒಂದು ಕ್ಷಣ ನಿಬ್ಬೆರಗಾಯಿತು. ಹೀಗೆ ಕುತೂಹಲದಿಂದ ನನ್ನ ಗಮನಸೆಳೆದಿದ್ದು, ಚಿತ್ರದಲ್ಲಿರುವ ಹಲಸಿನ ಮರದ ಹಲಸಿನ ಗೊಂಚಲು. ಅರಮನೆ ನಗರಿ ಮೈಸೂರಿನಲ್ಲಿ ಇರುವ, ರಾಷ್ಟ್ರಕವಿ ಕುವೆಂಪುರವರ 'ಉದಯ ರವಿ' ಮನೆಯ ಮುಂಭಾಗದ ಅವರಣದಲ್ಲಿ ಬೆಳೆದಿರುವ ಹಲಸಿನ ಮರದಲ್ಲಿನ ಕಾಯಿಗಳಿವು. ಮರದ ಬುಡದಲ್ಲೇ ಜೋತು ಬಿಟ್ಟಿರುವ ಕಾಯಿಗಳನ್ನು ನೋಡಿ ಹಳೆಯ ಹಾಡು, 'ಧರಣಿಗೆ ಗಿರಿ ಭಾರವೇ, ಗಿರಿಗೆ ಮರವೂ ಭಾರವೇ, ಬಳ್ಳಿಗೆ ಕಾಯಿ ಭಾರವೇ., ಹೆತ್ತ ತಾಯಿಗೆ ಮಗು ಭಾರವೇ' ಎಂಬ ಸಾಲುಗಳು ನೆನಪಾದವು. ಮರದ ಕೊಂಬೆಗಳ ತಳಭಾಗದಲ್ಲಿ ಗುಂಪು ಗುಂಪಾಗಿ ಹಲಸಿನಕಾಯಿಗಳು ಬಿಡುವುದು ಸಹಜ. ಆದರೆ ಈ ಹಲಸಿನ ಕಾಯಿಗಳು ಬುಡದಲ್ಲೇ ಬಿಟ್ಟಿರುವುದು ಹಾಗೂ ನೆಲವನ್ನು ಸಂಪೂರ್ಣವಾಗಿ ಆಶ್ರಯಿಸಿರುವುದು ಮರಕ್ಕೆ ಭಾರವೆಂದು ಅಲ್ಲವೇ ಅಲ್ಲ. ಹಲಸಿನ ಮರದ ತಳಿಯ ಗುಣ ಧರ್ಮವೊ? ಅಥವ ಪ್ರಕೃತಿಯ ಸೃಷ್ಟಿಯೊ? ಗೊತ್ತಿಲ್ಲ. ನನಗೆ ಆಶ್ಚರ್ಯ ಅನಿಸಿದ್ದಂತೂ ನಿಜ.

–ನಿಸರ್ಗ ಧರಣೇಶ್ವರ





ಕೈಬೀಡಿ ಕಟ್ಟಲು ಎಲೆ ಬಳಕೆ

ಕೈಬೀಡಿ ಸೇದುವವರು ಈಗ ಮೊದಲಿನಷ್ಟಿಲ್ಲ. ಸಹಜವಾಗಿ ಬೀಡಿ ಬಳಕೆ ಕಡಿಮೆಯಾದಂತೆ ಕೈಬೀಡಿ ಸಿದ್ಧಪಡಿಸುವ ಕೈಗಳೂ ಕೆಲಸವಿಲ್ಲದೆ ಖಾಲಿತನ ಅನುಭವಿಸುತ್ತಿವೆ. ಬೀಡಿ ಕಟ್ಟುವ ಜನರು ಖಾಲಿ ಕುಳಿತುಕೊಳ್ಳುವ ಸಂದರ್ಭ ಬಂದಿದೆ. ಒಂದು ಕಾಲದಲ್ಲಿ ಕೈಬೀಡಿ ತಯಾರಿಸುವುದರಲ್ಲಿ 'ಸಾವಿರಾರು ಕೈಗಳು ತೊಡಗಿಕೊಂಡು, ಅದರಿಂದಲೇ ಹಲವಾರು ಬಡ ಕುಟುಂಬಗಳು ಜೀವನ ನಡೆಸುತ್ತಿದ್ದುದನ್ನು ಮರೆಯುವಂತಿಲ್ಲ. ಕೈಬೀಡಿ ತಯಾರಿಕೆಯಲ್ಲಿ ಹೆಚ್ಚಾಗಿ ಬಳಸುತ್ತಿದ್ದ ಒಂದು ಜಾತಿಯ ಗಿಡದ ಎಲೆಗಳು ಈಗ ಯಾರೂ ಕೊಯ್ಯುವವರಿಲ್ಲದೇ ಮಲೆನಾಡಿನ ಬೆಟ್ಟ ಬೇಣದಲ್ಲಿ ನೆಲಕ್ಕುರುಳಿ ಕಳೆಯುತ್ತಿವೆ. ಮರಗಳೂ ಇನ್ನಷ್ಟು ಬೆಳೆ ನಿಂತಿವೆ. ಸಪೋಟಾ ಹಣ್ಣಿನ ರುಚಿಯನ್ನೇ ಹೋಲುವ ಕಾಡು ಹಣ್ಣು 'ತುಮರಿ'ಯನ್ನು ಈಗಿನ ಬಹುತೇಕ ಮಕ್ಕಳು ತಿಂದಿರಲಿಕ್ಕಿಲ್ಲ. ಪಶ್ಚಿಮ ಘಟ್ಟಗಳು, ಮಲೆನಾಡಿನ ಕಾಡು, ಬೆಟ್ಟಗಳಲ್ಲಿ ಈ ಜಾತಿಯ ಮರಗಳನ್ನು ಕಾಣಬಹುದು. ಇಲ್ಲಿನ ಬೇರೆ ಬೇರೆ ಪ್ರದೇಶಗಳಲ್ಲಿ ಈ ಮರದ ಜಾತಿಗೆ ತುಂಬರಿ ಹಣ್ಣಿನ ಮರ, ಬೀಡಿ ಮರ ಇತ್ಯಾದಿ ಹೆಸರುಗಳಿಂದ ಕರೆಯಲಾಗುತ್ತದೆ. ಇದರ ಎಲೆಯನ್ನು ಸಾಂಪ್ರದಾಯಿಕವಾಗಿ ತಂಬಾಕಿನ ಬೀಡಿಗಳನ್ನು ಕಟ್ಟಲು ಬಳಸುವುದರಿಂದ 'ಬೀಡಿ ಎಲೆ' ಮರ ಎಂದೂ ಕರೆಯುತ್ತಾರೆ. ಇವು ಚಿಕ್ಕ ಗಾತ್ರದ ಕಾಯಿಗಳು ಬಿಟ್ಟು, ಅವು ಹಣ್ಣಾದಾಗ ಒಳಗಿನ ಬೀಜದ ಮೇಲಿರುವ ಸಿಹಿ ತಿರುಳು ತಿನ್ನಲು ಬಲು ರುಚಿಕರ. ಹಾರ್ನ್‌ಬಿಲ್ ಹಕ್ಕಿಗಳು ಈ ಹಣ್ಣುಗಳನ್ನು ತಮ್ಮ ಮರಿಗಳಿಗೆ ಆಹಾರವಾಗಿ ಒದಗಿಸುತ್ತವೆ. ಹಣ್ಣುಗಳಲ್ಲಿನ ಬೀಜಗಳು ಕಾಡಿನ ಎಲ್ಲ ಕಡೆ ಪಸರಿಸಲು ಪಕ್ಷಿಗಳು ಕಾರಣವಾಗಿವೆ. ಈ ಗಿಡದ ಎಲೆಗಳನ್ನು ಕೈಬೀಡಿ ಕಟ್ಟಲು ಬಳಸಲಾಗುತ್ತಿತ್ತು. ಇದಕ್ಕಾಗಿಯೇ ಬೀಡಿ ಎಲೆ ಹೆಸರು ಬಂದಿದೆ.

–ಜೆ.ಎಂ. ಬೊಮ್ಮಳ್ಳಿ

ಬಿಸಿ-ಮಸಿ ತಡೆಯುವ 'ಸಿಂಬಿ'

ಚಿತ್ರದಲ್ಲಿ ಕಾಣಿಸುತ್ತಿರುವುದು ಹೊರೆ ಬಳ್ಳಿ ಮತ್ತು ಕತ್ತದ ಹುರಿ ನೇರಿಸಿ ಕೌಶಲದಿಂದ ಹೆಣೆದ ಸಿಂಬಿ. ಇದು ನಮ್ಮಮ್ಮನ ಕಾಲಮಾನದ ವೃತ್ತಾಕಾರದ ಸಿಂಬಿಯೂ ಹೌದು. ಹಿಂದೆ ಸೌದೆ ಒಲೆ ಬಳಕೆಯಲ್ಲಿತ್ತು. ಒಣಗಿದ ಕಟ್ಟಿಗೆ, ಅಡಿಕೆ ಹಾಳೆ, ಒಣಗಿದ ತೆಂಗಿನ ಗರಿ, ತೆಂಗಿನ ಚಿಪ್ಪು, ಸಿಪ್ಪೆ ಮುಂತಾದವುಗಳನ್ನು ಉರುವಲಾಗಿ ಬಳಸಲಾಗುತ್ತಿತ್ತು. ಹೀಗೆ ಬೆಂಕಿಯ ಒಲೆಯಲ್ಲಿ ತಿಂಡಿ, ತಿನಿಸು, ಆಹಾರ ಪದಾರ್ಥಗಳನ್ನು ಬೇಯಿಸಲು ಬಳಸುತ್ತಿದ್ದ ಗಡಿಗೆಗಳು, ಲೋಹದ ಪಾತ್ರೆಗಳ ತಳದಲ್ಲಿ ಮಸಿಯಾಗುತ್ತಿತ್ತು. ಮಸಿ–ಬಿಸಿ ನೆಲಕ್ಕೆ ತಾಗದಂತೆ ಪಾತ್ರೆಗಳನ್ನಿಡಲು ಅಡಿ ಸಾಧನವಾಗಿ ಸಿಂಬಿಗಳನ್ನು ಬಳಸಲಾಗುತ್ತಿತ್ತು. ಸಿಂಬಿಗಳಿಗೆ ಅಂಟಿದ ಮಸಿಯನ್ನು ತೊಳೆದು ಮತ್ತೆ ಬಳಸಲಾಗುತ್ತಿತ್ತು. ಸಿಂಬಿ ತಯಾರಿಸಲು ಹುಲ್ಲು, ಹುರಿ ಹಗ್ಗ ಹಾಗೂ ಸೊಪ್ಪು, ಸೌದೆ ಮುಂತಾದವುಗಳನ್ನು ಕಟ್ಟಲು ಕಾಡಿನಲ್ಲಿ ದೊರಕುತ್ತಿದ್ದ ಒಂದು ಜಾತಿಯ ಕಪ್ಪು ಬಳ್ಳಿಗಳನ್ನು ಬಳಸಲಾಗುತ್ತಿತ್ತು. ಹೊರೆ ಕಟ್ಟಲು ಬಳಸುತ್ತಿದ್ದ ಬಳ್ಳಿಗೆ ಹೊರೆ ಬಳ್ಳಿ ಎಂದೇ ಅನ್ವರ್ಥ ನಾಮ. ಇದೀಗ ಮರ, ಸ್ಟೀಲ್, ಪ್ಲಾಸ್ಟಿಕ್‌ನ ಪರಿಕರಗಳು ಸಿಂಬಿಯ ಸ್ಥಾನವನ್ನು ಆಕ್ರಮಿಸಿಕೊಂಡಿವೆ. ಬಳ್ಳಿ ಸಿಂಬಿಗಳು ಈಗ ನೆನಪು ಮಾತ್ರ.

–ಎಸ್.ಎನ್. ಚಂದ್ರಕಲಾ, ಕೊಪ್ಪ



UASB LIBRARY



ತೂಗಾಡುವ ಪಪ್ಪಾಯಿ...

ಚಿತ್ರದಲ್ಲಿ ಕಾಣುತ್ತಿರುವ ಪಪ್ಪಾಯಿ ಮರದ ಬೆಳವಣಿಗೆ ಸಾಮಾನ್ಯವಾಗಿ ಕಾಣುವ ರೀತಿಗಿಂತ ವಿಭಿನ್ನವಾಗಿದೆ. ಪಪ್ಪಾಯಿ ಹಣ್ಣುಗಳು ಮರದ ಮೇಲ್ಭಾಗದಲ್ಲಿ ಗುಂಪಾಗಿ ಬೆಳೆಯುತ್ತವೆ. ಆದರೆ ಚಿತ್ರದಲ್ಲಿ ಕಾಣುತ್ತಿರುವುದೇ ಭಿನ್ನವಾಗಿದ್ದು, ಇಲ್ಲಿ ಹಣ್ಣುಗಳು ಮರದ ತೊಡೆಯಿಂದಲೇ ಉದ್ದವಾದ ಬಳ್ಳಿ ರೂಪದ ಕಂಬಗಳಂತೆ ಕೆಳಗೆ ತೂಗಿ ಬೆಳೆಯುತ್ತಿರುವೆ. ಈ ಅಪರೂಪದ ದೃಶ್ಯಗಳು ಪ್ರಕೃತಿಯ ಅಚ್ಚರಿಯ ಕಲೆಯನ್ನು ನಮಗೆ ನೆನಪಿಸುತ್ತವೆ. ಬೆಂಗಳೂರಿನ ಬನ್ನೇರುಘಟ್ಟ ರಸ್ತೆಯ 'ನೋಬೊನಗರ ಸೈಟ್ ಓನರ್ಸ್ ಅಂಡ್ ರೆಸಿಡೆಂಟ್ಸ್ ಅಸೋಸಿಯೇಷನ್' ಕಚೇರಿಯ ಆವರಣದಲ್ಲಿ ಈ ಪಪ್ಪಾಯಿ ಗಿಡ ಬೆಳೆದುನಿಂತಿದೆ. ಈ ಅಪರೂಪದ ಪಪ್ಪಾಯಿ ಗಿಡವು, 'ಪ್ರಕೃತಿ ಯಾವಾಗಲೂ ಒಂದೇ ರೀತಿಯಲ್ಲಿ ಇರೋದಿಲ್ಲ' ಎಂಬುದಕ್ಕೆ ಸುಂದರ ಉದಾಹರಣೆ.

–ಸಿ.ಎಸ್. ಸೂರ್ಯ ಪ್ರಕಾಶ್, ಬೆಂಗಳೂರು

ಸಸಿ ನೆಟ್ಟು ಮಗಳ ಜನ್ಮದಿನ ಆಚರಣೆ

ಬೆಳಗಾವಿಯ ಮೂಡಲಗಿಯ ಈರಪ್ಪ ಢವಳೇಶ್ವರ ಎಂಬುವರು ತಮ್ಮ ಮಗಳಾದ ಸಾಧ್ವಿಯ ಜನ್ಮದಿನದ ಅಂಗವಾಗಿ ಪ್ರತಿ ವರ್ಷ ಸಾರ್ವಜನಿಕ ಸ್ಥಳಗಳಲ್ಲಿ ಸಸಿಗಳನ್ನು ನೆಟ್ಟು ಬೆಳಸುತ್ತಿರುವುದು ಆದರ್ಶನೀಯ. ಸರ್ಕಾರಿ ಶಾಲೆ, ಆಸ್ಪತ್ರೆ, ವಸತಿ ನಿಲಯ, ಅಂಗನವಾಡಿ ಕೇಂದ್ರ, ನ್ಯಾಯಾಲಯ, ರುದ್ರಭೂಮಿ, ರಸ್ತೆ ಬದಿಯಲ್ಲಿ ಹೀಗೆ ಪ್ರತಿ ವರ್ಷವೂ 150ರಿಂದ 200 ಸಸಿಗಳನ್ನು ನೆಟ್ಟು ಅವುಗಳಿಗೆ ನೀರುಣಿಸಿ ಬೆಳೆಸುವ ಜವಾಬ್ದಾರಿಯನ್ನು ಅವರೇ ಮಾಡುತ್ತಿದ್ದಾರೆ.

2018ರಲ್ಲಿ ಮೂಡಲಗಿಯ ಸ್ಮಶಾನದಲ್ಲಿ ಪುರಸಭೆಯವರ ಸಹಕಾರದೊಂದಿಗೆ 200 ಸಸಿಗಳನ್ನು ನೆಟ್ಟು, ನಿತ್ಯ ನೀರುಣಿಸಿ ಬೆಳೆಸಿದ್ದಾರೆ. ಸದ್ಯ ಅವು ಬೆಳೆದು ನಿಂತಿದ್ದು, ಸ್ಮಶಾನಕ್ಕೆ ಕಟ್ಟಿದ ಹಚ್ಚ ಹಸುರಿನ ತೋರಣದಂತೆ ಅವು ಕಾಣುತ್ತಿವೆ. ಈರಪ್ಪ ಇತ್ತೀಚೆಗೆ ಮಗಳ 10ನೇ ಹುಟ್ಟುಹಬ್ಬದ ಸಲುವಾಗಿ ಇಲ್ಲಿಯ ಸಾಯಿ ಮಂದಿರ ರಸ್ತೆಯ ಎರಡೂ ಬದಿಯಲ್ಲಿ ಇನ್ನೂರಕ್ಕೂ ಅಧಿಕ ಸಸಿಗಳನ್ನು ನೆಟ್ಟಿದ್ದಾರೆ. 'ಹೆಣ್ಣು ಹುಟ್ಟಿದರೆ ಯಾಕಾದರೂ ಹೆಣ್ಣು ಮಗು ಹುಟ್ಟಿತು' ಎನ್ನುವ ಬೇಸರ ವ್ಯಕ್ತಪಡಿಸುವವರ ನಡುವೆ ಈರಪ್ಪ ಹೆಣ್ಣು ಹುಟ್ಟಿದ್ದಕ್ಕೆ ಸಸಿಗಳನ್ನು ನೆಟ್ಟು ಪರಿಸರಕ್ಕೆ ಕೊಡುಗೆ ನೀಡುತ್ತಿರುವುದು ಶ್ಲಾಘನೀಯ. ಈವರೆಗೆ 4 ಸಾವಿರಕ್ಕೂ ಅಧಿಕ ಸಸಿಗಳನ್ನು ನೆಟ್ಟಿದ್ದಾರೆ. 'ಮಗಳು ಸಾಧ್ವಿಯೊಂದಿಗೆ ಗಿಡಗಳು ಬೆಳೆಯುತ್ತಿರುವುದನ್ನು ಕಾಣುವುದೇ ನನ್ನ ಸಂತೋಷ' ಎನ್ನುತ್ತಾರೆ ಈರಪ್ಪ ಢವಳೇಶ್ವರ.

–ಬಾಲಶೇಖರ ಬಂದಿ, ಮೂಡಲಗಿ





JASS LIBRARY



ಹೊಟ್ಟೆ ತಂಪಾಗಿಸುವ ತಂಬುಳಿ

ಉಷ್ಣ ಹವಾಮಾನಕ್ಕೆ ತಕ್ಕಂತೆ, ಬಿರು ಬೇಸಿಗೆಗೆ ಔಷಧಿಯುಕ್ತ ಚಿಗುರುಗಳು ಹಾಗೂ ಮಜ್ಜಿಗೆಯಿಂದ ತಯಾರಿಸಿದ ತಂಬುಳಿಗಳು ಊಟದಲ್ಲಿ ನಿತ್ಯ ಇದ್ದಲ್ಲಿ ಶರೀರ ಸ್ವಸ್ಥವಿರುತ್ತದೆ. ಆರೋಗ್ಯಕರ, ರುಚಿಕರ ತಂಬುಳಿ ರೆಸಿಪಿ ಇಲ್ಲಿದೆ.

■ ಲತಾ ಹೆಗಡೆ



UASB LIBRARY

ನೆಲನೆಲ್ಲಿ ತಂಬುಳಿ

ಏನೇನು ಬೇಕು?

- ನೆಲನೆಲ್ಲಿ ಸೊಪ್ಪು ಒಂದು ಹಿಡಿ
- ತೆಂಗಿನತುರಿ ಮುಕ್ಕಾಲು ಕಪ್
- ಜೀರಿಗೆ ಒಂದು ಚಮಚ
- ಕಾಳುಮೆಣಸು ಆರೇಳು
- ಬಿಳಿ ಎಳ್ಳು ಒಂದು ಚಮಚ
- ಮಜ್ಜಿಗೆ ಒಂದೂವರೆ ಕಪ್

ಮಾಡೋದು ಹೇಗೆ?

ಬಾಣಲೆಯಲ್ಲಿ ಒಂದು ಚಮಚ ತುಪ್ಪ ಹಾಕಿ ಕಾದ ಮೇಲೆ ಜೀರಿಗೆ, ಕಾಳುಮೆಣಸು, ಎಳ್ಳು ಹುರಿದು ನೆಲನೆಲ್ಲಿ ಸೊಪ್ಪನ್ನು ಬಾಡಿಸಿ. ಆರಿದಾಗ ತೆಂಗಿನತುರಿ ಸೇರಿಸಿ ನುಣ್ಣಗೆ ರುಬ್ಬಿ. ಇದನ್ನು ಪಾತ್ರೆಗೆ ತೆಗೆದು ಉಪ್ಪು, ಮಜ್ಜಿಗೆ ಬೆರೆಸಿ ತುಪ್ಪದ ಒಗ್ಗರಣೆ ಹಾಕಿ.

ದಾಳಿಂಬೆ ಕುಡಿ ತಂಬುಳಿ

ಏನೇನು ಬೇಕು?

- ದಾಳಿಂಬೆ ಕುಡಿ ಒಂದು ಕಪ್
- ತೆಂಗಿನತುರಿ ಅರ್ಧ ಕಪ್
- ಈರುಳ್ಳಿ ಅರ್ಧ
- ಜೀರಿಗೆ ಒಂದು ಚಮಚ
- ಬಿಳಿ ಎಳ್ಳು ಒಂದು ಚಮಚ
- ಒಣಮೆಣಸಿನಕಾಯಿ ಒಂದು
- ಮಜ್ಜಿಗೆ ಒಂದೂವರೆ ಕಪ್

ಮಾಡೋದು ಹೇಗೆ?

ಬಾಣಲೆಯಲ್ಲಿ ಒಂದು ಚಮಚ ತುಪ್ಪ ಹಾಕಿ ಕಾದ ಮೇಲೆ ಜೀರಿಗೆ, ಒಣಮೆಣಸಿನಕಾಯಿ ಹುರಿದು ನಂತರ ಎಳ್ಳು ಸೇರಿಸಿ. ಸ್ವಲ್ಪ ಹುರಿದಾಗ ದಾಳಿಂಬೆ ಕುಡಿಯನ್ನು ಸೇರಿಸಿ ಹುರಿಯಿರಿ. ಮೆತ್ತಗಾದರೆ ಸಾಕು. ಆರಿದಾಗ ಈರುಳ್ಳಿ, ತೆಂಗಿನತುರಿಯೊಟ್ಟಿಗೆ ನುಣ್ಣಗೆ ರುಬ್ಬಿಕೊಂಡು ಮಜ್ಜಿಗೆ, ಉಪ್ಪು ಬೆರೆಸಿ. ಒಗ್ಗರಣೆ ಸೇರಿಸಿ.



ಪೇರಲಕುಡಿ ತಂಬುಳಿ



ಏನೇನು ಬೇಕು?

- ಪೇರಲ ಚಿಗುರು ಒಂದು ಹಿಡಿ
- ತೆಂಗಿನತುರಿ ಮುಕ್ಕಾಲು ಕಪ್
- ಮಜ್ಜಿಗೆ ಎರಡು ಕಪ್
- ಜೀರಿಗೆ ಒಂದು ಚಮಚ
- ಕಾಳುಮೆಣಸು ಕಾಲು ಚಮಚ
- ತೆಂಗಿನ ಎಣ್ಣೆ ಅಥವಾ ತುಪ್ಪ ಒಂದು ಚಮಚ

ಮಾಡೋದು ಹೇಗೆ?

ಬಾಣಲೆಯಲ್ಲಿ ಒಂದು ಚಮಚ ತೆಂಗಿನೆಣ್ಣೆ ಅಥವಾ ತುಪ್ಪದಲ್ಲಿ ಜೀರಿಗೆ, ಕಾಳುಮೆಣಸನ್ನು ಸ್ವಲ್ಪ ಹುರಿದ ಮೇಲೆ ಪೇರಲ ಚಿಗುರನ್ನು ಸೇರಿಸಿ ಹುರಿಯಿರಿ. ತೆಂಗಿನತುರಿ ಸೇರಿಸಿ ನುಣ್ಣಗೆ ರುಬ್ಬಿದ ನಂತರ ಪಾತ್ರೆಗೆ ತೆಗೆದು ಮಜ್ಜಿಗೆ, ರುಚಿಗೆ ತಕ್ಕಷ್ಟು ಉಪ್ಪು ಬೆರೆಸಿ. ಒಂದು ಚಮಚ ತುಪ್ಪದಲ್ಲಿ ಸಾಸಿವೆ, ಜೀರಿಗೆ, ಒಣಮೆಣಸಿನ ಒಗ್ಗರಣೆ ಮಾಡಿ.

ಚಕ್ರಮುನಿ ಸೊಪ್ಪಿನ ತಂಬುಳಿ

ಮಾಡೋದು ಹೇಗೆ?

ಬಾಣಲೆಯಲ್ಲಿ ಒಂದು ಚಮಚ ತುಪ್ಪದಲ್ಲಿ ಜೀರಿಗೆ, ಹಸಿಮೆಣಸನ್ನು ಹುರಿದುಕೊಳ್ಳಿ. ಬಳಿಕ ಬೆಳ್ಳುಳ್ಳಿ, ಎಳ್ಳು, ಸೊಪ್ಪನ್ನು ಸೇರಿಸಿ ಮೆತ್ತಗಾಗುವಷ್ಟು ಹುರಿಯಿರಿ. ಆರಿದಾಗ ತೆಂಗಿನತುರಿಯೊಟ್ಟಿಗೆ ರುಬ್ಬಿ. ಮಜ್ಜಿಗೆ, ಉಪ್ಪು ಸೇರಿಸಿ ತುಪ್ಪದ ಒಗ್ಗರಣೆ ಕೊಡಿ.

ಏನೇನು ಬೇಕು?

- ಚಕ್ರಮುನಿ ಸೊಪ್ಪು ಒಂದು ಕಪ್
- ಜೀರಿಗೆ ಅರ್ಧ ಚಮಚ
- ಬೆಳ್ಳುಳ್ಳಿ ಎಸಳು ಎರಡು
- ಹಸಿಮೆಣಸಿನಕಾಯಿ ಎರಡು
- ಬಿಳಿ ಎಳ್ಳು ಕಾಲು ಚಮಚ
- ತೆಂಗಿನತುರಿ ಅರ್ಧ ಕಪ್
- ಮಜ್ಜಿಗೆ ಎರಡು ಕಪ್



ವೀಳ್ಯದೆಲೆ ತಂಬುಳಿ

ಏನೇನು ಬೇಕು?

- ಎಳೆಯ ವೀಳ್ಯದೆಲೆ ನಾಲ್ಕೈದು
- ತೆಂಗಿನತುರಿ ಅರ್ಧ ಕಪ್
- ಮಜ್ಜಿಗೆ ಎರಡು ಕಪ್
- ಜೀರಿಗೆ ಅರ್ಧ ಚಮಚ
- ಕಾಳುಮೆಣಸು ಆರು

ಮಾಡೋದು ಹೇಗೆ?

ಬಾಣಲೆಗೆ ಒಂದು ಚಮಚ ತುಪ್ಪ ಹಾಕಿ ಜೀರಿಗೆ, ಮೆಣಸನ್ನು ಹುರಿದುಕೊಳ್ಳಿ. ಆರಿದ ಮೇಲೆ ತೆಂಗಿನತುರಿ, ತೊಟ್ಟು ಸಮೇತ ವೀಳ್ಯದೆಲೆ ಸೇರಿಸಿ ನುಣ್ಣಗೆ ರುಬ್ಬಿ. ಇದಕ್ಕೆ ಮಜ್ಜಿಗೆ, ಉಪ್ಪು ಬೆರೆಸಿ ತುಪ್ಪದ ಒಗ್ಗರಣೆ ಕೊಡಿ.

ಅಮೃತ ಬಳ್ಳಿ ತಂಬುಳಿ



ಮಾಡೋದು ಹೇಗೆ?

ಬಾಣಲೆಯಲ್ಲಿ ಒಂದು ಚಮಚ ತುಪ್ಪದಲ್ಲಿ ಜೀರಿಗೆ, ಮೆಣಸು, ಧನಿಯಾ ಹುರಿದು ಎಲೆಗಳನ್ನು ಸೇರಿಸಿ ಹುರಿಯಿರಿ. ಆರಿದಾಗ ತೆಂಗಿನತುರಿಯೊಡನೆ ರುಬ್ಬಿ. ಪಾತ್ರೆಗೆ ತೆಗೆದು ಮಜ್ಜಿಗೆ, ಎರಡು ಚಿಟಿಕೆ ಉಪ್ಪು, ಬೆಲ್ಲದ ಪುಡಿ ಬೆರೆಸಿ ಸೋಸಿ ಕುಡಿಯಬಹುದು.

ಏನೇನು ಬೇಕು?

- ಅಮೃತಬಳ್ಳಿ ಚಿಗುರೆಲೆ ಹದಿನೈದು
- ತೆಂಗಿನತುರಿ ಒಂದು ಹಿಡಿ
- ಜೀರಿಗೆ, ದನಿಯಾ ಅರ್ಧರ್ಧ ಚಮಚ
- ಬೆಲ್ಲದ ಪುಡಿ ಎರಡು ಚಮಚ
- ಕಾಳುಮೆಣಸು ಆರು
- ಮಜ್ಜಿಗೆ ಎರಡು ಕಪ್



UASB LIBRARY



ಮುಖಕಾಂತಿಗೆ ಹಣ್ಣುಗಳ ತಿರುಳಿನ ಫೇಷಿಯಲ್

UAS BIBRARY

ಹಣ್ಣುಗಳ ಸಿಪ್ಪೆ ಹಾಗೂ ತಿರುಳುಗಳಿಂದ ತಯಾರಿಸುವ ಫೇಷಿಯಲ್ ಹಾಗೂ ಫೇಸ್‌ಪ್ಯಾಕ್ ತ್ವಚೆಯ ತಾಜಾತನಕ್ಕೆ ಸಹಕಾರಿ. ಮುಖದ ಮೇಲೆ ನೆರಿಗೆ, ಸುಕ್ಕು ನಿವಾರಿಸಿ, ಭಂಗು, ಮೊಡವೆ ಕಪ್ಪುಕಲೆ ಬರದಂತೆ ಈ ನೈಸರ್ಗಿಕ ಫೇಸ್‌ಪ್ಯಾಕ್ ತಡೆಯುತ್ತದೆ.

■ ಉಮಾ ವೇಣೂರು

ಹಣ್ಣುಗಳನ್ನು ತಿಂದು ಸಿಪ್ಪೆ, ತಿರುಳು ಎಸೆಯುತ್ತಿದ್ದೀರಾ? ಹಾಗಿದ್ದರೆ ಕೊಂಚ ನಿಲ್ಲಿ. ಹಣ್ಣುಗಳನ್ನು ಖಿಷಿ ಖಿಷಿಯಿಂದ ತಿನ್ನಿ, ಜ್ಯೂಸ್ ಮಾಡಿಕೊಂಡು ಕುಡಿಯಿರಿ. ಆದರೆ ಇದರ ಸಿಪ್ಪೆ, ತಿರುಳು, ಬೀಜಗಳನ್ನು ಎಸೆಯಬೇಡಿ. ಇವೆಲ್ಲವೂ ತ್ವಚೆಯ ತಾಜಾತನಕ್ಕೆ, ನಯಕ್ಕೆ, ಒಟ್ಟಾರೆ ಅಂದ ಹೆಚ್ಚಿಸಲು ಸಹಕಾರಿ.

ಬಿರುಬೇಸಿಗೆಯಲ್ಲಿ ತ್ವಚೆ ಒಣಗುವುದು ಸಹಜ. ಸೂರ್ಯನ ಅತಿನೇರಳೆ ಕಿರಣಗಳಿಂದ ಸನ್‌ಬರ್ನ್ ಉಂಟಾಗಬಹುದು. ವಾತಾವರಣದ ಕಲ್ಮಶಗಳಿಂದ ಚರ್ಮ ಅಂದಗೆಡಬಹುದು. ಇವೆಲ್ಲದರ ನಿವಾರಣೆಗೆ ಹಣ್ಣುಗಳಿಂದ ಆರೈಕೆ ಮಾಡಿಕೊಳ್ಳುವುದು ಒಳ್ಳೆಯ ಉಪಾಯ.

ಹಣ್ಣುಗಳ ತಿರುಳು ಬಳಸಿ ಫೇಸ್‌ಪ್ಯಾಕ್ ಹಾಕಿಕೊಳ್ಳಬಹುದು, ಫೇಷಿಯಲ್ ಮಾಡಿಕೊಳ್ಳಬಹುದು. ಈ ಮೂಲಕ ತ್ವಚೆಯ ತಾಜಾತನ ಕಾಪಾಡಿಕೊಳ್ಳಬಹುದು. ಈ ಫೇಷಿಯಲ್, ಫೇಸ್‌ಪ್ಯಾಕ್‌ಗಳು ತ್ವಚೆಯ ಆರೈಕೆಗೆ ಅತ್ಯಂತ ಪರಿಣಾಮಕಾರಿಯಾಗಿದೆ. ಇದು ನೈಸರ್ಗಿಕವಾಗಿದ್ದು, ಅಡ್ಡಪರಿಣಾಮವೂ ಇಲ್ಲದಿರುವುದು ಸೌಂದರ್ಯಪ್ರಿಯರಿಗೆ ಸಂತಸದ ವಿಚಾರವೂ ಹೌದು.

ಹಣ್ಣುಗಳಲ್ಲಿರುವ ಖನಿಜಾಂಶ, ವಿಟಮಿನ್‌ಗಳು ಚರ್ಮವನ್ನು ಪೋಷಿಸಿ, ಹೊಳಪನ್ನು ಹೆಚ್ಚಿಸುತ್ತವೆ. ಮನೆಯಲ್ಲೇ ಸುಲಭವಾಗಿ ಮಾಡಬಹುದಾದ ಕೆಲವು



ಹಣ್ಣಿನ ಫೇಷಿಯಲ್ ವಿಧಾನಗಳು ದುಬಾರಿಯೂ ಆಗಿರದೇ ಇರುವುದರಿಂದ ಮಹಿಳೆಯರಿಗೆ ಅನುಕೂಲವೇ ಆಗಿದೆ.

'ಹಣ್ಣುಗಳ ತಿರುಳಿನ ಫೇಷಿಯಲ್ ಮಾಡುವಾಗ ಮೊದಲು ಮುಖ, ತ್ವಚೆಯನ್ನು ಶುಚಿಗೊಳಿಸಬೇಕು. ರೋಸ್ ವಾಟರ್ ಬಳಸಿ ಮುಖವನ್ನು ತೊಳೆಯುವುದು ಒಳ್ಳೆಯದು. ನಂತರ ಹದವಾಗಿ ಮಸಾಜ್ ಮಾಡಿಕೊಳ್ಳಬೇಕು. ಸ್ಕ್ರಬಿಂಗ್ ಕೂಡ ಪರಿಣಾಮಕಾರಿ. ಕಿತ್ತಳೆ ಅಥವಾ ನಿಂಬೆಹಣ್ಣಿನ ಸಿಪ್ಪೆಯ ಪುಡಿಯನ್ನು ಹಾಲಿನ ಕೆನೆಯೊಂದಿಗೆ ಬೆರೆಸಿ ಮುಖಕ್ಕೆ ಹಚ್ಚಿ ಸುಮಾರು ಐದು ನಿಮಿಷ ನಿಧಾನವಾಗಿ ಮಸಾಜ್ ಮಾಡಿಕೊಂಡರೆ ಒಳ್ಳೆಯದು. ಅದಾಗಿ ಮುಖದ ತ್ವಚೆಗೆ ಸ್ಟೀಮ್ ಮಾಡಿಕೊಂಡರೆ ತ್ವಚೆಯ ರಂಧ್ರದೊಳಗೆ ಸೇರಿಕೊಂಡಿರುವ ಕೊಳೆ ಆಚೆ ಬಂದು ಚರ್ಮ ಸ್ವಚ್ಛವಾಗುತ್ತದೆ. ನಂತರ ಹಣ್ಣಿನ ಫೇಸ್‌ಪ್ಯಾಕ್ ಹಾಕಿಕೊಂಡು 20 ನಿಮಿಷಗಳ ಬಳಿಕ ತಣ್ಣೀರಿನಿಂದ ತೊಳೆಯಬೇಕು. ಫೇಸ್‌ಪ್ಯಾಕ್ ತೆಗೆದ ಮೇಲೆ ತಳುವಾಗಿ ಮಾಯಿಶ್ಚರೈಸರ್ ಹಚ್ಚಿಕೊಂಡರೆ ತ್ವಚೆಯ ಆರೈಕೆ ಮುಗಿದಂತೆಯೇ' ಎಂದು ಫೇಸ್‌ಪ್ಯಾಕ್ ಮಾಡಿಕೊಳ್ಳುವ ವಿಧಾನವನ್ನು ವಿವರಿಸುತ್ತಾರೆ ಬೆಂಗಳೂರಿನ ಸೌಂದರ್ಯತಜ್ಞೆ ರೇಖಾರಾವ್.

'ಸಾಮಾನ್ಯವಾಗಿ ಎಲ್ಲ ಹಣ್ಣುಗಳನ್ನೂ ಫೇಷಿಯಲ್, ಫೇಸ್‌ಪ್ಯಾಕ್‌ಗಾಗಿ ಬಳಸಿಕೊಳ್ಳಬಹುದು. ಮುಖ್ಯವಾಗಿ ಪಪ್ಪಾಯಿ ತಿರುಳು, ಬಾಳೆಹಣ್ಣು, ಮಾವಿನಹಣ್ಣು, ಸ್ಟ್ರಾಬೆರಿ, ಅವಕಾಡೊ ಮುಂತಾದ ಹಣ್ಣುಗಳು ತ್ವಚೆಯ ತಾಜಾತನ ಕಾಪಾಡಿಕೊಳ್ಳಲು ಸಹಕಾರಿ. ಅವರವರ ಚರ್ಮ ಪ್ರಕೃತಿಗೆ ಆಧರಿಸಿ ಫೇಷಿಯಲ್ ಮಾಡಿಸಿಕೊಳ್ಳಬೇಕು. ಹಣ್ಣುಗಳ ಫೇಷಿಯಲ್‌ನಿಂದ ತ್ವಚೆಗೆ ನೈಸರ್ಗಿಕ ಹೊಳಪು ಬರುತ್ತದೆ' ಎಂದು ಹೇಳುತ್ತಾರೆ ಅವರು.

ಅಡ್ಡಪರಿಣಾಮವಿಲ್ಲ

ತಾಜಾ ಹಣ್ಣುಗಳ ಫೇಸ್‌ಪ್ಯಾಕ್ ಮತ್ತು ಫೇಷಿಯಲ್‌ಗಳು ರಾಸಾಯನಿಕಮುಕ್ತವಾಗಿದ್ದು ಯಾವುದೇ ಅಡ್ಡಪರಿಣಾಮ ಬೀರುವುದಿಲ್ಲ. ಹೀಗಾಗಿ ಮಹಿಳೆಯರು ಯಾವುದೇ ಸಮಯದಲ್ಲೂ ನೈಸರ್ಗಿಕವಾಗಿರುವ ಫೇಸ್‌ಪ್ಯಾಕ್‌ಗಳ ಮೊರೆಹೋಗುವುದು ಒಳ್ಳೆಯದು ಎಂಬುದು ಸೌಂದರ್ಯತಜ್ಞರ ಅಭಿಪ್ರಾಯ.

ಪಾರ್ಲರ್‌ಗಳಲ್ಲಿ ದುಬಾರಿ ಹಣ ತೆತ್ತು ಮಾಡಿಸಿಕೊಳ್ಳುವ ಫೇಷಿಯಲ್‌ಗಿಂತ ಮನೆಯಲ್ಲೇ ಸುಲಭವಾಗಿ ಮಾಡಿಕೊಳ್ಳುವ ಫೇಷಿಯಲ್, ಫೇಸ್‌ಪ್ಯಾಕ್‌ಗಳು ಹೆಚ್ಚು ಪರಿಣಾಮಕಾರಿ. ತ್ವಚೆಯಲ್ಲಿನ ನಿರ್ಜೀವ ಕಣಗಳನ್ನು ತೆಗೆದುಹಾಕಿ ಹೊಳಪು ಬರುವಂತೆ ಮಾಡುವುದರಿಂದ ಹಣ್ಣುಗಳ ತಿರುಳಿನಿಂದ ಮಾಡುವ ಸೌಂದರ್ಯವರ್ಧನೆ ಸಹಕಾರಿ.

ಹಣ್ಣುಗಳ ತಿರುಳಿನ ಬಳಕೆ ಹೇಗೆ?

- ಪಪ್ಪಾಯಿ ಹಣ್ಣಿನ ತಿರುಳನ್ನು ಪಲ್ಪ್ ಮಾಡಿಕೊಂಡು ಇದರ ಜೊತೆಗೆ ಜೇನುತುಪ್ಪ ಬೆರೆಸಿ ಮುಖಕ್ಕೆ ಹಚ್ಚುವುದರಿಂದ ಚರ್ಮ ನಯವಾಗುತ್ತದೆ ಮತ್ತು ಭಂಗು (pigmentation) ನಿವಾರಣೆಯಾಗುತ್ತದೆ.
- ಬಾಳೆಹಣ್ಣಿನ ತಿರುಳಿಗೆ ಸ್ವಲ್ಪ ಮೊಸರು ಸೇರಿಸಿ ಮುಖಕ್ಕೆ ತೆಳುವಾಗಿ ಲೇಪಿಸಿಕೊಳ್ಳಿ. ಇದರಿಂದ ಚರ್ಮಕ್ಕೆ ಹೊಳಪು ಬರುತ್ತದೆ.
- ಮಾವಿನಹಣ್ಣಿನ ಪಲ್ಪ್ ಅನ್ನು ಒಂದು ಬೌಲಿಗೆ ಹಾಕಿ ಇದಕ್ಕೆ ಎರಡು ಚಮಚ ಜೇನುತುಪ್ಪ ಸೇರಿಸಿ ಚೆನ್ನಾಗಿ ಮಿಕ್ಸ್ ಮಾಡಿ. ಈ ಮಿಶ್ರಣವನ್ನು ಚರ್ಮಕ್ಕೆ ಹಚ್ಚುವುದರಿಂದ ತ್ವಚೆಯ ತಾಜಾತನ ಕಾಪಾಡಿಕೊಳ್ಳುವುದರ ಜೊತೆಗೆ ತೇವಾಂಶ ಕಾಯ್ದುಕೊಳ್ಳಲು ಸಹಕಾರಿಯಾಗುತ್ತದೆ.
- ಎಣ್ಣೆಯುಕ್ತ ಚರ್ಮ ಇದ್ದವರು ಸ್ಟ್ರಾಬೆರಿ ಹಣ್ಣುಗಳನ್ನು ಬಳಸಬಹುದು. ಚೆನ್ನಾಗಿ ಮಾಗಿದ ಸ್ಟ್ರಾಬೆರಿ ಹಣ್ಣುಗಳನ್ನು ಕಿವುಚಿ ಸ್ವಲ್ಪ ಜೇನುತುಪ್ಪ ಸೇರಿಸಿ ಮಿಕ್ಸ್ ಮಾಡಿ ಮುಖಕ್ಕೆ ಹಚ್ಚಿಕೊಳ್ಳಬೇಕು. ಹತ್ತು ನಿಮಿಷದ ಬಳಿಕ ತಣ್ಣೀರಿನಲ್ಲಿ ತೊಳೆದುಕೊಂಡರೆ ಮುಖ ಕಾಂತಿಯುಕ್ತವಾಗುತ್ತದೆ.

ಪ್ರಯೋಜನ ಏನೇನು?

ಹಣ್ಣುಗಳ ತಿರುಳಿನ ಫೇಷಿಯಲ್‌ನಿಂದ ತ್ವಚೆಗೆ ಆಗುವ ಪ್ರಯೋಜನ ಹಲವು. ಚರ್ಮಕ್ಕೆ ನೈಸರ್ಗಿಕ ಹೊಳಪು ಬರುತ್ತದೆ. ಸೂರ್ಯನ ಅತಿನೇರಳೆ ಕಿರಣಗಳಿಂದ ತ್ವಚೆಗೆ ಹಾನಿಯಾಗುವುದನ್ನು ತಡೆಯುತ್ತದೆ. ಸನ್‌ಟ್ಯಾನ್‌ನಿಂದ ಚರ್ಮದ ಮೇಲಾಗುವ ದುಷ್ಪರಿಣಾಮವನ್ನು ನಿವಾರಿಸುತ್ತದೆ. ಮೊಡವೆ, ಇದರಿಂದ ಉಂಟಾಗುವ ಕಲೆ ಹೋಗುತ್ತದೆ. ಬ್ಲಾಕ್‌ಹೆಡ್, ಕಪ್ಪುಕಲೆ ಬರದಂತೆ ತಡೆಯುತ್ತದೆ. ಫೇಂಟ ಏಜಿಂಗ್‌ನಂತೆ ಈ ಫೇಷಿಯಲ್ ಕೆಲಸ ಮಾಡುತ್ತದೆ. ಚರ್ಮದ ಮೇಲಿನ ನೆರಿಗೆ, ಸುಕ್ಕುಗಳನ್ನು ಹೋಗಲಾಡಿಸುತ್ತದೆ.





ತ್ವಚೆಯ ಕಾಂತಿಗೆ ಕಲ್ಲಂಗಡಿ

■ ಕವಿತಾ ವಿನು ಭಟ್ಟ

ಕಲ್ಲಂಗಡಿ ಹಣ್ಣು ದಾಹ ನಿವಾರಕ. ಸೌಂದರ್ಯವರ್ಧಕವೂ. ಜೀವಸತ್ವ ಮತ್ತು ಉತ್ಕರ್ಷಣ ನಿರೋಧಕ ಗುಣ ಹೊಂದಿರುವ ಕಲ್ಲಂಗಡಿ ಆರೋಗ್ಯಕ್ಕೂ ಉಪಕಾರಿ. ಇದರಲ್ಲಿನ ನೈಟ್ರಿಕ್ ಆಮ್ಲವು ಬ್ಯಾಕ್ಟೀರಿಯಾ ಬೆಳವಣಿಗೆಯನ್ನು ಕುಂಠಿತಗೊಳಿಸಿ, ಮೊಡವೆಗಳನ್ನು ನಿಯಂತ್ರಿಸುತ್ತದೆ. ಕಲ್ಲಂಗಡಿ ತುಂಡುಗಳನ್ನು ಪುದಿನಾ ಎಲೆಯೊಂದಿಗೆ ರುಬ್ಬಿಕೊಂಡು ಮೊಡವೆಗಳಿಗೆ ಲೇಪಿಸಿದರೆ ಮೊಡವೆಯಿಂದ ಮುಕ್ತಿ ಪಡೆಯಬಹುದು.

ಕಲ್ಲಂಗಡಿ ರಸವನ್ನು ತ್ವಚೆಗೆ ಲೇಪಿಸುವುದರಿಂದ ಚರ್ಮವನ್ನು ಹೈಡ್ರೇಟ್ ಮಾಡುತ್ತದೆ. ಚರ್ಮವು ತಕ್ಷಣವೇ ಹೊಳೆಯುತ್ತದೆ. ಕಲ್ಲಂಗಡಿ ಹಣ್ಣಿನಲ್ಲಿರುವ ಸಿಟ್ರಿಕ್ ಆಮ್ಲವು ತ್ವಚೆಯನ್ನು ನುಣುಪಾಗಿಸುತ್ತದೆ.

ಕಣ್ಣುಗಳ ಕೆಳಗೆ ಡಾರ್ಕ್ ಸರ್ಕಲ್ ಇದ್ದಾಗ, ಕಲ್ಲಂಗಡಿ ರಸದ ಜೊತೆಗೆ ಸೌತೆಕಾಯಿ ರಸ ಸೇರಿಸಿ ಹತ್ತಿಯಲ್ಲಿ ಅದ್ದಿಕೊಂಡು ಕಣ್ಣಿನ ಕೆಳಗೆ ಇಟ್ಟುಕೊಳ್ಳಿ. ಇದು ಭಂಗು ನಿವಾರಣೆಗೆ ಪರಿಹಾರ ಕೊಡುತ್ತದೆ.

ಕಲ್ಲಂಗಡಿ ರಸದೊಂದಿಗೆ ರೋಸ್ ವಾಟರ್ ಮತ್ತು ಸ್ವಲ್ಪ ಜೇನುತುಪ್ಪ ಬೆರೆಸಿ ಸ್ಪ್ರೇ ಬಾಟಲಿಯಲ್ಲಿ ಹಾಕಿಕೊಂಡು ತ್ವಚೆಗೆ ಸ್ಪ್ರೇ ಮಾಡಿಕೊಳ್ಳಿ. ಇದು ಉತ್ತಮ ಟೋನರ್.

ಈ ಹಣ್ಣಿನ ತಿರುಳಿನ ಜೊತೆಗೆ ಸ್ಟ್ರಾಬೆರಿ ಹಣ್ಣುಗಳನ್ನು ಹಾಕಿ ಸಕ್ಕರೆ ಸೇರಿಸಿ ಜೆಲ್ಸ್ ಮಾಡಿಕೊಳ್ಳಿ. ಒಂದಿಷ್ಟು ಜೇನುತುಪ್ಪ ಬೆರೆಸಿ ಮೊಣಕೈ, ಮೊಣಕಾಲು, ಕುತ್ತಿಗೆಯಂತಹ ಜಾಗದಲ್ಲಿ ಸ್ಕ್ರಬ್ ಮಾಡಿ. ನಂತರ ಸ್ವಚ್ಛಗೊಳಿಸಿ, ಮಾಯಿಶ್ಚರೈಸರ್ ಹಚ್ಚಿಕೊಳ್ಳಿ.

ಕಲ್ಲಂಗಡಿ ಹಣ್ಣು ಜೊತೆಗೆ ಸಿಪ್ಪೆ ಸಹ ಸೌಂದರ್ಯವರ್ಧಕವಾಗಿ ಬಳಕೆಯಲ್ಲಿದೆ. ಹಣ್ಣು ತಿಂದ ನಂತರ ಬಿಸಾಡುವ ಸಿಪ್ಪೆಯನ್ನು ಚರ್ಮ ಮತ್ತು ಕೂದಲಿನ ಆರೈಕೆಗೆ ಬಳಕೆ ಮಾಡುವುದರಿಂದ ಕಡಿಮೆ ಖರ್ಚಿನಲ್ಲಿ ಅಧಿಕ ಲಾಭ ನಿಮ್ಮದಾಗುತ್ತದೆ.

ಕಲ್ಲಂಗಡಿ ಸಿಪ್ಪೆಯ ಬಿಳಿ ಭಾಗವನ್ನು ರುಬ್ಬಿಕೊಂಡು ಕಡಲೆಹಿಟ್ಟು ಮತ್ತು ಹಾಲು ಬೆರೆಸಿ ಹಚ್ಚಬೇಕು. ಇದು ಸನ್‌ಟ್ಯಾನ್ ತೆಗೆದು ಹಾಕಿ ಚರ್ಮಕ್ಕೆ ಸಹಜ ಸೌಂದರ್ಯ ನೀಡುತ್ತದೆ. ಹಸಿ ಹಾಲಿನ ಜೊತೆಗೆ ಕಲ್ಲಂಗಡಿ ಸಿಪ್ಪೆಯ ಪೇಸ್ಟ್ ಸೇರಿಸಿ ಕ್ಲೆನ್ಸಿಂಗ್‌ನಲ್ಲಿ ಬಳಕೆ ಮಾಡಬಹುದಾಗಿದೆ. ಮಾಲಿನ್ಯದಿಂದ ಉಂಟಾಗುವ ಕಲ್ಮಶ, ದೂಳು ಹೋಗಲಾಡಿಸಲು ಪ್ರಯೋಜನಕಾರಿ.

ಕಲ್ಲಂಗಡಿ ಸಿಪ್ಪೆಯ ಪೇಸ್ಟ್ ಜೊತೆಗೆ ಶ್ರೀಗಂಧದ ಪುಡಿ ಬೆರೆಸಿ ಫೇಸ್‌ಪ್ಯಾಕ್ ಹಾಕುತ್ತ ಬಂದರೆ ಚರ್ಮದ ಎಲ್ಲ ಸಮಸ್ಯೆ ಮಾಯವಾಗಿ ಮುಖ ಹೊಳೆಯುತ್ತದೆ. ■

UASD LIBRARY

ಪಕ್ಷಿಗಳಿಗೆ ಕಂಟಕ ಮನುಷ್ಯನ ಅತಿರೇಕ



ತುಂಗಭದ್ರಾ ಹಿನ್ನೀರಿನಲ್ಲಿ ಪಕ್ಷಿಗಳ ಆವಾಸಸ್ಥಾನಕ್ಕೆ ಕುತ್ತಾಗುತ್ತಿರುವ ಫೋಟೊಶೂಟ್

ಮನೋಹರ ಬೊಂದಾಡೆ ಕನಕಗಿರಿ
ಚಿತ್ರಗಳು: ಮಾರುತಿ ಪೂಜಾರಿ

ಅದು ಹೊಸಪೇಟೆಯ ತುಂಗಭದ್ರಾ ಜಲಾಶಯದ ಹಿನ್ನೀರು ಪ್ರದೇಶ. ವಸಂತದ ಬಿಸಿಗಾಳಿ ಅಲ್ಲಿದ್ದವರನ್ನು ಅಪ್ಪುತ್ತಲೇ ಮೆಲ್ಲಗೆ ತಂಪಾಗುತಿದ್ದ ಸಮಯ. ಎಲ್ಲೋ ಚದುರಿಹೋಗಿದ್ದ ಬಳೆಂಟು ಹಕ್ಕಿಗಳು ನೆಲಕ್ಕಿಳಿದು ನಡೆಯಲು ಶುರುವಿಟ್ಟವು. ನಿಂತಲ್ಲೆ ನಿಲ್ಲದೆ ಮೇಲಕ್ಕೂ ಹಾರದೆ ಚಿವ್ ಚಿವ್, ಕೊಕ್ಕೊಕೊ ಎನ್ನುತ್ತಾ ನಮ್ಮನ್ನೇ ಸುತ್ತುವರೆಯುತ್ತಿದ್ದವು. ನನ್ನ ಗಮನ ಈ ಹಕ್ಕಿಗಳತ್ತ ಹರಿಯಿತು.

ದಿಟ್ಟಿಸಿ ನೋಡಿದರೆ, ಅವುಗಳಲ್ಲಿ ಏನೋ ಕಳೆದುಕೊಂಡ ಚಡಪಡಿಕೆ. ಸ್ವಲ್ಪ ಸಮಯದ ಬಳಿಕ ಅವುಗಳ ಚೀತ್ಕಾರ ಕೇಳಿಸತೊಡಗಿತು. ಒಂದೆರೆಡು ಹಕ್ಕಿಗಳು ಅಲುಗಾಡದೆ ನಿಂತಿದ್ದ ನೆಲದತ್ತ ದೃಷ್ಟಿಹರಿಸಿದರೆ, ಅಲ್ಲಿ ಕಂಡದ್ದು, ಒಡೆದುಹೋಗಿದ್ದ ಅವುಗಳ ಮೊಟ್ಟೆಗಳು! ನಾಲ್ಕಾರು ಕಲ್ಲುಗಳ ಮಧ್ಯದಲ್ಲಿ ಮರಿ ಮಾಡಲು ಇಟ್ಟು ಹೋಗಿದ್ದ ಮೊಟ್ಟೆಗಳನ್ನು ಯಾರೋ ಹಾಳು ಮಾಡಿದ್ದರು. ತನ್ನ ಸಂತಾನಕ್ಕೆ ಸುರಕ್ಷಿತ ಸ್ಥಳವೆಂದು ಭಾವಿಸಿ ಇರಿಸಿಹೋಗಿದ್ದ ಮೊಟ್ಟೆಗಳ ಸ್ಥಿತಿ ಕಂಡ ಹಕ್ಕಿಗಳ ಅಳಲು ತೀವ್ರವಾಯಿತು. ಗೂಡಿನ ಮೇಲೆ ನಾಲ್ಕು ಚಕ್ರದ ವಾಹನ ಹಾದುಹೋದ ಗುರುತುಗಳು ಕಂಡುಬಂದವು! ಇದು ಮನುಷ್ಯರ ಅತಿರೇಕದ ಫಲವಾಗಿತ್ತು.

ವಿಜಯನಗರ ಜಿಲ್ಲೆಯ ಹೊಸಪೇಟೆ ಬಳಿಯ ತುಂಗಭದ್ರಾ ಹಿನ್ನೀರು ಪ್ರದೇಶವೀಗ ಹಕ್ಕಿಗಳಿಂದ ತುಂಬಿಕೊಂಡಿದೆ. ನೀರು ಹಿಂದಕ್ಕೆ ಸರಿದಂತೆಲ್ಲ ಹುಲ್ಲುಗಾವಲಿನಂತೆ ಕಂಗೊಳಿಸುವ ಈ ಪ್ರದೇಶ ಜೀವವಿಕಸನಕ್ಕೆ ಅತ್ಯಂತ ಪೂರಕ ಪರಿಸರ ಹೊಂದಿದೆ. ಮರಳಿನಿಂದ ಕೂಡಿದ್ದು, ಹಕ್ಕಿಗಳಿಗೆ ಸಮೃದ್ಧ ಆಹಾರವೂ



ಸೀಗಲ್



ಮರಿಗೆ ಆಹಾರ ತಿನ್ನಿಸುತ್ತಿರುವ ಲಿಟಲ್ ಟರ್ನ್



ಮೀನುಗಳಿಗಾಗಿ ಹುಡುಕಾಟ ನಡೆಸುತ್ತಿರುವ ಕಾಮನ್ ಗ್ರೀನ್‌ಶಾಂಕ್ ಹಕ್ಕಿಗಳು

UASB LIBRARY



ಸಿಗುತ್ತದೆ. ವಿದೇಶದ ಹಾಗೂ ಉತ್ತರ ಭಾರತದ ವಲಸೆ ಹಕ್ಕಿಗಳಿಗೆ ವಿಜಯನಗರ ಜಿಲ್ಲೆ ಸುರಕ್ಷಿತ ಸಂತಾನೋತ್ಪತ್ತಿಯ ತಂಗುದಾಣ. ಹಿಮಾಲಯ ಸೇರಿದಂತೆ ಉತ್ತರದಲ್ಲಿನ ಅತಿಶೀತ ವಾತಾವರಣದಿಂದಾಗಿ 20 ಸಾವಿರ ಕಿ.ಮೀ.ನಷ್ಟು ದೂರದಿಂದ ಸಂತಾನೋತ್ಪತ್ತಿಗೆ ಬಂದ ನೂರಾರು ಪಕ್ಷಿಗಳು ಇಂದಿಲ್ಲಿ ಆತಂಕದಲ್ಲಿವೆ. ಕಾರಣ; ಇಲ್ಲಿಯ ಪಕ್ಷಿಗಳ ಆವಾಸ ಸ್ಥಾನಕ್ಕೆ ಲಗ್ಗೆ ಇಟ್ಟು ಮನುಷ್ಯ ಅತಿರೇಕ ಮೆರೆಯುತ್ತಿರುವುದು.

ನದಿ ಪಾತ್ರದ ಪ್ರದೇಶಗಳಲ್ಲೀಗ ನೀರು ಕುಗ್ಗಿ ಹಸಿರು ಹಸಿರಾಗಿ ಹುಲ್ಲುಗಾವಲಿನಂತೆ ಕಂಗೊಳಿಸುತ್ತಿವೆ. ಇಲ್ಲಿಗೆ ಭೇಟಿ ನೀಡಿ ರೀಲ್ಸ್ ಮಾಡುವ ನೆಟ್ಟಿಗರು ವಿದೇಶದಿಂದ ಪಕ್ಷಿಗಳು ಇಲ್ಲಿಗೆ ವಲಸೆ ಬಂದು, ನೋಡಲು ಅದ್ಭುತ ತಾಣ ಎಂದು ಬಣ್ಣಿಸಿ ವಿಹಾರಕ್ಕೆ ಸ್ವಾಗತಿಸುತ್ತಿದ್ದಾರೆ. ಇದರೊಂದಿಗೆ, ಪ್ರಿ ವೆಡ್ಡಿಂಗ್ ಶೂಟ್‌ಗೆ ಬರುವವರ ಸಂಖ್ಯೆಯೂ ವಿರುಮುಖಿವಾಗಿದೆ. ಪ್ರಸ್ತುತ ತುಂಗಭದ್ರಾ ಹಿನ್ನೀರಿನ ಗುಂಡಾ ಫಾರೆಸ್ಟ್ ಬಳಿವೊಂದರಲ್ಲೇ ದಿನಕ್ಕೆ 40ಕ್ಕೂ ಹೆಚ್ಚು ನವ ಜೋಡಿಗಳ ಪ್ರಿ ವೆಡ್ಡಿಂಗ್ ಶೂಟ್ ನಡೆಯುತ್ತಿದೆ. ಅಂದರೆ ಕಾರುಗಳು, ದ್ವಿಚಕ್ರ ವಾಹನಗಳು, ಜನರ ಓಡಾಟ ಅಧಿಕವಾಗಿದೆ. ಪಕ್ಷಿಗಳ ಮೊಟ್ಟೆಗಳ ಮೇಲೆಯೇ ವಾಹನ ಹತ್ತಿಸಿ ಹೋಗುತ್ತಿದ್ದಾರೆ. ಪ್ರಿ ವೆಡ್ಡಿಂಗ್ ಶೂಟ್‌ಗಾಗಿ ಡ್ರೋಣ್ ಕ್ಯಾಮೆರಾಗಳ ಬಳಕೆ ಪಕ್ಷಿಗಳ ಧೈರ್ಯ ಕುಂದಿಸುತ್ತಿವೆ. ಶೂಟಿಂಗ್‌ಗಾಗಿ ಹಾಕುವ ಫೋಲ್ಡಿಂಗ್ ಟೆಂಟ್‌ಗಳು, ವಾಹನಗಳು, ಜನರ ಗದ್ದಲ– ಜಲಾಶಯ ತೀರದಲ್ಲಿ ಪಕ್ಷಿಗಳ ಆವಾಸಸ್ಥಾನದ ಅವನತಿಗೆ ನಾಂದಿ ಹಾಡುತ್ತಿವೆ.



ಕಾಲರ್ಡ್ ಪ್ರಾಟಿಂಕೋಲ್ ಹಕ್ಕಿ

ಪಕ್ಷಿಗಳಿಗೆ ಇಲ್ಲಿರುವ ನಾಯಿಗಳೂ ದೊಡ್ಡ ಶತ್ರುಗಳಾಗಿವೆ. ಕಲ್ಲುಗಳನ್ನು ಚದುರಿಸಿ ಮೊಟ್ಟೆಗಳನ್ನು ತಿನ್ನುತ್ತಿದ್ದು, ಮೊಟ್ಟೆಗಳನ್ನು ಮರಿ ಮಾಡುವುದೇ ಹಕ್ಕಿಗಳಿಗೆ ಹರಸಾಹಸವಾಗಿದೆ. ಇನ್ನು



ಪ್ರಾಟಿಂಕೋಲ್

ಹಿನ್ನೀರಿನ ಬಳಿ ಎಸೆದ ಬಿಯರ್, ಪ್ಲಾಸ್ಟಿಕ್ ಬಾಟಲಿಗಳು

ಸಾಲದೆಂಬಂತೆ ಜಲಾಶಯದ ಹಿಂಭಾಗದಲ್ಲಿ ನೀರು ಸರಿದಂತೆ ಹಲಸಂದಿ, ಶೇಂಗಾ ಬಿತ್ತನೆ ಮಾಡಿ ಬೆಳೆ ತೆಗೆಯುವ ಇಲ್ಲಿನ ಭೂರಹಿತ ಅರೆಕಾಲಿಕ ರೈತರು ಪಕ್ಷಿಗಳ ಆವಾಸ ಸ್ಥಾನಗಳನ್ನು ಹದಗೆಡಿಸಲು ಮುಂದಾಗಿದ್ದಾರೆ.

ವಲಸೆ ಪಕ್ಷಿಗಳ ಇಳಿಮುಖ

ವಿಜಯನಗರ ಜಿಲ್ಲೆಯ ಏಕೈಕ ಪಕ್ಷಿಧಾಮವಾಗಿರುವ ಹಗರಿಬೊಮ್ಮನಹಳ್ಳಿಯ ಅಂಕಸಮುದ್ರ ಪಕ್ಷಿಧಾಮದಲ್ಲಿ ಬಿಎನ್‌ಎಚ್‌ಎಸ್ (ಬಾಂಬೆ ನ್ಯಾಚುರಲ್ ಹಿಸ್ಟರಿ ಸೊಸೈಟಿ) ಅರಣ್ಯ ಇಲಾಖೆ ಹಾಗೂ ಪಕ್ಷಿತಜ್ಞರ ಜೊತೆಗೂಡಿ 2025ರ ಜನವರಿಯಲ್ಲಿ ಪಕ್ಷಿಗಳ ಗಣತಿ ನಡೆಸಿತ್ತು. ಬಣ್ಣದ ಕೊಕ್ಕರೆ (ಪೇಂಟೆಡ್ ಸ್ಟಾರ್ಕ್), ಸಿಳ್ಳೆ ಬಾತು, ಸೂಜಿ ಬಾಲದ ಬಾತು, ನೀರುಕಾಗೆ (ಕಾರ್ಮೋರೆಂಟ್) ಕೆಂಬರ್ಲ ಮತ್ತು ಬೂದು ಬಕಗಳು ಸೇರಿ 133 ಪ್ರಭೇದಗಳ 35 ಸಾವಿರಕ್ಕೂ ಹೆಚ್ಚು ಪಕ್ಷಿಗಳು ಪತ್ತೆಯಾಗಿದ್ದು, ಸ್ಯಾಂಡ್ ಪೈಪರ್, ಪ್ಲೋವರ್ ಹಕ್ಕಿಗಳು ನಾಪತ್ತೆಯಾಗಿದ್ದವು. ಕೆಂಪು ತಲೆಬಾತುಗಳು (ರೆಡ್ ಕ್ರೆಸ್ಟೆಡ್ ಪೋಚರ್ಡ್) ಇಲ್ಲಿ ಮೊದಲು ಬಾರಿ ಕಂಡು ಬಂದಿದ್ದು, ಮಿಷಿ ಇಮ್ಮಡಿಗೊಳಿಸಿತ್ತು. ಆದರೆ, ಹಿಂದಿನ ಸರ್ವೆಯಲ್ಲಿ ಇಲ್ಲಿ 270ಕ್ಕೂ ಹೆಚ್ಚು ಪ್ರಭೇದದ ಹಕ್ಕಿಗಳು ಕಂಡುಬಂದಿದ್ದವು. ಅದೀಗ 133ಕ್ಕೆ ಇಳಿಮುಖವಾಗಿರುವುದು ಶೋಚನೀಯ ಸಂಗತಿ. 244 ಎಕರೆ ಪ್ರದೇಶದ ಅಂಕಸಮುದ್ರಕ್ಕೆ ಅಲಸ್ಕಾ, ಯೂರೋಪ್, ಸೈಬೀರಿಯಾ, ಪಾಕಿಸ್ತಾನ, ಅಫಘಾನಿಸ್ತಾನಗಳಿಂದ ಪೆಸಿಫಿಕ್ ಗೋಲ್ಡನ್ ಪ್ಲೋವರ್, ರಫ್, ವಿಜನ್, ಕಾಮನ್ ಪೋಚರ್ಡ್, ಸೋಲಾರಿ ಬಾತುಗಳು ಮತ್ತು ಅಪರೂಪದ ಪಕ್ಷಿಯಾದ ಇಂಡಿಯನ್ ಸ್ಕಿಮ್ಮರ್ ಸೇರಿ ಅನೇಕ ಪಕ್ಷಿಗಳು ಸಂತಾನೋತ್ಪತ್ತಿಗಾಗಿ ಇಲ್ಲಿಗೆ ವಲಸೆ ಬರುತ್ತವೆ. ಆದರೆ ನಾವು ಇವುಗಳ ಆವಾಸ ತಾಣಗಳನ್ನು ಸಂರಕ್ಷಿಸುತ್ತಿಲ್ಲದಿರುವುದು ದುರಂತ.

'ಉಳಿದಿರುವ ಕೆಲವೇ ಪಕ್ಷಿ ಸಂಕುಲವನ್ನು ಉಳಿಸಲು ಹಿನ್ನೀರಿನ ಪ್ರದೇಶಗಳಲ್ಲಿ ಮನುಷ್ಯರ ಉಪಟಳವನ್ನು ತಡೆಯಬೇಕು. ಇಂಥ ತಾಣಗಳನ್ನು ಪಿಕ್ನಿಕ್ ಸ್ಪಾಟ್‌ಗಳನ್ನಾಗಿ ಪರಿವರ್ತಿಸಿಕೊಳ್ಳುವುದನ್ನು ನಿರ್ಬಂಧಿಸಬೇಕು. ಅರಣ್ಯ ಇಲಾಖೆ ಹಾಗೂ ಜಲಾಶಯದ ಆಡಳಿತ ಮಂಡಳಿ ಪ್ರತಿವರ್ಷದ ನವೆಂಬರ್‌ನಿಂದ ಜೂನ್‌ವರೆಗೆ ಇಲ್ಲಿ ಕಾವಲುಗಾರರನ್ನು ನೇಮಿಸಿ ಪಕ್ಷಿಗಳ ಆವಾಸ ಸ್ಥಾನಗಳನ್ನು ಸಂರಕ್ಷಿಸಬೇಕು. ಪ್ರಕೃತಿಯ ವ್ಯವಸ್ಥೆಯಲ್ಲಿ ಮನುಷ್ಯ ಕೂಡ ಒಬ್ಬ ಪ್ರಜೆ. ಆದರೆ, ನಿರಂಕುಶ ಪ್ರಭುವಲ್ಲ ಎಂಬ ಸತ್ಯವನ್ನು ತಿಳಿದು ಪಕ್ಷಿಗಳ ಉಳಿವಿಗೆ ಮುಂದಾಗಬೇಕು' ಎನ್ನುತ್ತಾರೆ ಬೆಂಗಳೂರಿನ ಪಕ್ಷಿತಜ್ಞ ಹಾಗೂ ಪರಿಸರಪ್ರೇಮಿ ಪ್ರಸಾದ್.

ಆಹಾರದ ಕೊರತೆ

ಸಂತಾನೋತ್ಪತ್ತಿಗೆ ಪಕ್ಷಿಗಳು ಜಲಾಶಯಗಳ ಹಿನ್ನೀರು ಪ್ರದೇಶಗಳನ್ನೇ ಆಶ್ರಯಿಸುತ್ತವೆ. ಕಾರಣ, ಇದು ಮರಳು ಪ್ರದೇಶವಾಗಿರುತ್ತದೆ –ಜೊತೆಗೆ ಹುಟ್ಟಿದ ಮರಿಗಳಿಗೆ ಮರಿ ಮೀನು ಮತ್ತು ವಿವಿಧ ಸಣ್ಣ ಸಣ್ಣ ಕೀಟಗಳು ಯಥೇಚ್ಛವಾಗಿ ಸಿಗುತ್ತವೆ ಎಂದು. ಆದರೆ, ಇಲ್ಲಿನ ಕೆಲವು ರೈತರು ಹಿನ್ನೀರಿನಲ್ಲಿ ಬೆಳೆದ ಬೆಳೆಗೆ ಲಗ್ಗೆ ಇಡುವ ಕೀಟಗಳ ಶಮನಕ್ಕೆ ಕೀಟನಾಶಕ ಎಣ್ಣೆ ಬಳಸುತ್ತಿದ್ದು, ಇದರಿಂದ ಸಣ್ಣ ಕೀಟಗಳು ಸಾಯುತ್ತಿವೆ. ಬೆಳೆಗಳ ದಿಢೀರ್ ವೃದ್ಧಿಗೆ ಅತಿಯಾದ ರಾಸಾಯನಿಕ ಗೊಬ್ಬರ ಬಳಸುತ್ತಿರುವುದು ಮತ್ತೊಂದು ಮಾರಕ. ಇವೆಲ್ಲ ಕಷ್ಟಗಳ ನಡುವೆ ವಲಸೆ ಪಕ್ಷಿಗಳಿಗೆ ಎದುರಾದ ಬಹುದೊಡ್ಡ ಸಂಕಟವೆಂದರೆ, ಟೆಂಡರ್ ಪಡೆದ ಇಲ್ಲಿನ ಮೀನುಗಾರರು ಅತೀ ಸಣ್ಣ ಕಣ್ಣು (ತೂತು)ಗಳ ಬಲೆ ಹಾಕಿ ಮೀನುಗಳ ಹಿಡಿಯುತ್ತಿರುವುದು!

ಹೆಚ್ಚು ಮೀನು ಹಿಡಿಯಲು ಸಣ್ಣ ಕಣ್ಣಿನ ಬಲೆ ಬಳಸುವುದರಿಂದ, ಪಕ್ಷಿಗಳು ತಮ್ಮ ಮರಿಗಳಿಗೆ ಉಣಿಸಲು ಸಣ್ಣ ಮೀನುಗಳು ಸಿಗದಂತಾಗಿವೆ. 'ಸಣ್ಣ ಕಣ್ಣಿನ ಬಲೆ ಬಳಕೆ ಕಾನೂನುಬಾಹಿರ ಹಾಗೂ ಜೀವ ಸಂಕುಲಗಳ ವೃದ್ಧಿಗೆ ಮಾರಕವಾಗಿದ್ದರೂ ಬಳಕೆ ಮಾತ್ರ ನಿಲ್ಲದಿರುವುದು ವಲಸೆ ಪಕ್ಷಿಗಳಿಗೆ ಆಹಾರ ಕೊರತೆ ಉಂಟು ಮಾಡುತ್ತದೆ' ಎನ್ನುತ್ತಾರೆ ಪಕ್ಷಿಪ್ರೇಮಿ ಹಾಗೂ ಮಕ್ಕಳ ವೈದ್ಯರೂ ಆದ ಹೊಸಪೇಟೆಯ ಡಾ. ರಾಜು.



UAS LIBRARY

ದೂಧ್ ಸೋಡಾ

ರುಚಿ ನೋಡಾ..!

ಬೇಸಿಗೆಯಲ್ಲಿ ದಾಹ ನಿವಾರಣೆಗೆ, ದೇಹ ತಂಪಾಗಿಸಲು ದೂಧ್ ಸೋಡಾ ಪರಿಣಾಮಕಾರಿ. ರಣವೀರ್ ಸಿಂಗ್ ಅಭಿನಯದ ಧುರಂಧರ್ 2 ಸಿನಿಮಾ ಬಂದ ಬಳಿಕ ಈ ದೂಧ್ ಸೋಡಾ ಜನಪ್ರಿಯವಾಗಿದೆ.



■ ಯು.ಎ.

ಬೇಸಿಗೆಯಲ್ಲಿ ದಾಹ ಹೆಚ್ಚು. ಇದರ ನಿವಾರಣೆಗೆ ಏನಾದರೂ ತಂಪು ಕುಡಿಯಬೇಕು ಎನಿಸುವುದು ಸಹಜ. ಮಜ್ಜಿಗೆ, ಎಳನೀರು, ನಿಂಬೆಹಣ್ಣಿನ ಶರಬತ್... ಹೀಗೆ ದೇಸೀ ಪಾನೀಯಗಳನ್ನು ಎಷ್ಟೇ ಕುಡಿದರೂ, ರುಚಿ ರುಚಿಯಾದ ಇನ್ನೇನಾದರೂ ಪೇಯ ಸವಿಯಬೇಕು ಎಂದು ನಾಲಗೆ ಬಯಸುವುದು ಸಹಜ. ಪ್ಯಾಕ್ ಆಗಿರುವ ತಂಪು ಪಾನೀಯಗಳನ್ನು ಕುಡಿದರೆ ದಾಹ ನೀಗುವುದಕ್ಕಿಂತ ಆರೋಗ್ಯ ಹಾಳಾಗುವುದೆಂಬ ಕಾಳಜಿ ಜನರಲ್ಲಿ ಈಚೆಗೆ ಜಾಗೃತವಾಗುತ್ತಿದೆ. ಇದೇ ಸಂದರ್ಭದಲ್ಲಿ ರುಚಿಕರ, ಆರೋಗ್ಯಕ್ಕೂ ಹಾನಿಕಾರಕವಲ್ಲ ಎನ್ನುವಂಥ ಹೊಸಬಗೆಯ, ರುಚಿಯ, ಸ್ವಾದದ, ಘಮಲಿನ ಪೇಯವೊಂದು ಸದ್ದಿಲ್ಲದೆ ಸುದ್ದಿ ಮಾಡಿದೆ. ಅದುವೇ ದೂಧ್ ಸೋಡಾ!

ಕೋಲ್ಡ್ ಸೋಡಾ, ನಿಂಬೆರಸ, ಕಪ್ಪು ಉಪ್ಪು, ಜೀರಿಗೆ ಪುಡಿ ಸಕ್ಕರೆ ಅಥವಾ ಜೇನುತುಪ್ಪ, ಪುದಿನಾ ಎಲೆಗಳು, ಐಸ್‌ಕ್ಯೂಬ್ ಬಳಸಿ ತಯಾರಿಸುವ ಈ ದೂಧ್ ಸೋಡಾ ಎಲ್ಲರ ಅಚ್ಚುಮೆಚ್ಚು ಎನಿಸಿದೆ. ಈಗ ವಯಸ್ಸಿನ ಹಂಗಿಲ್ಲದೆ ಎಲ್ಲರನ್ನೂ ಆಕರ್ಷಿಸುತ್ತಿರುವ ಒಂದು 'ಸೆನ್ಸೇಷನ್ ಪಾನೀಯ' ಎನಿಸಿಕೊಂಡಿದ್ದು, ಸುಡು ಬೇಸಿಗೆಯಲ್ಲಿ ತಂಪು ನೀಡುತ್ತದೆ.

ದೂಧ್ ಸೋಡಾವನ್ನು ಪಾಕಿಸ್ತಾನಿ ಪಂಜಾಬಿ ಸಂಸ್ಕೃತಿಯೊಂದಿಗೆ ಗುರುತಿಸುವ ಪರಿಪಾಟ ಅನೇಕರಲ್ಲಿದೆ. ಅಲ್ಲಿ ಇದು ಸುಡು ಬೇಸಿಗೆಯಲ್ಲಿ ತಂಪು ನೀಡುವ ಪ್ರಮುಖ ಪಾನೀಯ. ನಮ್ಮಲ್ಲಿ ಗುಜರಾತ್‌ನ ಸ್ಥಳೀಯ ಸೋಡಾ ಅಂಗಡಿಗಳಿಂದ ಹಿಡಿದು ಮಹಾರಾಷ್ಟ್ರದ ಜನನಿಬಿಡ ರಸ್ತೆಗಳವರೆಗೆ, ದೂಧ್ ಸೋಡಾವು ಸಾಂಪ್ರದಾಯಿಕ ಪೇಯವೆಂದು ಪರಿಗಣಿಸಲಾಗಿದೆ.

ಮೂಲ ಎಲ್ಲಿ, ಹೇಗೆ?

ದೂಧ್ ಸೋಡಾ, ಮೊದಲು ಬಳಕೆಗೆ ಬಂದಿದ್ದು ಪಶ್ಚಿಮ ಭಾರತದಲ್ಲಿ. ಇಲ್ಲಿನ ವ್ಯಾಪಾರಿಗಳು ಬೇಸಿಗೆ ಸೆಕೆಯಿಂದ ಮುಕ್ತಿ ಪಡೆಯಲು ಮಣ್ಣಿನ ಮಡಕೆಗಳಲ್ಲಿ ಸಂಗ್ರಹಿಸಿಟ್ಟ ತಣ್ಣನೆಯ ಹಾಲನ್ನು, ಫ್ಲೇವರ್ಡ್ ಸಿರಪ್ ಮತ್ತು ಸೋಡಾದೊಂದಿಗೆ ಬೆರೆಸುತ್ತಿದ್ದರು. ಸಾಂಪ್ರದಾಯಿಕ ಹಾಲಿನ ಪಾನೀಯಗಳ ಹಿತವಾದ ಅನುಭವ ಮತ್ತು ಸೋಡಾದ ಆಹ್ಲಾದಕರ ಅಂಶಗಳನ್ನು ಯಶಸ್ವಿಯಾಗಿ ಮಿಶ್ರಣ ಮಾಡಿರುವ ಕಾರಣದಿಂದ ಇದು ತಕ್ಷಣ ಜನಪ್ರಿಯವಾಯಿತು. ಇದನ್ನು ತಯಾರಿಸುವುದು ಸುಲಭ ಮತ್ತು ವೆಚ್ಚವೂ ಕಡಿಮೆ ಇರುವುದರಿಂದ ಇದು ಎಲ್ಲರಿಗೂ ಲಭ್ಯವಿರುವ ಪಾನೀಯ ಆಗಿದೆ.

'ದೂಧ್ ಸೋಡಾವನ್ನು ನಮಗೆ ಬೇಕಾದಂತೆ ಬದಲಿಸಿಕೊಳ್ಳಲು ಅವಕಾಶವಿರುವುದರಿಂದ ರೋಸ್, ಚಾಕೊಲೇಟ್ ಅಥವಾ ಪಿಸ್ತಾದಂತಹ ಜನಪ್ರಿಯ ಫ್ಲೇವರ್‌ಗಳನ್ನು ಇದರಲ್ಲಿ ಕಾಣಬಹುದು. ದೂಧ್ ಸೋಡಾವನ್ನು ಸಾಮಾನ್ಯವಾಗಿ ಒಂದು ರೀತಿಯ ಫಲೂದಾ ಎಂದೂ ಹೇಳಲಾಗುತ್ತದೆ. ಶ್ಯಾವಿಗೆ ಅಥವಾ ತುಳಸಿ ಬೀಜ ಅಥವಾ ಸಬ್ಜಾ ಬೀಜಗಳಂತಹ ಪದಾರ್ಥಗಳನ್ನು ಸೇರಿಸದಿದ್ದರೂ ಇದು ಅದೇ ರೀತಿಯ ಕೆನೆಯುಕ್ತ ತೃಪ್ತಿಯನ್ನು ನೀಡುತ್ತದೆ' ಎಂದು ಹೇಳುತ್ತಾರೆ ಬೆಂಗಳೂರಿನ ನಾರಾಯಣ ಹೆಲ್ತ್‌ಸಿಟಿಯಲ್ಲಿ ಡಯಟೀಷಿಯನ್ ಆಗಿರುವ ಸುಪರ್ಣಾ ಮುಖರ್ಜಿ ಅವರು.

'ಬೇಸಿಗೆಯ ಶಾಖದಿಂದ ಪರಿಹಾರ ನೀಡಲು ಮತ್ತು ಜೀರ್ಣಕ್ರಿಯೆಯನ್ನು ಸುಧಾರಿಸಲು ಇದನ್ನು ಸೇವಿಸಬಹುದು ಎನ್ನುವುದು ಆಹಾರ ತಜ್ಞರ ಅನಿಸಿಕೆ. ಹಾಲಿನಲ್ಲಿರುವ ಪ್ರೊಟೀನ್ ಮತ್ತು ಕ್ಯಾಲ್ಸಿಯಂನಿಂದ ಆರೋಗ್ಯ ಲಾಭ ಇದೆ. ಆದರೆ ಇದಕ್ಕೆ ಸಕ್ಕರೆ ಬಳಸುವುದರಿಂದ ಮಧುಮೇಹಿಗಳು ದೂರವಿರುವುದು ಲೇಸು' ಎನ್ನುವುದು ಅವರ ಸಲಹೆ.

ದೂಧ್ ಸೋಡಾ ಮಾಡೋದು ಹೇಗೆ?

ಒಂದು ಲೋಟಕ್ಕೆ ನಿಂಬೆರಸ ಹಾಕಿ. ಇದಕ್ಕೆ ಜೀರಿಗೆ ಪುಡಿ, ಕಪ್ಪು ಉಪ್ಪು, ಸಕ್ಕರೆ ಬೆರೆಸಿ ಚೆನ್ನಾಗಿ ಮಿಕ್ಸ್ ಮಾಡಿದ ಬಳಿಕ ಪುದಿನಾ ಎಲೆ, ಸೋಡಾ ಹಾಗೂ ಐಸ್ ಕ್ಯೂಬ್‌ಗಳನ್ನು ಸೇರಿಸಿ. ಈಗ ಈ ಮಿಶ್ರಣಕ್ಕೆ ಹಾಲು ಹಾಕಿ ಚೆನ್ನಾಗಿ ಮಿಕ್ಸ್ ಮಾಡಿದರೆ ರುಚಿಯಾದ ದೂಧ್ ಸೋಡಾ ಸವಿಯಲು ಸಿದ್ಧ. ಇನ್ನೂ ಫ್ಲೇವರ್ ಬೇಕಿದ್ದರೆ ಗುಲಾಬಿ ಸಿರಪ್ ಸೇರಿಸಿ ಕುಡಿಯಬಹುದು.

ಅಂದ ಹಾಗೆ ರಣವೀರ್ ಸಿಂಗ್ ನಟನೆಯ ಧುರಂಧರ್ 2 ಸಿನಿಮಾ ಬಿಡುಗಡೆಯಾದ ಬಳಿಕ ದೇಶದಾದ್ಯಂತ ದೂಧ್ ಸೋಡಾ ಜನಪ್ರಿಯವಾಗಿದೆ. ಪಾಕಿಸ್ತಾನದಲ್ಲಿ ಅದರಲ್ಲೂ ಲಾಹೋರ್ ಮತ್ತು ಕರಾಚಿಯಲ್ಲಿ ಈ ಪಾನೀಯ ಬಹಳ ಜನಪ್ರಿಯ.

■

UASB LIBRARY



ಅಪರೂಪದ ಪಪ್ಪಾಯ

ಬಾಬು ಅಣ್ಣನ ತೋಟದಿಂದ ತಂದ ಪಪ್ಪಾಯಿ ಇದು. ತಂದಾಗ ಸ್ವಲ್ಪ ಗಟ್ಟಿ ಇತ್ತು. ಎರಡು ದಿನ ಬಿಟ್ಟು ಹೆಚ್ಚಿದಾಗ ಆಶ್ಚರ್ಯ ಕಾದಿತ್ತು. ಸಾಮಾನ್ಯವಾಗಿ ಪಪ್ಪಾಯಿ ಬೀಜ ಮೆಣಸಿನ ಕಾಳಿನ ಥರ ಇರುತ್ತದೆ. ಇಲ್ಲಿ ನೋಡಿದ್ರೆ ವಿಚಿತ್ರವಾದ ಬೀಜ ಹಣ್ಣಿಗೆ ಅಂಟಿಕೊಂಡಂತೆ ಕಂಡಿತು. ನೋಡಿದಾಕ್ಷಣ ಮೈ ಜುಂ ಎಂದಿತು. ಇದರ ಬಗ್ಗೆ ಸ್ವಲ್ಪ ತಿಳಿಯೋಣವೆಂದು ಗೂಗಲ್ ಮಿತ್ರನ ಮೊರೆ ಹೋದೆ.

ಈ ಚಿತ್ರದಲ್ಲಿ ಕಾಣುವಂತೆ ಪರಂಗಿ ಹಣ್ಣಿನ ಒಳಗೆ ಬೀಜಗಳ ಬದಲಾಗಿ ಬಿಳಿ ಬಣ್ಣದ ಹುರುಳಿಯಂತಹ ರಚನೆಗಳು ಇರುವುದು ಅಪರೂಪದ ವಿದ್ಯಮಾನ. ಪರಂಗಿ ಹಣ್ಣಿನೊಳಗೆ ಬೀಜಗಳು ಸರಿಯಾಗಿ ರೂಪುಗೊಳ್ಳುವ ಮೊದಲೇ ಮೊಳಕೆಯೊಡೆಯಲು ಪ್ರಾರಂಭಿಸಿದಾಗ ಇಂತಹ ರಚನೆಗಳು ಕಾಣಿಸಿಕೊಳ್ಳುತ್ತವೆ. ಅತಿಯಾದ ಆರ್ದ್ರತೆ ಮತ್ತು ಹೆಚ್ಚಿನ ತಾಪಮಾನವಿದ್ದಾಗ ಹಣ್ಣಿನ ಒಳಗೆ ಹಾರ್ಮೋನುಗಳ ವ್ಯತ್ಯಾಸವಾಗಿ ಈ ರೀತಿ ಸಂಭವಿಸಬಹುದು. ಕೆಲವೊಮ್ಮೆ ಹೂವುಗಳು ಫಲೀಕರಣಗೊಳ್ಳದೆ ಇದ್ದಾಗಲೂ ಕೂಡ ಹಣ್ಣಿನೊಳಗೆ ಇಂತಹ ಬದಲಾವಣೆಗಳು ಕಂಡುಬರುತ್ತವೆ.

ಇವು ಯಾವುದೇ ಪರಾವಲಂಬಿ ಜೀವಿಗಳಲ್ಲ. ಬದಲಾಗಿ ಹಣ್ಣಿನದ್ದೇ ಅಂಗಾಂಶಗಳಾಗಿವೆ. ಆದ್ದರಿಂದ ಈ ಹಣ್ಣು ತಿನ್ನಲು ಯೋಗ್ಯ. ಇವುಗಳು ಸಾಮಾನ್ಯ ಪರಂಗಿ ಹಣ್ಣಿನ ಬೀಜಗಳಂತೆ ಖಾರವಾಗಿರುವುದಿಲ್ಲ, ಆದರೆ ಅಮ್ಮೊಂದು ರುಚಿಯಾಗಿಯೂ ಇರುವುದಿಲ್ಲ. ಈ ಬಿಳಿ ರಚನೆಗಳನ್ನು ಮಣ್ಣಿನಲ್ಲಿ ನೆಟ್ಟರೆ ಅದರಿಂದ ಹೊಸ ಪರಂಗಿ ಗಿಡಗಳು ಬೆಳೆಯುವ ಸಾಧ್ಯತೆ ಇರುತ್ತದೆ. ಒಟ್ಟಾರೆಯಾಗಿ, ಇದು ಪ್ರಕೃತಿಯ ಒಂದು ವಿಸ್ಮಯವಾಗಿದ್ದು, ಹಣ್ಣು ಸೇವನೆಗೆ ಯೋಗ್ಯವಾಗಿದೆ.

—ಸುಮಾ ಕಳಸಾಪುರ, ಶಿವಮೊಗ್ಗ

ಆಹಾ ಅಡುಗೆ



ಕುಲ್ಫಿ ಸ್ಪೆಷಲ್

ಐಸ್‌ಕ್ರೀಂ, ಕುಲ್ಫಿ ಎಂದರೆ ಮಕ್ಕಳಿಗೆ ಎಂದಿಗೂ ಪ್ರಿಯವೇ. ಹಣ್ಣು, ಒಣಹಣ್ಣು, ಹಾಲು, ಮಖಾನ ಮುಂತಾದವುಗಳನ್ನು ಬಳಸಿ ರುಚಿಕರ ಕುಲ್ಫಿ ತಯಾರಿಸಿ ಸವಿಯಬಹುದು. ಇಲ್ಲಿದೆ ರೆಸಿಪಿ...

■ ಪ್ರಭಾ ಪಿ. ಶಾಸ್ತ್ರಿ

UASE LIBRARY

ಖರ್ಜೂರ ಕುಲ್ಫಿ

ಮಾಡೋದು ಹೇಗೆ?

ಖರ್ಜೂರ, ಬಾದಾಮಿ, ಗೋಡಂಬಿ, ಪಿಸ್ತಾವನ್ನು ಒಂದೂವರೆ ಕಪ್ ಹಾಲನ್ನು ಹಾಕಿ ನೆನೆಯಲು ಇಡಬೇಕು. ಒಂದು ಗಂಟೆ ನೆನೆದ ಮೇಲೆ ಮಿಕ್ಸಿ ಜಾರಿಗೆ ಹಾಕಿ ಹಾಲಿನ ಪುಡಿ, ಏಲಕ್ಕಿ ಪುಡಿ ಹಾಕಿ ನುಣ್ಣಗೆ ರುಬ್ಬಿ ಫ್ರೀಜರ್‌ನಲ್ಲಿ ಅರ್ಧ ಗಂಟೆ ಇಟ್ಟು ತೆಗೆಯಿರಿ. ಇದಕ್ಕೆ ಒಂದೂವರೆ ಕಪ್ ಹಾಲು ಹಾಕಿ ಮತ್ತೆ ಚೆನ್ನಾಗಿ ಬೀಟ್ ಮಾಡಿ ಕಪ್‌ಗೆ ಹಾಕಿ ಮರದ ಚಮಚ ಚುಚ್ಚಿ ಫ್ರೀಜರ್‌ನಲ್ಲಿ ಎಂಟು ಗಂಟೆ ಇಟ್ಟು ತೆಗೆಯಿರಿ. ಕುಲ್ಫಿಯನ್ನು ತಣ್ಣೀರಿನಲ್ಲಿ ಒಂದು ನಿಮಿಷ ಇಟ್ಟು ಕಪ್‌ನಿಂದ ತೆಗೆದು ಸವಿಯಿರಿ.

ಏನೇನು ಬೇಕು?

- ಖರ್ಜೂರ, ಬಾದಾಮಿ, ಗೋಡಂಬಿ ಹಾಗೂ ಪಿಸ್ತಾ ತಲಾ ಎಂಟೆಂಟು
- ಹಾಲು ಮೂರು ಕಪ್
- ಹಾಲಿನ ಪುಡಿ ಮೂರು ಚಮಚ
- ಏಲಕ್ಕಿ ಪುಡಿ ಸ್ವಲ್ಪ

ಪುದಿನಾ, ಬೆಲ್ಲದ ಕುಲ್ಫಿ

ಮಾಡೋದು ಹೇಗೆ?

ಪುದಿನಾ ಎಲೆ, ಶುಂಠಿ, ಚಾಟ್ ಮಸಾಲ, ರಾಕ್ ಸಾಲ್ಟ್, ಬೆಲ್ಲ ಎಲ್ಲವನ್ನೂ ಮಿಕ್ಸಿ ಜಾರಿಗೆ ಹಾಕಿ ನುಣ್ಣಗೆ ರುಬ್ಬಿ, ಎರಡು ಕಪ್ ನೀರು ಹಾಕಿ ಸೋಸಿಕೊಂಡು ಕಪ್‌ಗೆ ಹಾಕಿ. ಮರದ ಚಮಚ ಚುಚ್ಚಿ ಫ್ರೀಜರ್‌ನಲ್ಲಿ ಆರು ಗಂಟೆಗಳ ಕಾಲ ಇಟ್ಟು ತೆಗೆಯಿರಿ. ಕುಲ್ಫಿಯನ್ನು ತಣ್ಣೀರಿನಲ್ಲಿ ಒಂದು ನಿಮಿಷ ಇಟ್ಟು ಕಪ್‌ನಿಂದ ತೆಗೆದು ಸವಿಯಿರಿ.

ಏನೇನು ಬೇಕು?

- ಪುದಿನಾ ಎಲೆ ಐದು
- ಶುಂಠಿ ಒಂದು ತುಂಡು
- ಚಾಟ್ ಮಸಾಲ ಒಂದು ಚಮಚ
- ರಾಕ್ ಸಾಲ್ಟ್ ಸ್ವಲ್ಪ
- ಬೆಲ್ಲ ಪುಡಿ ಮೂರು ಚಮಚ







ಗುಲಾಬಿ ಕುಲ್ಫಿ

ಮಾಡೋದು ಹೇಗೆ?

ಗುಲಾಬಿ ಹೂವನ್ನು ತೊಳೆದುಕೊಂಡು, ಪಾತ್ರೆಗೆ ಅರ್ಧ ಕಪ್ ನೀರು ಹಾಕಿ, ಗುಲಾಬಿ ದಳ ಹಾಕಿ ಒಲೆಯ ಮೇಲೆ ಕುದಿಸಲು ಇಟ್ಟು, ಒಂದು ಕುದಿ ಬಂದ ಮೇಲೆ ಇಳಿಸಿ ಸೋಸಿಕೊಳ್ಳಬೇಕು. ಮಿಕ್ಸಿ ಜಾರಿಗೆ ಹಾಲು, ಗೋಡಂಬಿ, ಸಕ್ಕರೆ, ಹಾಲಿನ ಪುಡಿ ಹಾಕಿ ಚೆನ್ನಾಗಿ ರುಬ್ಬಿ. ಇದನ್ನು ಫ್ರೀಜರ್‌ನಲ್ಲಿ ಅರ್ಧ ಗಂಟೆ ಇಟ್ಟು ತೆಗೆದು, ಗುಲಾಬಿ ನೀರು ಹಾಕಿ ಮತ್ತೆ ಚೆನ್ನಾಗಿ ಬೀಟ್ ಮಾಡಿ, ಕಪ್‌ಗೆ ಹಾಕಿ ಮರದ ಚಮಚ ಚುಚ್ಚಿ ಫ್ರೀಜರ್‌ನಲ್ಲಿ ಎಂಟು ಗಂಟೆಗಳ ಕಾಲ ಇಟ್ಟು ತೆಗೆಯಿರಿ. ಕುಲ್ಫಿಯನ್ನು ತಣ್ಣೀರಿನಲ್ಲಿ ಒಂದು ನಿಮಿಷ ಇಟ್ಟು ಕಪ್‌ನಿಂದ ತೆಗೆದು ಸವಿಯಿರಿ.

ಏನೇನು ಬೇಕು?

- ಗುಲಾಬಿ ಹೂವು ನಾಲ್ಕು
- ಹಾಲು ಒಂದು ಕಪ್
- ಗೋಡಂಬಿ ಎಂಟು
- ಸಕ್ಕರೆ ಮೂರು ಚಮಚ
- ಹಾಲಿನ ಪುಡಿ ಎರಡು ಚಮಚ



ಹಾಲಿನ ಕುಲ್ಫಿ

ಏನೇನು ಬೇಕು?

- ಹಾಲಿನ ಪುಡಿ ಮೂರು ಚಮಚ
- ಹಾಲು ಕಾಲು ಲೀಟರ್
- ಕೊಬ್ಬರಿ ಸಿಪ್ಪೆ ತೆಗೆದು ಪುಡಿ ಮಾಡಿಕೊಂಡಿದ್ದು ಕಾಲು ಕಪ್
- ಹಾಲಿನ ಕೆನೆ ಕಾಲು ಕಪ್
- ವೆನಿಲಾ ಎಸೆನ್ಸ್ ನಾಲ್ಕು ಹನಿ
- ಸಕ್ಕರೆ ಎರಡು ಚಮಚ

ಮಾಡೋದು ಹೇಗೆ?
ಮಿಕ್ಸಿ ಜಾರಿಗೆ ಹಾಲು, ಹಾಲಿನ ಪುಡಿ, ಕೊಬ್ಬರಿ ಪುಡಿ, ಹಾಲಿನ ಕೆನೆ, ವೆನಿಲಾ ಎಸೆನ್ಸ್, ಸಕ್ಕರೆ ಎಲ್ಲವನ್ನೂ ಹಾಕಿ ನುಣ್ಣಗೆ ರುಬ್ಬಿಕೊಂಡು ಫ್ರೀಜರ್‌ನಲ್ಲಿ ಅರ್ಧಗಂಟೆ ಇಟ್ಟು ತೆಗೆದು ಮತ್ತೆ ಚೆನ್ನಾಗಿ ಬೀಟ್ ಮಾಡಿ, ಕಪ್‌ಗೆ ಹಾಕಿ ಮರದ ಕಡ್ಡಿ ಚುಚ್ಚಿ ಫ್ರೀಜರ್‌ನಲ್ಲಿ ಎಂಟು ಗಂಟೆಗಳ ಕಾಲ ಇಟ್ಟು ತೆಗೆಯಿರಿ. ಕುಲ್ಫಿಯನ್ನು ತಣ್ಣೀರಿನಲ್ಲಿ ಒಂದು ನಿಮಿಷ ಇಟ್ಟು ಕಪ್‌ನಿಂದ ತೆಗೆದು ಸವಿಯಿರಿ.

ಮಖಾನ ಕುಲ್ಫಿ

ಮಾಡೋದು ಹೇಗೆ?
ಹಾಲನ್ನು ಕಾಯಿಸಲು ಇಟ್ಟು ಒಂದೂವರೆ ಲೋಟಕ್ಕೆ ಬಂದ ಮೇಲೆ ಇಳಿಸಿ. ತಣ್ಣಗಾದ ಮೇಲೆ ಮಖಾನ, ಬಾದಾಮಿ, ಗೋಡಂಬಿಯನ್ನು ಪುಡಿ ಮಾಡಿ ಹಾಲಿಗೆ ಹಾಕಿ, ಕೇಸರಿಯನ್ನು ಹಾಲಲ್ಲಿ ನೆನೆಸಿ ಹಾಕಿ. ಎಲ್ಲವನ್ನೂ ಮಿಕ್ಸಿ ಜಾರಿಗೆ ಹಾಕಿ ನುಣ್ಣಗೆ ರುಬ್ಬಿಕೊಂಡು ಫ್ರೀಜರ್‌ನಲ್ಲಿ ಅರ್ಧಗಂಟೆ ಇಟ್ಟು ತೆಗೆದು ಮತ್ತೆ ಚೆನ್ನಾಗಿ ಬೀಟ್ ಮಾಡಿ, ಕಪ್‌ಗೆ ಹಾಕಿ ಮರದ ಚಮಚ ಚುಚ್ಚಿ ಫ್ರೀಜರ್‌ನಲ್ಲಿ ಎಂಟು ಗಂಟೆಗಳ ಕಾಲ ಇಟ್ಟು ತೆಗೆಯಿರಿ. ಕುಲ್ಫಿಯನ್ನು ತಣ್ಣೀರಿನಲ್ಲಿ ಒಂದು ನಿಮಿಷ ಇಟ್ಟು ಕಪ್‌ನಿಂದ ತೆಗೆದು ಸವಿಯಿರಿ.

ಏನೇನು ಬೇಕು?

- ಮಖಾನ ಹದಿನೈದು
- ಗೋಡಂಬಿ, ಬಾದಾಮಿ ತಲಾ ಐದೈದು
- ಹಾಲು ಎರಡು ದೊಡ್ಡ ಲೋಟ
- ಕೇಸರಿ, ಸಕ್ಕರೆ ಎರಡು ಚಮಚ



UASB LIBRARY



ಮಾವಿನ ಹಣ್ಣು ಕುಲ್ಫಿ

ಮಾಡೋದು ಹೇಗೆ?
ಹಾಲಿನಲ್ಲಿ ಖರ್ಜೂರ, ಗೋಡಂಬಿ ಬೇಯಿಸಿಕೊಂಡು ತಣ್ಣಗಾದ ಮೇಲೆ ಮಿಕ್ಸಿ ಜಾರಿನಲ್ಲಿ ಹಾಕಿ ಚೆನ್ನಾಗಿ ಬೀಟ್ ಮಾಡಿ. ಅರ್ಧ ಗಂಟೆ ಫ್ರೀಜರ್‌ನಲ್ಲಿ ಇಡಿ. ನಂತರ ತೆಗೆದು ಮಿಕ್ಸಿ ಜಾರಿಗೆ ಹಾಕಿ, ಮಾವಿನ ಹಣ್ಣಿನ ಹೋಳುಗಳನ್ನು ಹಾಕಿ, ಸಕ್ಕರೆ, ಏಲಕ್ಕಿ ಪುಡಿ ಹಾಕಿ ಚೆನ್ನಾಗಿ ಬೀಟ್ ಮಾಡಿ. ಕಪ್‌ಗೆ ಹಾಕಿ ಕಡ್ಡಿ ಚುಚ್ಚಿ ಎಂಟು ಗಂಟೆ ಫ್ರೀಜರ್‌ನಲ್ಲಿ ಇಟ್ಟು ತೆಗೆಯಿರಿ.

ಏನೇನು ಬೇಕು?

- ಮಾವಿನ ಹಣ್ಣು ಒಂದು
- ಹಾಲು ಅರ್ಧ ಲೀಟರ್
- ಗೋಡಂಬಿ ಆರು
- ಖರ್ಜೂರ ಮೂರು
- ಸಕ್ಕರೆ ಎರಡು ಚಮಚ
- ಏಲಕ್ಕಿ ಪುಡಿ ಸ್ವಲ್ಪ



ಮಂಡಗದ್ದೆ ಅರಣ್ಯ ಇಲಾಖೆ ಅತಿಥಿಗೃಹ ಆವರಣದಲ್ಲಿ ಬೆಳೆದ ಮರದೊಂದಿಗೆ ಅಪ್ಪಗೆಯ ಖುಷಿ

ಲಕ್ಷ್ಮಣ ಬಿತ್ತಿದ ಬೀಜ ಹೆಮ್ಮರವಾದ ಕ್ಷಣ

■ ಉಮೇಶಭಟ್ಟ ಪಿ.ಎಚ್

ದಕ್ಷಿಣ ಅಮೆರಿಕದಿಂದ 1968ರಲ್ಲಿ ತರಿಸಿದ್ದ ಆ ಬೀಜ ಬಿತ್ತಿದಾಗ ಅದು ಇಷ್ಟು ಎತ್ತರದ ಮರವಾಗುತ್ತದೆ ಅಂದುಕೊಂಡೇ ಇರಲಿಲ್ಲ. ಮೂರು ದಶಕಕ್ಕೂ ಹೆಚ್ಚು ಕಾಲ ಅರಣ್ಯ ಇಲಾಖೆಯಲ್ಲಿ ನಾನಾ ಭಾಗಗಳಲ್ಲಿ ಕೆಲಸ ಮಾಡಿದ್ದಾರೆ, ಅಲ್ಲೆಲ್ಲಾ ಬೀಜ ಬಿತ್ತಿ ಬಂದಿದ್ದಾರೆ. ಕೆಲವು ಮರಗಳು ಉರುಳಿ ಹೋದರೆ, ಇನ್ನೂ ಹಲವು ಸಮೃದ್ಧವಾಗಿ ಬೆಳೆದಿವೆ. ಆದರೆ ಮೊದಲು ಬಿತ್ತಿದ್ದ ಬೀಜವೊಂದು ಮುಗಿಲೆತ್ತರಕ್ಕೆ ಮರವಾಗಿ ಬೆಳೆದಿರುವುದನ್ನು ಕಂಡು ಅವರಿಗೆ ನಂಬಲಾಗಲಿಲ್ಲ, ಅದನ್ನು ಬಾಚಿ ತಬ್ಬಿಕೊಂಡರು. ಮರಕ್ಕೆ ಪ್ರೀತಿಯಿಂದ ಮುತ್ತಿಕ್ಕಿದರು. ಸ್ವಂತ ಮಗನನ್ನೇ ತಬ್ಬಿಕೊಂಡ ಖುಷಿ ಅವರ ಮುಖದಲ್ಲಿ ಕಾಣಿಸುತ್ತಿತ್ತು.

ಕರ್ನಾಟಕದ ಅರಣ್ಯ ಇಲಾಖೆಯಲ್ಲಿ ಜನಪರ ಸೇವೆಯಿಂದ ತಮ್ಮದೇ ಹೆಸರು ಹೊಂದಿರುವ ಎ.ಸಿ. ಲಕ್ಷ್ಮಣ ಅವರು ಐದು ವರ್ಷದ ನಂತರ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಮಂಡಗದ್ದೆ ಅರಣ್ಯ ಅತಿಥಿಗೃಹದ ಆವರಣ ಒಳಹೊಕ್ಕಾಗ ಅವರನ್ನು ಸ್ವಾಗತಿಸಿದ್ದು, ಆಗ ಜತೆಗೆ ಕೆಲಸ ಮಾಡಿದ್ದ ಸಿಬ್ಬಂದಿ. ಜತೆಗೆ ಮುಗಿಲೆತ್ತರಕ್ಕೆ ಬೆಳೆದ ಪದರ ಹಲಗೆ ಮರ. ಅದನ್ನು ಅಮೆರಿಕದಲ್ಲಿ 'ಕಾಯ ಅಂಥೊತೆಕಾ' ಎನ್ನುವ ಹೆಸರಿನಲ್ಲಿ ಕರೆಯಲಾಗುತ್ತದೆ. ವಿಶ್ವದ ಅತ್ಯುತ್ತಮ ಫ್ಲೈವುಡ್ ಮರದಲ್ಲಿ ಇದೂ ಒಂದು.

'ಆಗ ಶಿವಮೊಗ್ಗದ ಉಪ ಅರಣ್ಯ ಸಂರಕ್ಷಣಾಧಿಕಾರಿಯಾಗಿದ್ದ ಶಾಮಸುಂದರ್ ಅವರೊಂದಿಗೆ ನೀವು ಬಿತ್ತಿದ್ದು ಈಗ ಹೇಗೆ ಬೆಳೆದಿದೆ ನೋಡಿ' ಎಂದು ಆಗ ವಲಯ ಅರಣ್ಯಾಧಿಕಾರಿಯಾಗಿದ್ದ ಲಕ್ಷ್ಮಿ ನಾರಾಯಣ ಭಟ್ಟ ಅವರು ನೆನಪಿಸಿದರು. ಮರದ ಹತ್ತಿರ ಹೋಗಿ ಅದು ಬೆಳೆದ ಪರಿಯನ್ನು ನೋಡಿ ಖುಷಿಗೊಂಡರು ಲಕ್ಷ್ಮಣ.

ಆಗ ಕೆಲವೇ ಬೀಜವನ್ನು ತರಿಸಲಾಗಿತ್ತು. ನಾಲ್ಕು ಬೀಜ ಮಾತ್ರ ಶಿವಮೊಗ್ಗಕ್ಕೆ ಸಿಕ್ಕಿದ್ದವು. ಅದರಲ್ಲಿ ಮೂರನ್ನು ಶಾಮಸುಂದರ್ ಅವರು ಭೂಮಿಗೆ ಹಾಕಿದರೆ, ಆಗ ಶಿವಮೊಗ್ಗದ ಸಹಾಯಕ ಸಂರಕ್ಷಣಾಧಿಕಾರಿಯಾಗಿದ್ದ ಯುವ ಐಎಫ್ಎಸ್ ಅಧಿಕಾರಿ ಲಕ್ಷ್ಮಣ ಅವರಿಗೆ ಸಿಕ್ಕ ಒಂದೇ ಬೀಜವನ್ನು ಅಲ್ಲಿ ನೆಟ್ಟು ದೊಡ್ಡದಾಗಿ ಬೆಳಿ ಎಂದು ಹಾರೈಸಿದ್ದರು. ಅಲ್ಲಿಂದ ಬಡ್ತಿ ಪಡೆದ ಲಕ್ಷ್ಮಣ ಅವರು ಬೇರೆ ಬೇರೆ ಕಡೆ ವರ್ಗಗೊಂಡು ಅರಣ್ಯ ಇಲಾಖೆಯ ಕಾರ್ಯದರ್ಶಿಯಾಗಿ 2000ರಲ್ಲಿ ನಿವೃತ್ತರಾದರು. ಕೊಡಗು, ಮೈಸೂರು, ಚಾಮರಾಜನಗರ, ಚಿಕ್ಕಮಗಳೂರು, ಬಳ್ಳಾರಿ, ಶಿವಮೊಗ್ಗ ಜಿಲ್ಲೆಯ ಹಲವು ಭಾಗದಲ್ಲಿ ಕೆಲಸ ಮಾಡಿದಾಗ ವಿವಿಧ ಜಾತಿಯ ಸಸಿಗಳನ್ನು ನೆಟ್ಟರು. ಅವುಗಳೆಲ್ಲಾ ಬೆಳೆದಿವೆ. ಆದರೆ ಮೊದಲು ಬಿತ್ತಿದ್ದು ಇದೇ ಆದುದರಿಂದ ಅದೇನೋ ಅಭಿಮಾನ ಇತ್ತು.

ಬಳ್ಳಾರಿಗೆ ಕುಟುಂಬದೊಂದಿಗೆ ಹೊರಟಿದ್ದ ಲಕ್ಷ್ಮಣ ಅವರಿಗೆ ಮಂಡಗದ್ದೆ ಕಡೆ ಹೋಗುವ ಮನಸಾಯಿತು. ಮಂಡಗದ್ದೆ ಅತಿಥಿಗೃಹ ಆವರಣ ಪ್ರವೇಶಿಸಿದವರಿಗೆ ತಾವು ಬಿತ್ತಿದ ಬೀಜ ಹೆಮ್ಮರವಾಗಿ ಬೆಳೆದ ದರ್ಶನವಾಯಿತು. ಜತೆಗೆ ಪತ್ನಿ ಸಾವಿತ್ರಿ, ಮಗ ಸತ್ಯಜಿತ್ ಕೂಡ ಇದ್ದರು. ಅವರಿಗೂ ಅಪ್ಪನ ಮರದ ಪ್ರೀತಿ ಕಂಡು ಖುಷಿಯೋ ಖುಷಿ.

ಈ ಮರ ಭಾರತದ್ದಲ್ಲ. ಅದು ದಕ್ಷಿಣ ಅಮೆರಿಕದ ಪೆರು ಕೋಸ್ಟ್‌ನಲ್ಲಿ ಬೆಳೆಯಲಾಗುತ್ತದೆ. ಅದನ್ನು ಫ್ಲೈವುಡ್‌ಗೆ ಬಳಕೆ ಮಾಡಲಾಗುತ್ತದೆ. ಅದರ ಗಾತ್ರ, ವಿಶೇಷತೆಯಿಂದ ಗಮನ ಸೆಳೆಯುತ್ತದೆ. 50 ವರ್ಷಕ್ಕೂ ಹೆಚ್ಚು ಕಾಲ ಬಾಳುತ್ತದೆ. 6ರಿಂದ 8 ಅಡಿ ಗಾತ್ರದ ಮರವನ್ನು ಕಡಿದು ಫ್ಲೈವುಡ್ ಬಳಸಲಾಗುತ್ತದೆ. ಹಾಗೆಯೇ ಬಿಟ್ಟರೆ 15 ಅಡಿ ಅಗಲ, 45ರಿಂದ 48 ಮೀಟರ್ ಎತ್ತರ ಬೆಳೆಯುತ್ತದೆ. ಅರಣ್ಯ ಇಲಾಖೆಯ ಸಂಶೋಧನೆಯ ಭಾಗವಾಗಿ ಕರ್ನಾಟಕದ ಕೆಲವು ಕಡೆಗಳಲ್ಲಿ ಕಾಯ ಅಂಥೊತೆಕಾ ಬೀಜವನ್ನು ಬಿತ್ತನೆ ಮಾಡಲಾಗಿದ್ದು, ಅಲ್ಲಲ್ಲಿ ಇದು ಇನ್ನೂ ಉಳಿದುಕೊಂಡಿದೆ. ಕೆಲವು ಕಡೆ ನಶಿಸಿ ಹೋಗಿವೆ. ಇದು ಅರಣ್ಯ ಇಲಾಖೆ ಸುಪರ್ದಿಯಲ್ಲಿರುವುದರಿಂದ ಈಗಲೂ ಗಟ್ಟಿಯಾಗಿದೆ.



ಫ್ಲೈವುಡ್ ಮರಗಳಿಗೆ ವಿಶ್ವದಲ್ಲಿ ಎಲ್ಲಿಲ್ಲದ ಬೇಡಿಕೆ. 150ಕ್ಕೂ ಹೆಚ್ಚು ವಿವಿಧ ಜಾತಿಯ ಫ್ಲೈವುಡ್ ಮರಗಳು ಜಗತ್ತಿನಾದ್ಯಂತ ಇವೆ. ಭಾರತದಲ್ಲಿ 60 ಜಾತಿಯ ಫ್ಲೈವುಡ್ ಮರ ಸಿಕ್ಕಬಹುದು. ಕರ್ನಾಟಕದ ಪಶ್ಚಿಮ ಘಟ್ಟದಲ್ಲಿ ಫ್ಲೈವುಡ್ ಜಾತಿಯ ಮರಗಳಿವೆ. ಅರಣ್ಯ ಪ್ರದೇಶದಲ್ಲಿ ಮಾತ್ರವಲ್ಲದೇ ಜಮೀನು ಬದುಗಳ ಮೇಲೆ ಫ್ಲೈವುಡ್ ಮರಗಳನ್ನು ಈಗ ಬೆಳೆಸಲಾಗುತ್ತಿದೆ.

ಲಕ್ಷ್ಮಣ ಹೆಸರಲ್ಲಿ ಬೆತ್ತ: ಲಕ್ಷ್ಮಣ ಅವರು ಇಲಾಖೆಯಲ್ಲಿದ್ದಾಗ 1980ರಲ್ಲಿ ಪಶ್ಚಿಮ ಘಟ್ಟದ ಬೆತ್ತದ ಮೇಲೆ ಸಂಶೋಧನೆ ಕೈಗೊಂಡಿದ್ದರು. ಒಂದು ಹೊಸ ಬೆತ್ತದ ತಳಿ ಗುರುತಿಸಿದ್ದರಿಂದ ಅವರ ಹೆಸರನ್ನೇ ಬೆತ್ತಕ್ಕೆ ನೀಡಲಾಗಿದೆ. ಕೆಲಮಸ್ ಲಕ್ಷ್ಮಣಿ ಎಂದು ಕರೆಯುವ ಬೆತ್ತ ಈಗಲೂ ಬಳಕೆಯಲ್ಲಿದೆ.

ಚಿತ್ರಗಳು: ಶ್ರೀಧರ ಹೆಗಡೆ, ಶಿವಮೊಗ್ಗ

UASB LIBRARY

ತೆಂಗಿನಗರಿಯಿಂದ ವೇದಿಕೆ ಅಲಂಕಾರ

ಶಿವಮೊಗ್ಗದ ರಂಗಧಾಮದಲ್ಲಿ ಒಂದು 'ಸ್ನೇಹಕೂಟ' ಆಯೋಜನೆಯಾಗಿತ್ತು. ವೇದಿಕೆಯಲ್ಲಿ ಮೊದಲಿಗೆ ಆಕರ್ಷಿಸಿದ್ದು ಹಸುರು ಮತ್ತು ಬಿಳಿ ಬಣ್ಣದ ತಾಜಾ ತೆಂಗಿನಗರಿಗಳಿಂದ ಮಾಡಲಾದ ದೀಪದ ಗೂಡು. ಅದೇ ಹಸುರು ತೆಂಗಿನಗರಿಗಳಿಂದ ರಚನೆಯಾದ ಚಕ್ರದ ರಚನೆಗಳು. ಇವನ್ನು ತಯಾರಿಸಿದ್ದು ಉಂಚಳ್ಳಿಯ ಸತೀಶ್ ಭಟ್ ಎಂಬುವರು. ವೃತ್ತಿಯಿಂದ ಕೃಷಿಕರಾದ ಅವರಿಗೆ ಹೀಗೆ ತೆಂಗಿನಗರಿಯಿಂದ ವೇದಿಕೆ ಅಲಂಕಾರ, ಮದುವೆ ಮಂಟಪ ಮಾಡುವುದು ಒಂದು ಕಲಾವೃತ್ತಿ. ನೈಸರ್ಗಿಕ ವಸ್ತುಗಳನ್ನೇ ಬಳಸಿಕೊಂಡು ವೇದಿಕೆಯನ್ನು ಅತ್ಯಾಕರ್ಷಕವಾಗಿ ಸಿದ್ಧಪಡಿಸುವುದರಲ್ಲಿ ನಿಪುಣರು. ಚಿತ್ರಕಲೆಯಲ್ಲಿ ಡಿಪ್ಲೊಮಾ ಮಾಡಿಕೊಂಡು, ಇದೀಗ ಅನಿವಾರ್ಯವಾಗಿ ಪಾರಂಪರಿಕ ಕೃಷಿಯನ್ನೂ ಮಾಡುತ್ತ, ಕಲಾಚಟುವಟಿಕೆಯಲ್ಲೂ ಸಾಧನೆ ಮಾಡುತ್ತಿರುವ ಉತ್ಸಾಹಿ ಸತೀಶ್ ಭಟ್ ಉಂಚಳ್ಳಿ. ಹಳ್ಳಿಮನೆಯಲ್ಲಿ ನಡೆವ ಮದುವೆ, ನಿಶ್ಚಿತಾರ್ಥ, ಯಾವುದೇ ದೊಡ್ಡ ಸಮಾರಂಭ, ಕಾರ್ಯಕ್ರಮಗಳಲ್ಲಿ ಸತೀಶ್ ಅವರು ಮಾಡುವ ನೈಸರ್ಗಿಕ ಅಲಂಕಾರ ವಿಶೇಷವಾಗಿ ಗಮನಸೆಳೆಯುತ್ತದೆ. ತೆಂಗಿನಗರಿ ಕಂಡರೆ ಅದರಿಂದ ಬಗೆಬಗೆಯ ಕರಕುಶಲ ತಯಾರಿಕೆ ಮಾಡುವ ಹವ್ಯಾಸ ಹೊಂದಿರುವ ಅವರು ಎಲ್ಲಿಗೇ ಹೋದರೂ ಈ ಕಲಾವೃತ್ತಿಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಇಂತಹ ಕಲೆಯನ್ನು ಯುವಜನತೆ ಕಲಿತುಕೊಳ್ಳಲು ಮುಂದಾಗಬೇಕಿದೆ. ಅದಾಗದಿದ್ದರೆ ಕಲೆ ಅವರೊಂದಿಗೇ ನಶಿಸಿ ಹೋಗುವ ಸಾಧ್ಯತೆಯೂ ಇರುತ್ತದೆ.

–ಜೆ.ಎಂ. ಬೊಮ್ಮಳ್ಳಿ







ಉದ್ಯಾನದಲ್ಲೊಂದು ಜೋಕಾಲಿ

ಈಚೆಗೆ ಬೆಳಿಗ್ಗೆ 10 ಗಂಟೆ ಸುಮಾರಿಗೆ, ಬೆಂಗಳೂರಿನ ಉದ್ಯಾನವೊಂದರಲ್ಲಿ ವಾಕ್ ಮಾಡುತ್ತಿದ್ದೆ. ದಟ್ಟ ಮರಗಳ ನೆರಳನಡಿಯ ಪುಟ್ಟ ಮಂಟಪವೊಂದರ ತಾರಸಿಗೆ ಜೋಕಾಲಿಯಂತೆ ಇಳಿಬಿಟ್ಟಿದ್ದ ಜೋಳಿಗೆಯನ್ನು ಕಂಡೆ. ಅದರೊಳಗೆ ಒಂದು ವರ್ಷದ ಪುಟ್ಟ ಕಂದಮ್ಮನೊಂದು ಪ್ರಕೃತಿಯ ನಡುವೆ ಸುಖಕರ ನಿದ್ರೆಯಲ್ಲಿತ್ತು. ಆ ದೃಶ್ಯ ಮನಕೆ ಮುದ ನೀಡಿತು. ಮಗುವಿನ ತಾಯಿ ಅಲ್ಲೇ ಹತ್ತಿರದ ಬೆಂಚ್ ಮೇಲೆ ಕುಳಿತು ಲ್ಯಾಪ್‌ಟಾಪ್‌ನಲ್ಲಿ ಮಗ್ನರಾಗಿ, ಆಗಾಗ ಎದ್ದು ಜೋಳಿಗೆ ತೂಗುತ್ತಿದ್ದರು.

ಬೆಂಗಳೂರಿನಲ್ಲಿ ಇಂತಹ ದೃಶ್ಯವನ್ನು ಕಲ್ಪಿಸಿಕೊಳ್ಳುವುದು ಬಹಳ ಅಪರೂಪದ ಸಂಗತಿ. ಮಗುವಿನ ಸರ್ವತೋಮುಖ ಬೆಳವಣಿಗೆಗೆ ಪ್ರಕೃತಿಯೊಂದಿಗೆ ಬೆಳೆಯುವುದು ಅತ್ಯುತ್ತಮ ಮಾರ್ಗವಾಗಿದೆ. ನಮ್ಮ ಪೂರ್ವಜರು ತಾಯಿಯ ಸೀರೆಯಿಂದ ಮಾಡಿದ ಜೋಳಿಗೆ ಮಗುವಿನ ಸುಖನಿದ್ರೆಗೆ, ಅದರ ತಲೆ ದುಂಡಗಾಗುವ ಪ್ರಕ್ರಿಯೆಗೆ ಮತ್ತು ಆರೋಗ್ಯಕರ ಬೆಳವಣಿಗೆಗೆ ಅತಿ ಉತ್ತಮ ಎಂದು ಹೇಳುತ್ತಿದ್ದರು. ಹಳ್ಳಿ ಮನೆಗಳಲ್ಲಿ ಈಗಲೂ ಈ ಪದ್ಧತಿ ಅಲ್ಲಲ್ಲಿ ಕಾಣಸಿಗುತ್ತದೆಯಾದರೂ ನಗರ ಜೀವನದಿಂದ ಕಣ್ಮರೆಯಾಗಿದೆ.

–ಪ್ರಮೋದ್ ಕುಲಕರ್ಣಿ, ಬೆಂಗಳೂರು

ಸರ್ಕಾರಿ ಕಚೇರಿಗಳಲ್ಲಿ ಹಸುರು ಪ್ರೀತಿ

ಪುತ್ತೂರು ತಾಲ್ಲೂಕು ಆಡಳಿತ ಸೌಧದ ಒಂದನೆಯ ಮಹಡಿ ಎಡಬದಿಯಲ್ಲಿ ತಾಲ್ಲೂಕು ಭೂಮಾಪನ ಇಲಾಖೆ ಕಚೇರಿ ಹಸಿರಿನ ಸ್ವಾಗತ ಮಾಡುತ್ತಿದೆ. ಒಳಾಂಗಣ ಅಲಂಕಾರಕ್ಕೆ ಬಳಸುವ ವೈವಿಧ್ಯಮಯ 42 ಗಿಡಗಳು, ಬಳ್ಳಿಗಳು ಆಕರ್ಷಕವಾಗಿ ಸಾರ್ವಜನಿಕರನ್ನು ಗಮನಸೆಳೆಯುತ್ತಿವೆ. ಸರ್ಕಾರಿ ಕಚೇರಿಗಳಲ್ಲಿ ಶುಷ್ಕ ವಾತಾವರಣ ಕಂಡಿರಬಹುದು. ಆದರೆ ಹಸುರು ಪ್ರೀತಿ, ವಾತಾವರಣ ಕಂಡಿರುವುದು ನಿಜಕ್ಕೂ ಖುಷಿಯ ವಿಚಾರ. ನಿತ್ಯವೂ ಈ ಗಿಡ ಬಳ್ಳಿಗಳಿಗೆ ಕಚೇರಿಯ ಭೂಮಾಪಕರು, ಸಿಬ್ಬಂದಿವರ್ಗದವರು ನೀರುಣಿಸುತ್ತಾರೆ. ಸಹೋದ್ಯೋಗಿಗಳ ಸಹಕಾರದಿಂದ ಸಿಬ್ಬಂದಿ ಕೆ. ಪ್ರಮೋದಕುಮಾರ ಎಂಬುವರು 2021ರಿಂದಲೂ ಈ ಗಿಡಗಳನ್ನು ಪೋಷಿಸುತ್ತಿದ್ದಾರೆ.

–ಎಸ್.ಎನ್. ಅಮೃತ, ಪುತ್ತೂರು

UASB LIBRARY

ಮಾವಿನಹಣ್ಣಿನ ಪಡ್ಡು, ಹೋಳಿಗೆ





ಮಾವಿನ ಹಣ್ಣಿನ ಕಾಲದಲ್ಲಿ ಅಡುಗೆ ಮನೆಯಲ್ಲಿ ಇದರ ಘಮ, ಸ್ವಾದ ಆಸ್ವಾದಿಸದೆ ಇರುವವರೇ ವಿರಳ. ಮಾವಿನ ಹಣ್ಣಿನಿಂದ ಹಲವು ರುಚಿಕರ ಅಡುಗೆಯನ್ನೂ ಮಾಡಿ ಸವಿಯಬಹುದು. ಇಲ್ಲಿದೆ ಮಾವಿನ ಹಣ್ಣಿನ ವೈವಿಧ್ಯಮಯ ರೆಸಿಪಿ.

■ ಸುಧಾ ಪ್ರಭಾಕರ್

UASB LIBRARY

ಸಿಹಿ ಪಡ್ಡು ರುಚಿ



ಏನೇನು ಬೇಕು?

- ಮಾವಿನಹಣ್ಣು ಒಂದು
- ಅಕ್ಕಿ ಅರ್ಧ ಕೇಜಿ
- ತೆಂಗಿನತುರಿ ಮೂರು ಚಮಚ
- ತುಪ್ಪ ಒಂದು ಬಟ್ಟಲು
- ಬೆಲ್ಲದ ಪುಡಿ ಒಂದು ಬಟ್ಟಲು

ಮಾಡೋದು ಹೇಗೆ?

ಅಕ್ಕಿಯನ್ನು ಚೆನ್ನಾಗಿ ತೊಳೆದು ಎರಡು ಗಂಟೆಗಳ ಕಾಲ ನೆನೆಸಿ. ಈ ಅಕ್ಕಿಗೆ ಮಾವಿನ ಹಣ್ಣಿನ ತಿರುಳು, ಬೆಲ್ಲದ ಪುಡಿ, ಕೊಬ್ಬರಿ ತುರಿ ಸೇರಿಸಿ ನುಣ್ಣಗೆ ರುಬ್ಬಿ. ಪಡ್ಡು ಮಾಡುವ ಕಾವಲಿಗೆ ಎಣ್ಣೆ ಸವರಿ, ಚೆನ್ನಾಗಿ ಬಿಸಿಯಾದ ನಂತರ ರುಬ್ಬಿದ ಹಿಟ್ಟನ್ನು ಹಾಕಿ ಬೇಯಿಸಿ. ನಂತರ ಮತ್ತೊಂದು ಬದಿಗೆ ತಿರುವಿ ಹಾಕಿ ಬೇಯಿಸಿದರೆ ಮೃದುವಾದ ಪಡ್ಡು ತುಪ್ಪದೊಂದಿಗೆ ಸವಿಯಲು ಸಿದ್ಧ.



ಮಾವಿನಹಣ್ಣಿನ ಕೇಸರಿಭಾತ್

ಏನೇನು ಬೇಕು?

- ರವೆ ಎರಡು ಕಪ್
- ತುಪ್ಪ ಮೂರು ಚಮಚ
- ಸಕ್ಕರೆ ಕಾಲು ಕೇಜಿ
- ಮಾವಿನ ಹಣ್ಣು ಒಂದು
- ಏಲಕ್ಕಿ ಪುಡಿ ಸ್ವಲ್ಪ
- ಗೋಡಂಬಿ, ದ್ರಾಕ್ಷಿ
- ನೀರು ಎರಡು ದೊಡ್ಡ ಲೋಟ

ಮಾಡೋದು ಹೇಗೆ?

ರವೆಯನ್ನು ಘಮ್ಮನ್ನುವಂತೆ ಹುರಿಯಿರಿ. ಬಾಣಲೆಯೆಲ್ಲಿ ನೀರು, ಸಕ್ಕರೆ, ಮಾವಿನಹಣ್ಣಿನ ತಿರುಳು ಹಾಕಿ ಕುದಿಸಿ. ಇದು ಕುದಿಯುತ್ತಿರುವಾಗ ಉರಿ ಸಣ್ಣ ಮಾಡಿ ನಿಧಾನವಾಗಿ ರವೆಯನ್ನು ಹಾಕುತ್ತ ತುಪ್ಪ ಸೇರಿಸಿ ಗಂಟಿಲ್ಲದಂತೆ ಕೈಯಾಡಿಸಿ. ಮುಚ್ಚಳ ಮುಚ್ಚಿ ಚೆನ್ನಾಗಿ ಬೇಯಿಸಿ. ತುಪ್ಪದಲ್ಲಿ ಕರಿದ ದ್ರಾಕ್ಷಿ, ಗೋಡಂಬಿ, ಏಲಕ್ಕಿ ಪುಡಿ ಹಾಕಿ ಚೆನ್ನಾಗಿ ಮಿಕ್ಸ್ ಮಾಡಿ.



ಮಾವಿನಹಣ್ಣಿನ ಸೀಕರಣೆ

ಏನೇನು ಬೇಕು?

- ಮಾವಿನಹಣ್ಣು ಅರ್ಧ ಕೇಜಿ
- ಸಕ್ಕರೆ ಅಥವಾ ಬೆಲ್ಲ ಕಾಲು ಕೇಜಿ
- ಏಲಕ್ಕಿಪುಡಿ ಸ್ವಲ್ಪ

ಮಾಡೋದು ಹೇಗೆ?
ಮಾವಿನಹಣ್ಣನ್ನು ಸಿಪ್ಪೆ ತೆಗೆದು ರಸ ಹಿಂಡಿ. ಇದಕ್ಕೆ ಏಲಕ್ಕಿಪುಡಿ, ಸಕ್ಕರೆ ಅಥವಾ ಬೆಲ್ಲ ಸೇರಿಸಿ ಚೆನ್ನಾಗಿ ಕೈಯಾಡಿಸಿ. ಚಪಾತಿ ಅಥವಾ ಪೂರಿಯೊಂದಿಗೆ ಸೇವಿಸಬಹುದು.



ಮಾವಿನಹಣ್ಣಿನ ದೋಸೆ

ಏನೇನು ಬೇಕು?

- ಒಂದು ಮಾವಿನಹಣ್ಣು
- ಆಕ್ಕಿ ಅರ್ಧ ಕೇಜಿ
- ತೆಂಗಿನ ತುರಿ ಒಂದು ಬಟ್ಟಲು
- ಬೆಲ್ಲದಪುಡಿ ಒಂದು ಬಟ್ಟಲು

ಮಾಡೋದು ಹೇಗೆ?
ಅಕ್ಕಿಯನ್ನು ಚೆನ್ನಾಗಿ ತೊಳೆದು ಒಂದೂವರೆ ಗಂಟೆ ನೆನೆಸಿ ಮಾವಿನಹಣ್ಣಿನ ತಿರುಳು, ತೆಂಗಿನ ತುರಿ ಸೇರಿಸಿ ನುಣ್ಣಗೆ ರುಬ್ಬಿ. ಈ ಮಿಶ್ರಣಕ್ಕೆ ಬೆಲ್ಲ ಸೇರಿಸಿ ಚೆನ್ನಾಗಿ ಕೈಯಾಡಿಸಿ. ಒಲೆಯ ಮೇಲೆ ತವಾ ಇಟ್ಟು ದೋಸೆ ಹಾಕಿ. ಬೇಯುವಾಗ ತುಪ್ಪ ಹಾಕಿ ಎರಡು ಬದಿ ತಿರುವಿ ಬೇಯಿಸಿದರೆ ಅತ್ಯಂತ ರುಚಿಕರ ಮಾವಿನಹಣ್ಣಿನ ದೋಸೆ ರೆಡಿ.



ಆಹಾ ಹೋಳಿಗೆ

ಏನೇನು ಬೇಕು?

- ಮಾವಿನಹಣ್ಣು ಒಂದು
- ಮೈದಾಹಿಟ್ಟು ಒಂದು ಕಪ್
- ಚಿರೋಟಿ ರವೆ ಒಂದು ಕಪ್
- ಎಣ್ಣೆ ಅರ್ಧ ಬಟ್ಟಲು
- ಬೆಲ್ಲದ ಪುಡಿ ಅರ್ಧ ಬಟ್ಟಲು

ಮಾಡೋದು ಹೇಗೆ?
ಮೈದಾಹಿಟ್ಟು ಹಾಗೂ ಚಿರೋಟಿ ರವೆಯನ್ನು ಚಪಾತಿ ಹಿಟ್ಟಿಗಿಂತ ಮೃದುವಾಗಿ ಕಲಸಿ. ಎರಡು ಚಮಚ ಎಣ್ಣೆ ಹಾಕಿ ನಾದಿ ಅರ್ಧ ಗಂಟೆ ಮುಚ್ಚಿಡಿ. ಮಾವಿನ ಹಣ್ಣಿನ ತಿರುಳು, ಅರ್ಧ ಕಪ್ ಹುರಿದ ಚಿರೋಟಿ ರವೆ, ಕೊಬ್ಬರಿ ಪುಡಿ ಮೂರನ್ನು ಸೇರಿಸಿ ನುಣ್ಣಗೆ ರುಬ್ಬಿ. ರುಬ್ಬಿದ ಮಿಶ್ರಣ ನೀರಾದರೆ ಮತ್ತಷ್ಟು ಕೊಬ್ಬರಿ ಪುಡಿ ಸೇರಿಸಿ ಹೂರಣ ಗಟ್ಟಿ ಮಾಡಿಕೊಂಡು ಸಣ್ಣ ಉಂಡೆಗಳನ್ನಾಗಿ ಮಾಡಿ. ಈಗ ನೆನೆಸಿಟ್ಟ ಕಣಕವನ್ನು ನಾದಿ ಬಟ್ಟಲಿನಾಕಾರದ ಉಂಡೆ ಮಾಡಿ ಹೂರಣ ತುಂಬಿ ಎಣ್ಣೆ ಸವರಿದ ಪೇಪರ್ ಮೇಲೆ ಗುಂಡಾಗಿ ತಟ್ಟಿ ಕಾದ ಕಾವಲಿಯ ಮೇಲೆ ಹಾಕಿ ಎರಡೂ ಬದಿ ಚೆನ್ನಾಗಿ ಬೇಯಿಸಿ.

UASB LIBRARY



ಸ್ವಚ್ಛ ಶುದ್ಧ ಪರಿಸರದ ಮಾಫ್ಲಿನ್ನಾಂಗ್ ಹಳ್ಳಿ

ಏಷ್ಯಾದ ಅತ್ಯಂತ ಸ್ವಚ್ಛ ಹಳ್ಳಿ

ಮಾಫ್ಲಿನ್ನಾಂಗ್

■ ಕೆ.ಪಿ. ಸತ್ಯನಾರಾಯಣ



ಅಚ್ಚುಕಟ್ಟಾದ ಸುಂದರ ಕಾಲುಹಾದಿ

UASB LIBRARY

ಬೆಂಗಳೂರಿನ ರಸ್ತೆಗಳು, ಟ್ರಾಫಿಕ್, ಎಲ್ಲೆಡೆ ಕಣ್ಣಿಗೆ ರಾಚುವ ಕಸದ ರಾಶಿಯ ಗಬ್ಬುನಾತ... ಇವುಗಳಿಂದ ಕೆಲವು ದಿನವಾದರೂ ದೂರವಿರಲೆಂದು ನಾವು ಆರಿಸಿಕೊಂಡದ್ದು ಅಸ್ಸಾಂ ಮೇಘಾಲಯದ ಒಂದು ವಾರದ ಪ್ರವಾಸ. ಈ ಪ್ರವಾಸದಲ್ಲಿ ನಾವು ಭೇಟಿ ಕೊಡುವ ಸ್ಥಳಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದ 'ಮಾಫ್ಲಿನ್ನಾಂಗ್' ಬಗೆಗೆ ನನಗೆ ಬಹಳವೇ ಕುತೂಹಲವಿತ್ತು.

'ಏಷ್ಯಾದ ಅತ್ಯಂತ ಸ್ವಚ್ಛ ಹಳ್ಳಿ' ಎಂದು ಹೆಸರು ಪಡೆದಿರಬೇಕಾದರೆ ಅದಿನ್ನೆಂಥ ಪರಿಸರ ಹೊಂದಿರಬಹುದು ಎನ್ನುವುದೇ ಆ ಕುತೂಹಲಕ್ಕೆ ಕಾರಣವಾಗಿತ್ತು.

ಶಿಲ್ಲಾಂಗ್‌ನಿಂದ ಹೊರಟು ನಡುವೆ ಭಾರತ ಬಾಂಗ್ಲಾ ಗಡಿ ಪ್ರದೇಶ ಮತ್ತು ಸ್ಫಟಿಕ ಸದೃಶ ನೀರನ್ನು ಹೊಂದಿರುತ್ತದೆ ಎನ್ನಲಾದ ಡಾಮ್ಕಿ ನದಿಯನ್ನು ನೋಡಿ (ಎರಡು ದಿನದ ಹಿಂದೆ ಮಳೆ ಬಂದಿದ್ದರಿಂದ ನೀರು ತೀರಾ ಸ್ವಚ್ಛವಾಗಿ ಇರಲಿಲ್ಲ) ಮಾಫ್ಲಿನ್ನಾಂಗ್ ತಲುಪಿದಾಗ ಸಂಜೆ ನಾಲ್ಕೂವರೆ ಗಂಟೆಯ ಸಮಯ. ನಮ್ಮ ಸಹ ಪ್ರಯಾಣಿಕರಲ್ಲಿ ಕೆಲವರಿಗೆ 'ಒಂದು ಹಳ್ಳಿಯನ್ನು ನೋಡಲು ಇಷ್ಟು ದೂರ ಬರಬೇಕಿತ್ತೇ?' ಎನ್ನುವ ಅಸಮಾಧಾನ!

ಹಳ್ಳಿಯ ಹೊರಗೆ ಇರುವ ಪಾರ್ಕಿಂಗ್ ಪ್ರದೇಶದಲ್ಲಿ ವಾಹನಗಳನ್ನು ನಿಲ್ಲಿಸಿ ಮುಂದೆ ಸಾಗಿದರೆ 'ಏಷ್ಯಾದ ಅತ್ಯಂತ ಸ್ವಚ್ಛ ಹಳ್ಳಿ, ದೇವರ ಸ್ವಂತ ಉದ್ಯಾನಕ್ಕೆ ಸ್ವಾಗತ' ಎಂಬ ಬರಹವಿರುವ ಫಲಕ ಕಾಣಿಸುತ್ತದೆ. ಅಲ್ಲಿಂದ ಮುಂದೆ ನಡೆದರೆ ಕಸ ಕಡ್ಡಿಗಳ ಸುಳಿವಿಲ್ಲದ ಸುಂದರ ರಸ್ತೆಗಳು, ರಸ್ತೆಯ ಬದಿಯಲ್ಲಿ ಬಿದಿರಿನ ಬೇಲಿಯೊಳಗೆ ಅಚ್ಚುಕಟ್ಟಾಗಿ ನಿರ್ವಹಿಸಲಾದ ಹೂಗಿಡಗಳು, ಸಾಲು ಮರಗಳು, ಕೂರುವ ಸಲುವಾಗಿ ಅಲ್ಲಲ್ಲಿ ಹಾಕಿರುವ ಆಸನಗಳು, ಕೆಲವೆಡೆ ನೆರಳಿಗಾಗಿ ಮಂಟಪಗಳು ಕಾಣಬರುತ್ತವೆ. ಇವೆಲ್ಲವು ಪರಿಸರಸ್ನೇಹಿ ವಸ್ತುಗಳಾದ ಬಿದಿರು, ಮರಮುಟ್ಟು ಹಾಗೂ ಹುಲ್ಲಿನಿಂದ ಮಾಡಿರುವಂತಹವು. ನೋಡಲು ಆಕರ್ಷಕವಾಗಿದ್ದು, ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತವೆ.

ಮನೆಗಳಿಗೆ ಹೋಗುವ ಕಿರುದಾರಿಗಳೂ ಶುಭ್ರತೆಯ ಪ್ರತೀಕವೇ ಆಗಿರುವುದು ವಿಶೇಷ. ಅಲ್ಲಲ್ಲಿ ಇರಿಸಿರುವ ಕಸದ ಬುಟ್ಟಿಗಳೂ ಬಿದಿರಿನಿಂದ ಮಾಡಲಾಗಿದ್ದು, ನೋಡಲು ಮೋಹಕವಾಗಿವೆ. ಈ ಹಳ್ಳಿಯ ಮನೆಗಳೂ ಸರಳ ರಚನೆಯನ್ನು ಹೊಂದಿದ್ದು ಆಡಂಬರಕ್ಕೆ ಪ್ರಾಮುಖ್ಯವಿಲ್ಲ.

ಜನರೂ ಶ್ರಮಜೀವಿಗಳು. ತಮ್ಮ ಪಾಡಿಗೆ ತಾವಿರುವ, ಮುಗ್ಧತೆಯನ್ನು ಹೊಂದಿರುವವರು ಎನ್ನುವುದು ಮೇಲ್ನೋಟಕ್ಕೇ ಕಾಣಿಸುತ್ತದೆ. ಅತ್ತಿತ್ತ ನೋಡುತ್ತಾ ಆ ಸುಂದರ ಬೀದಿಗಳಲ್ಲಿ ನಡೆಯುವುದೇ ಅಪೂರ್ವ ಅನುಭೂತಿ. ಹೀಗೆಯೆ ಮುಂದೆ ಸಾಗಿದರೆ ಹಳ್ಳಿಯ ಪ್ರಮುಖ ಆಕರ್ಷಣೆಯಾದ ಬಿದಿರಿನ ಸೇತುವೆಯ ಬಳಿ ಬರುತ್ತೇವೆ. ರಸ್ತೆಯ ಎರಡೂ ಬದಿಯಲ್ಲಿರುವ ದೊಡ್ಡ ಮರಗಳ ನಡುವೆ ಬಿದಿರಿನಿಂದ ಮಾಡಲಾದ ಸೇತುವೆ. ಒಂದು ಬದಿಯಲ್ಲಿ

ಎತ್ತರದಲ್ಲಿರುವ ಚಿಕ್ಕ ಮಂಟಪ ಗಮನ ಸೆಳೆಯುತ್ತವೆ.

ಒಂದು ಕಡೆ ಸುಮಾರು ಇಪ್ಪತ್ತು ಅಡಿ, ಮತ್ತೊಂದು ಕಡೆ ಮೂವತ್ತು ಅಡಿಗೂ ಮೀರಿ ಇಳಿಜಾರಾಗಿ ಸಾಗುವ ಈ ಸೇತುವೆಯ ಮೇಲಿನ ನಡಿಗೆ ವಿಭಿನ್ನ ಅನುಭವ ಕೊಡುತ್ತದೆ. ಇಪ್ಪತ್ತು ರೂಪಾಯಿ ಪಾವತಿಸಿ ಆ ಸೇತುವೆ ಮೇಲೆ ಹೋಗಿ ಬರಬಹುದು. ಮೇಲಿನಿಂದ ಹಳ್ಳಿಯ ವಿಹಂಗಮ ನೋಟವೂ ಲಭ್ಯ. ಮತ್ತೊಂದೆಡೆ 85 ಅಡಿಯ ಬಿದಿರಿನ ಏಣಿಯನ್ನು ಹತ್ತಿ ಸೂರ್ಯಾಸ್ತವನ್ನು ನೋಡುವ ಅನುಭವವೂ ಅನನ್ಯವಾದದ್ದು. ಇಲ್ಲಿಂದ ಬಾಂಗ್ಲಾ ಗಡಿಯ ನೋಟವೂ ಲಭ್ಯ.

ಎಷ್ಟೇ ಪ್ರವಾಸಿಗರು ಬರಲಿ, ಯಾವ ಉಸಾಬರಿಗೂ ಹೋಗದೆ ತಮ್ಮ ಪಾಡಿಗೆ ತಾವಿರುವ ಜನರನ್ನು ನೋಡುವುದೇ ಒಂದು ಅಚ್ಚರಿ. ಅವರನ್ನು ಮಾತನಾಡಿಸಲು ಭಾಷೆಯ ಅಡಚಣೆ. ನಮ್ಮ ಹಿಂದಿ ಅವರಿಗೆ ಅರ್ಥವಾಗುವುದಿಲ್ಲ, ಅವರ ಖಾಸಿ ಭಾಷೆ ನಮಗೆ ತಿಳಿಯದು. ಆದರೆ ವ್ಯಾಪಾರಕ್ಕೆ ನಿಂತ ಒಂದಷ್ಟು ಮಂದಿ ಅದಕ್ಕೆ ತಕ್ಕಷ್ಟು ಇಂಗ್ಲಿಷನ್ನು ಬಲ್ಲರು. ಹಳ್ಳಿಯಿಡೀ ಸುತ್ತಾಡಿ ಮರಳಿ ಹೊರಟಾಗ ಅಲ್ಲಿನ ಪ್ರಕೃತಿಯ ಸೌಂದರ್ಯ, ಕೃತ್ರಿಮವಿಲ್ಲದ ಜನರ ನಡವಳಿಕೆ ನಮ್ಮ ಮನದಲ್ಲಿ ಉಳಿಯುವುದು ನಿಶ್ಚಿತ. ಮೊದಮೊದಲು ಅಲ್ಲೇನು ಹೋಗಿ ನೋಡುವುದು ಎಂದವರೂ ಮೂಗಿನ ಮೇಲೆ ಬೆರಳಿಟ್ಟು ಅಚ್ಚರಿಗೊಂಡಿದ್ದು ನೋಡಿ ಬಂದದ್ದು ಸಾರ್ಥಕವಾಯಿತು ಎಂದು ನಮ್ಮೆಲ್ಲರಿಗೆ ಸಂತಸವಾಗಿದ್ದು ಹೌದು! ಕೆಲವು ಸ್ಥಳಗಳು ಫೋಟೊಗಳಲ್ಲಷ್ಟೇ ಉಳಿಯುವುದಿಲ್ಲ. ಅವು ನಮ್ಮ ಹೃದಯದಲ್ಲಿ ಶಾಶ್ವತ ಸ್ಥಾನ ಪಡೆಯುತ್ತವೆ. ಒಟ್ಟಾರೆ ಒಂದು ಅಪೂರ್ವ, ಅವಿಸ್ಮರಣೀಯ ಪ್ರವಾಸ ನಮ್ಮದಾಗಿತ್ತು.

ಮಾಫ್ಲಿನ್ನಾಂಗ್ ಗ್ರಾಮ ಶಿಲ್ಲಾಂಗ್‌ನಿಂದ 76 ಕಿಲೋ ಮೀಟರ್ ಮತ್ತು ಚಿರಾಪುಂಜಿಯಿಂದ 80 ಕಿಲೋ ಮೀಟರ್ ದೂರದಲ್ಲಿದೆ. ಜೀವಂತ ಮರದ ಬೇರಿನ ಸೇತುವೆ ಇರುವ ರಿವಾಯ್ ಹಳ್ಳಿ ಇಲ್ಲಿಂದ 2.50 ಕಿ.ಮೀ. ದೂರವಿದೆ.

ಮಾಫ್ಲಿನ್ನಾಂಗ್ ಕುರಿತು...

ಸುಮಾರು ನೂರು ವರ್ಷಗಳ ಹಿಂದಿನಿಂದಲೂ ಸ್ವಚ್ಛತೆಯನ್ನು ಕಾಯ್ದುಕೊಂಡು ಬರುತ್ತಿರುವ, ಪೂರ್ವ ಭಾರತದ ಮೇಘಾಲಯ ರಾಜ್ಯದ ಮಾಫ್ಲಿನ್ನಾಂಗ್ ಗ್ರಾಮವು ಭಾರತದ ಅತ್ಯಂತ ಸ್ವಚ್ಛವಾದ ಹಳ್ಳಿ ಎಂದು ಪ್ರಸಿದ್ಧವಾಗಿದೆ.

ಡಿಸ್ಕವರ್ ಇಂಡಿಯಾ ನಿಯತಕಾಲಿಕೆಯು ಇದನ್ನು 2003ರಲ್ಲಿ ಏಷ್ಯಾದ ಅತ್ಯಂತ ಸ್ವಚ್ಛ ಗ್ರಾಮ ಮತ್ತು 2005ರಲ್ಲಿ ಭಾರತದಲ್ಲಿ ಅತ್ಯಂತ ಸ್ವಚ್ಛ ಗ್ರಾಮ ಎಂದು ಘೋಷಿಸಿತು. ಪ್ರಧಾನಿ ಮೋದಿಯವರು ತಮ್ಮ 'ಮನ್ ಕಿ ಬಾತ್' ರೇಡಿಯೊ ಭಾಷಣದಲ್ಲಿ ಮಾಫ್ಲಿನ್ನಾಂಗ್ ಅನ್ನು ಮೇಘಾಲಯದ ಅತ್ಯಂತ ಸ್ವಚ್ಛ ಗ್ರಾಮ ಮತ್ತು ದೇಶದ ಉಳಿದ ಪ್ರದೇಶಗಳಿಗೆ ಮಾದರಿ ಎಂದು ಘೋಷಿಸಿದರು.

ಮೇಘಾಲಯದಲ್ಲಿರುವ ಅಪೂರ್ವ ಖಾಸಿ



ಸಹಜತೆಯಿಂದ ಕೂಡಿದ ಸಣ್ಣ ಹೋಟೆಲ್



ಬಿದಿರಿನ ಸೇತುವೆ

ಬೆಟ್ಟಗಳಲ್ಲಿ ನೆಲೆಗೊಂಡಿರುವ ಮಾಫ್ಲಿನ್ನಾಂಗ್, ಪರಿಶುದ್ಧ ಬೀದಿಗಳು, ಸಮುದಾಯವನ್ನು ಒಳಗೊಂಡ ತ್ಯಾಜ್ಯ ನಿರ್ವಹಣೆ ಮತ್ತು ಪರಿಸರಸ್ನೇಹಿ ಜೀವನಶೈಲಿಗಾಗಿ ಏಷ್ಯಾದ ಅತ್ಯಂತ ಸ್ವಚ್ಛ ಗ್ರಾಮ ಎಂದು ಪ್ರಸಿದ್ಧವಾಗಿದೆ. ಧೂಮಪಾನ ಮತ್ತು ಪ್ಲಾಸ್ಟಿಕ್ ಅನ್ನು ಇಲ್ಲಿ ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. ಮಕ್ಕಳು ವಯಸ್ಸಿರಲಿ ಎಲ್ಲರೂ ಬೀದಿಗಳನ್ನು ಗುಡಿಸುತ್ತಾರೆ. ಉದ್ಯಾನಗಳನ್ನು ಮತ್ತು ತಮ್ಮ ಮನೆಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಾರೆ.

ಸುಮಾರು ಹಿಂದು ನೂರಕ್ಕೂ ಮಿಕ್ಕಿ ಮನೆಗಳಿರುವ, ಒಂದು ಸಾವಿರದ ಒಳಗಿನ ಜನಸಂಖ್ಯೆಯನ್ನು ಹೊಂದಿರುವ ಮಾಫ್ಲಿನ್ನಾಂಗ್‌ನ ಖಾಸಿ ಸಮುದಾಯವು ಮಾತೃವಂಶೀಯವಾಗಿದ್ದು, ಆಸ್ತಿ ಮತ್ತು ಕುಟುಂಬದ ವಂಶಾವಳಿಯು ತಾಯಿಯಿಂದ ಮಗಳಿಗೆ ವರ್ಗಾಯಿಸಿದವಾಗಿವೆ. ಮದುವೆಯ ನಂತರ ಗಂಡನು ತನ್ನ ಹೆಂಡತಿಯ ಮನೆಗೆ ಹೋಗುತ್ತಾನೆ! ಖಾಸಿ ಸಂಸ್ಕೃತಿಯು ಪ್ರಕೃತಿಯೊಂದಿಗೆ ಆಳವಾಗಿ ಸಂಪರ್ಕ ಹೊಂದಿದೆ. ಸ್ಥಳೀಯ ಸಂಪ್ರದಾಯ ಮತ್ತು ಆಚರಣೆಗಳನ್ನು ಹೊಂದಿದ್ದರೂ, ಹೆಚ್ಚಿನ ಖಾಸಿ ಜನರು ತಮ್ಮನ್ನು ಕ್ರಿಶ್ಚಿಯನ್ನರು ಎಂದು ಕರೆದುಕೊಳ್ಳುತ್ತಾರೆ. ಜೀವನೋಪಾಯಕ್ಕಾಗಿ ಕೃಷಿ ಮತ್ತು ಪ್ರವಾಸೋದ್ಯಮವನ್ನು ನೆಚ್ಚಿಕೊಂಡಿರುವ ಈ ಜನರು ತಮಗೇ ವಿಶಿಷ್ಟವಾಗಿರುವ ಖಾಸಿ ಭಾಷೆಯಲ್ಲಿ ಸಂವಹನ ನಡೆಸುತ್ತಾರೆ. ಸಾಕ್ಷರತೆಯ ಪ್ರಮಾಣ ನೂರಕ್ಕೆ ನೂರರಷ್ಟು ಎನ್ನುವುದೂ ಇಲ್ಲಿನ ಹೆಚ್ಚುಗಾರಿಕೆ.

ಈ ಹಳ್ಳಿಯು ಸ್ವಚ್ಛತೆ ಮತ್ತು ನೈರ್ಮಲ್ಯದ ಮಾದರಿಯಾಗಲು ಹೇಗೆ ಸಾಧ್ಯವಾಯಿತು ಎಂದು ಕೇಳಿದರೆ ಚಿಕ್ಕಂದಿನಿಂದಲೇ ಮಕ್ಕಳಲ್ಲಿ ಸ್ವಚ್ಛತೆಯ ಅಭ್ಯಾಸವನ್ನು ತಿಳಿಸಿಕೊಡುವುದರಿಂದ ಇದು ಸಾಧ್ಯವಾಗಿದೆ ಎನ್ನುವ ಉತ್ತರ ಸಿಗುತ್ತದೆ. ನೂರು ವರ್ಷಗಳ ಹಿಂದೆ ಇಲ್ಲಿ ಕಾಲರಾ ಹರಡುವಿಕೆಯಿಂದ ಉದ್ಭವವಾದ ಸಮಸ್ಯೆ ಶುಚಿತ್ವವನ್ನು ಪ್ರೋತ್ಸಾಹಿಸಲು ಕಾರಣವಾಗಿರಬಹುದು ಎಂದು ಹಿರಿಯರು ಅಭಿಪ್ರಾಯಪಡುತ್ತಾರೆ. ಕ್ರಿಶ್ಚಿಯನ್ ಮಿಷನರಿಗಳು ಸಹ ಈ ದಿಸೆಯಲ್ಲಿ ಸಾಕಷ್ಟು ಸಹಾಯ ಮಾಡಿದ್ದಾರೆ.

ಮಾಫ್ಲಿನ್ನಾಂಗ್‌ನಲ್ಲಿ ಸುಂದರವಾದ ಶಂಕುವಿನಾಕಾರದ ಬಿದಿರಿನ ಬುಟ್ಟಿಗಳನ್ನು ಕಸದ ತೊಟ್ಟಿಗಳಾಗಿ ಇರಿಸಲಾಗಿದೆ. ಸಾವಯವ ತ್ಯಾಜ್ಯವನ್ನು ಸುಡಬಹುದಾದ ಕಸದಿಂದ ಬೇರ್ಪಡಿಸಿ ಎಲೆಗಳು ಮತ್ತು ಇತರ ಜೈವಿಕ ತ್ಯಾಜ್ಯವನ್ನು ಹೂಳಲಾಗುತ್ತದೆ. ನಂತರ ಇದನ್ನು ಗೊಬ್ಬರವಾಗಿ ಬಳಸಲಾಗುತ್ತದೆ. ಉಳಿದೆಲ್ಲವನ್ನೂ ಹಳ್ಳಿಯಿಂದ ದೂರಕ್ಕೆ ಒಯ್ದು ಸುಡಲಾಗುತ್ತದೆ.

ಮಾಫ್ಲಿನ್ನಾಂಗ್ ಹಳ್ಳಿಯೊಳಗಿನ ನಡಿಗೆ ನಂಬಲಾಗದಷ್ಟು ಆಹ್ಲಾದಕರವಾಗಿದೆ. ಈ ಗ್ರಾಮವನ್ನು ಅದರ ಪ್ರಶಾಂತ ವಾತಾವರಣಕ್ಕಾಗಿ 'ದೇವರ ಸ್ವಂತ ಉದ್ಯಾನ' ಎಂದು ಕರೆಯಲಾಗುತ್ತದೆ. ಸುಸ್ಥಿರ ಪ್ರವಾಸೋದ್ಯಮ ಮತ್ತು ಪರಿಸರ ಕಾಳಜಿಗೆ ಈ ಹಳ್ಳಿಯನ್ನು ಉದಾಹರಿಸಲಾಗುತ್ತದೆ.

'ಒಂದು ಮಾಫ್ಲಿನ್ನಾಂಗ್ ಹಳ್ಳಿಯು ಸುಂದರವಾಗಿ ಕಾಣುವಾಗ ಯಾವುದೇ ಮುಖಗವಸುಗಳ ಅಗತ್ಯವಿಲ್ಲ. ಹೊರಗೆ ಸ್ವಚ್ಛತೆ ಇದ್ದಾಗ, ಒಳಗೆ ಪ್ರಶಾಂತತೆಯ ಭಾವನೆಯನ್ನು ಅನುಭವಿಸುತ್ತೇವೆ' ಎಂದು ಇಲ್ಲಿಗೆ ಭೇಟಿ ಕೊಟ್ಟ ಖ್ಯಾತ ಕ್ರಿಕೆಟಿಗ ಸಚಿನ್ ಟೆಂಡೂಲ್ಕರ್ ಹೇಳುತ್ತಾರೆ.

UASB LIBRARY

ಕರಾವಳಿಯ ಉಪಾಹಾರದ ಗಮ್ಮತ್ತೇ ಗಮ್ಮತ್ತು!





ತುಪ್ಪ, ಜೋನಿ ಬೆಲ್ಲ ಹಾಗೂ ತೆಂಗಿನಕಾಯಿ ಚಟ್ನಿಯೊಂದಿಗೆ ಉದ್ದಿನ ದೋಸೆ

ತುಪ್ಪ ಹಾಗೂ ಮಾವಿನ ಮಿಡಿ ಉಪ್ಪಿನಕಾಯಿಯೊಂದಿಗೆ ಕೊಚ್ಚಕ್ಕಿ ಗಂಜಿ



UASB LIBRARY

■ ಬಿ. ಶೋಭಾ ಅರಸ

ಕರ್ನಾಟಕದ ಪ್ರತಿಯೊಂದು ಭಾಗದಲ್ಲೂ ಬೇರೆ ಬೇರೆ ರೀತಿಯ ಅಡುಗೆ, ತಿಂಡಿಗಳು ವಿಶಿಷ್ಟವಾಗಿರುತ್ತವೆ. ಹಾಗೆಯೇ ನಮ್ಮ ಕರಾವಳಿಯಲ್ಲೂ (ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ) ಅನೇಕ ಬಗೆಯ ವಿಶಿಷ್ಟ ತಿನಿಸುಗಳನ್ನು ತಯಾರಿಸುತ್ತಾರೆ. ಇಲ್ಲಿಯ ಜನರ ಆಹಾರ ಸೇವನೆಯೂ ವಿಶೇಷ.

ಎಲ್ಲೆಡೆ, ಬೆಳಗಿನ ಉಪಾಹಾರಕ್ಕೆ ಬಗೆಬಗೆಯ ತಿಂಡಿಗಳನ್ನು ಸೇವಿಸಿದರೆ, ನಮ್ಮಲ್ಲಿ ಗಂಜಿ ಊಟ ಮಾಡುತ್ತಾರೆ. ಸಾಮಾನ್ಯವಾಗಿ ಕಾಯಿಲೆ ಬಂದಾಗ, ಜ್ವರವಿದ್ದಾಗ ರವೆ ಗಂಜಿ ಸೇವಿಸುತ್ತಾರೆ. ಆದರೆ ನಮ್ಮದು ಆ ಗಂಜಿ ಊಟವಲ್ಲ, ಕೊಚ್ಚಕ್ಕಿ ಗಂಜಿ ಊಟ. ಕೊಚ್ಚಕ್ಕಿ ಅಂದರೆ ಇಲ್ಲಿ ಸ್ಥಳೀಯವಾಗಿ ಬೆಳೆಯುವ ಭತ್ತವನ್ನು ಕೊಪ್ಪರಿಗೆಯಲ್ಲಿ ಬೇಯಿಸಿ ಆನಂತರ ಅದನ್ನು ಬಿಸಿಲಿನಲ್ಲಿ ಒಣಗಿಸಿ ಸಿಪ್ಪೆ ತೆಗೆದು ಅಕ್ಕಿ ಮಾಡುತ್ತಾರೆ. ಈ ಅಕ್ಕಿಯ ಪರಿಮಳವೇ ವಿಶೇಷವಾಗಿರುತ್ತದೆ.

ಹಿಂದೆ ಮನೆಯಲ್ಲಿಯೇ ಭತ್ತ ಬೇಯಿಸಿ, ಒಣಗಿಸಿ, ಒನಕೆಯಲ್ಲಿ ಕುಟ್ಟಿ ಅಕ್ಕಿ ಮಾಡುತ್ತಿದ್ದರು. ಈಗ ಭತ್ತ ಕೊಯಿಲು ಆದ ಕೂಡಲೆ ಅಕ್ಕಿ ಮಿಲ್ಲಿಗೆ ತೆಗೆದುಕೊಂಡು ಹೋಗಿ ಅಲ್ಲಿ ಕೊಚ್ಚಕ್ಕಿ ಮಾಡಿಸಿಕೊಂಡು ಬರುತ್ತಾರೆ. ಈ ಅಕ್ಕಿಯನ್ನು ಚೆನ್ನಾಗಿ ಬೇಯಿಸಿ ಅದರ ತಿಳಿಯೊಂದಿಗೆ ಸೇವಿಸುವುದೇ ಗಂಜಿ ಊಟ. ಮೆತ್ತಗೆ ಬೆಂದಿದ್ದರೂ ಅಗಳು ಬಿಡಿಬಿಡಿಯಾಗಿದ್ದು ಜಿಗುಟು ಇರುವುದಿಲ್ಲ. ಈ ಗಂಜಿಗೆ ತುಪ್ಪವೋ ಅಥವಾ ತೆಂಗಿನ ಎಣ್ಣೆಯೋ ಹಾಕಿಕೊಂಡು ಅಥವಾ ಮೊಸರು ಮಾವಿನ ಮಿಡಿ ಉಪ್ಪಿನಕಾಯಿಯೊಂದಿಗೆ ತಿನ್ನುವುದು ನಿತ್ಯದ ಬೆಳಗಿನ ಉಪಾಹಾರ. ಒಂದು ಬಟ್ಟಲು ಭರ್ತಿ ಗಂಜಿ ಉಂಡು ಥರ್ ಎಂದು ತೇಗಿದರೂ ಮಧ್ಯಾಹ್ನ ಒಂದು ಗಂಟೆಗೆ ಊಟ ಸೇವಿಸಲು ನಮ್ಮ ಹೊಟ್ಟೆ ತಯಾರಾಗಿರುತ್ತೆ. ಏಕೆಂದರೆ ಇದು ಸುಲಭವಾಗಿ ಜೀರ್ಣವಾಗುವುದಲ್ಲದೆ ಹೆಚ್ಚಿನ ನೀರಿನ ಅಂಶವಿರುವುದರಿಂದ ಶಾಲಾ ಮಕ್ಕಳು, ಬಿಸಿಲಿನಲ್ಲಿ ಕೆಲಸ ಮಾಡುವವರು ಬೆವರಿದರೂ ನಿರ್ಜಲೀಕರಣವಾಗದಂತೆ ತಡೆಯುತ್ತದೆ.

ಏಕಾದಶಿ ದಿನ ಉಪವಾಸವಿದ್ದವರು ಮರುದಿನ ದ್ವಾದಶಿ ಉಪಾಹಾರಕ್ಕೆ ಕಾಯಿಹಾಲು ಗಂಜಿ ಊಟ ಮಾಡುತ್ತಾರೆ. ಬೆಳ್ತಿಗೆ ಅಕ್ಕಿಗೆ (ಭತ್ತವನ್ನು ಬೇಯಿಸದೆ ಮಾಡಿದ ಅಕ್ಕಿ) ತೆಂಗಿನಕಾಯಿಯ ಹಾಲು ಹಾಕಿ ಮೆತ್ತಗೆ ಬೇಯಿಸಿ ಗಂಜಿ ಮಾಡುತ್ತಾರೆ. ಇದಕ್ಕೂ ಕೊಚ್ಚಕ್ಕಿ

ಒಗ್ಗರಣೆ ತೆಂಗಿನೆಣ್ಣೆ ಹಾಕಿದ ಕೊಟ್ಟೆ ಕಡುಬು ಜೊತೆಗೆ ಮಾವಿನಕಾಯಿ ರಸ ಹಾಗೂ ತೆಂಗಿನಕಾಯಿ ಚಟ್ನಿ

ಗಂಜಿಗೆ ಹಾಕಿಕೊಳ್ಳುವಂತೆ ತುಪ್ಪ/ತೆಂಗಿನ ಎಣ್ಣೆ/ ಮೊಸರು ಉಪ್ಪಿನಕಾಯಿ ಮಾವಿನಹಿಂಡಿಯೊಂದಿಗೆ ತಿನ್ನುತ್ತಾರೆ. ಇದು ಹೊಟ್ಟೆಗೆ ಬಹಳ ತಂಪು.

ನಿತ್ಯ ಉಪಾಹಾರಕ್ಕೆ ಗಂಜಿ ಊಟವಾದರೆ ಹಬ್ಬಹರಿದಿನಗಳಲ್ಲಿ ಉದ್ದಿನ ದೋಸೆ ಅಥವಾ ಕೊಟ್ಟಿಕಡುಬು ಬೆಳಗಿನ ಉಪಾಹಾರಕ್ಕೆಂದು ತಯಾರಿಸುತ್ತಾರೆ. ಒಂದು ಅಳತೆಯ ಉದ್ದಿನ ಬೇಳೆಗೆ ಮೂರು ಅಳತೆಯ ಬೆಲ್ಲಕ್ಕೆ ಅಕ್ಕಿ ಹಾಕಿ ಐದು ಅಥವಾ ಆರು ಗಂಟೆಗಳ ಕಾಲ ನೆನೆಸಿ ಚೆನ್ನಾಗಿ ರುಬ್ಬಿ ಹುದುಗು ಬರಿಸಿ ದಪ್ಪವಾದ ಕಲ್ಲಿನ ಅಥವಾ ಕಬ್ಬಿಣದ ತವಾದ ಮೇಲೆ ತೆಂಗಿನ ಎಣ್ಣೆ ಹಚ್ಚಿ ದಪ್ಪವಾಗಿ ಹಿಟ್ಟು ಹೊಯ್ದು



ಮುಂಡಕನ ಓಲೆಯ ಕೊಟ್ಟೆಯೊಳಗೆ ಘಮಘಮ ಕಡುಬು

ಮಾಡುವ ದೋಸೆಯೇ ಉದ್ದಿನ ದೋಸೆ. ಈ ದೋಸೆಗೆ ತೂತುಗಳಿದ್ದು, ಮೃದುವಾಗಿದ್ದು ಪರಿಮಳಯುಕ್ತವಾಗಿರುತ್ತದೆ.

ದೋಸೆ ಹೊಯ್ಯುವಾಗ ಸುತ್ತಮುತ್ತಲೂ ಪರಿಮಳಹರಡಿಹೊಟ್ಟೆಯಹಸಿವನ್ನು ಹೆಚ್ಚಿಸುತ್ತದೆ. ಈ ದೋಸೆಗೆ ತೆಂಗಿನಕಾಯಿ ಚಟ್ನಿಯೊಂದಿಗೆ ಬೆಣ್ಣೆ/ ತುಪ್ಪ ಜೋಸಿ ಬೆಲ್ಲದೊಂದಿಗೆ ಸೇವಿಸಿದರೆ ಆ ಸವಿಯನ್ನು ತಿಂದವನೇ ಬಲ್ಲ. ಈ ಊರಿನ ಕೆಲವು ದೇವಾಲಯಗಳಲ್ಲೂ ದೋಸೆ ಸೇವೆ ಇರುತ್ತದೆ. ಭಕ್ತರು ಹರಿಕೆ ರೂಪದಲ್ಲಿ ಮುಡಿ ಅಕ್ಕಿ ದೋಸೆ ಸೇವೆ ಸಲ್ಲಿಸುತ್ತಾರೆ.

ಉಪಾಹಾರಕ್ಕೆ ಮಾಡುವ ಮತ್ತೊಂದು ವಿಶೇಷ ತಿಂಡಿ ಅಂದರೆ ಕೊಟ್ಟೆ ಕಡುಬು. ಇದನ್ನು ಊರ ಜಾತ್ರೆಯಂದು ಪ್ರತಿ ಮನೆಯಲ್ಲೂ ಮಾಡುತ್ತಾರೆ ಮತ್ತು ಹಬ್ಬದ ದಿನಗಳಲ್ಲೂ, ನೆಂಟರು ಮನೆಗೆ ಬಂದಾಗಲೂ, ಮದುವೆ ಮುಂಜಿ ಮುಂತಾದ ಸಮಾರಂಭಗಳಲ್ಲೂ ಈ ತಿಂಡಿಯನ್ನು ಮಾಡುತ್ತಾರೆ. ಕಡುಬು ಎಂದರೆ ಸಿಹಿ ತಿಂಡಿಯಲ್ಲ. ಎರಡು ಅಳತೆಯ ಬೆಲ್ಲಕ್ಕೆ ಅಕ್ಕಿ ಮತ್ತು ಒಂದು ಅಳತೆಯ ಉದ್ದಿನ ಬೇಳೆಯನ್ನು ಚೆನ್ನಾಗಿ ತೊಳೆದು ಐದಾರು ಗಂಟೆಗಳ ಕಾಲ ನೆನೆಸಿ ಉದ್ದನ್ನು ನುಣ್ಣಗೆ ರುಬ್ಬಿ ಅಕ್ಕಿಯನ್ನು ತರಿತರಿಯಾಗಿ ರುಬ್ಬಿ ಹುದುಗು ಬರಿಸಿ ಆ ಹಿಟ್ಟಿನಿಂದ ತಯಾರಿಸುವುದು. ಕೆಲವರು ನುಣುಪಾಗಿ ಅರೆದ ಉದ್ದಿನ ಹಿಟ್ಟಿಗೆ ಅಕ್ಕಿಯ ರವೆಯನ್ನು ಸೇರಿಸಿ ಹಿಟ್ಟು ತಯಾರಿಸುತ್ತಾರೆ. ಅಕ್ಕಿ ತರಿತರಿಯಾಗಿ ರುಬ್ಬುವಾಗ ಸ್ವಲ್ಪ ನುಣ್ಣಗೆ ಆದರೆ ಕಡುಬು ಗಟ್ಟಿಯಾಗುತ್ತದೆ.

ಇದರ ವಿಶೇಷತೆ ಇರುವುದು ಕೊಟ್ಟೆಯಲ್ಲಿ. ಮುಂಡಕದ ಓಲೆಯಲ್ಲಿ ಲೋಟದಂತೆ ಕೊಟ್ಟೆ ಮಾಡಿ ಅದರಲ್ಲಿ ಹಿಟ್ಟನ್ನು ತುಂಬಿ ಹಬೆಯಲ್ಲಿ ಬೇಯಿಸುವುದು. ಮುಂಡಕದ ಓಲೆ ನೀಳವಾಗಿದ್ದು ಕೆರೆ, ತೋಡಿನ ದರೆಯ ಬದಿಯಲ್ಲಿ ಬೆಳೆಯುವ ಸಸ್ಯ. ಈ ಎಲೆಯ ಎರಡು ಬದಿಯಲ್ಲಿ ಸಣ್ಣ ಮುಳ್ಳುಗಳಿರುತ್ತವೆ. ಇದರಲ್ಲಿ ಕೊಟ್ಟೆ ಮಾಡುವುದು ಸ್ವಲ್ಪ ಕಷ್ಟವಾದರೂ ಬಹಳ ಆಸಕ್ತಿಯಿಂದ ತಯಾರಿಸುತ್ತಾರೆ. ಮೊದಲು ಓಲೆಯ ಎರಡೂ ಬದಿಯ ಮುಳ್ಳುಗಳನ್ನು ಚಾಕು/ ಕತ್ತಿಯಿಂದ ಹೆರೆದು ಓಲೆಯ ಹಿಂಬದಿಯನ್ನೂ ಹೆರೆದು ಆನಂತರ ಬೆಂಕಿಯಲ್ಲಿ ಬಾಡಿಸುತ್ತಾರೆ. ಆಗ ಓಲೆ ಮೃದುವಾಗುತ್ತದೆ. ಒದ್ದೆಮಾಡಿದ ಬಟ್ಟೆಯಿಂದ ಒರೆಸಿ ಆನಂತರ ತೇವವನ್ನು ಒಣಬಟ್ಟೆಯಲ್ಲಿ ಒರೆಸಿ ಓಲೆಗಳನ್ನು ಸ್ವಚ್ಛಗೊಳಿಸಿದ ಕೂಡಲೆ ಓಲೆಗಳನ್ನು ಸುರುಳಿಯಾಗಿ ಸುತ್ತುತ್ತಾರೆ. ಇದರಿಂದ ಇದನ್ನು ಲೋಟಗಳಂತೆ ಇಡುವುದು ಸುಲಭವಾಗುತ್ತದೆ. ಓಲೆಗಳನ್ನು ಲೋಟಗಳಂತೆ ಇಡಲು ಒಣಗಿದ ತೆಂಗಿನಗರಿಯ ಕಡ್ಡಿಗಳನ್ನು ಬಳಸುತ್ತಾರೆ. ಈ ಕೊಟ್ಟೆಯಲ್ಲಿದ್ದ ಹಿಟ್ಟು ಹಬೆಯಲ್ಲಿ ಬೆಂದಾಗ ಬರುವ ಪರಿಮಳ ಅಮೋಘವಾಗಿದ್ದು ಕಡುಬು ತಣ್ಣಗಾದರೂ ಆ ಪರಿಮಳ ಕಡಿಮೆಯಾಗದೆ ಉಳಿಯುವುದು ವಿಶೇಷ.

ಉತ್ತಮವಾಗಿ ಇಟ್ಟ ಕೊಟ್ಟೆಯಲ್ಲಿ ಪುನಃ ಪುನಃ ಹಿಟ್ಟು ಹಾಕಿ ಬೇಯಿಸಬಹುದು. ಮೃದುವಾದ ಈ ಕೊಟ್ಟೆ ಕಡುಬುಗೆ ಒಗ್ಗರಣೆ ಹಾಕಿದ





ಸೊಂಪಾಗಿ ಬೆಳೆದಿರುವ ಮುಂಡಕದ ಓಲೆ

ತೆಂಗಿನ ಎಣ್ಣೆ (ತೆಂಗಿನ ಎಣ್ಣೆಗೆ ಒಣಮೆಣಸು ಕರಿಬೇವು ಸಾಸಿವೆ ಹಾಕಿ ಒಗ್ಗರಿಸಿದ್ದು) ಹಾಕಿಕೊಂಡು ತೆಂಗಿನಕಾಯಿ ಚಟ್ನಿ ಹಾಗೂ ಮಾವಿನಕಾಯಿ ರಸದೊಂದಿಗೆ ತಿಂದರೆ, ಆಹಾ ಎಂಥ ರುಚಿ. ಇಲ್ಲಿಯ ಅನೇಕ ಗಣಪತಿ ದೇವಸ್ಥಾನಗಳಲ್ಲಿ ಕೊಟ್ಟೆ ಕಡುಬು ನೈವೇದ್ಯ ಮಾಡುವುದು ವಿಶೇಷ ಪೂಜಾ ಪದ್ಧತಿಯಾಗಿದೆ.

ಬೇರೆ ಊರುಗಳಲ್ಲಿ ನೆಲೆಸಿರುವ ನಮ್ಮೂರಿನವರು ಬೆಳಗಿನ ಉಪಾಹಾರಕ್ಕೆ ಬೇರೆ ಬೇರೆ ತಿಂಡಿಗಳನ್ನು ತಿಂದರೂ ಊರಿಗೆ ಬಂದಾಗ ಇಲ್ಲಿಯ ಉಪಾಹಾರವನ್ನೇ ಸೇವಿಸಲು ಇಚ್ಛಿಸುತ್ತಾರೆ. ಆದ್ದರಿಂದ ಈ ಊರಿನ ಅನೇಕ ಹೋಟೆಲ್ ಹಾಗೂ ಉಪಾಹಾರ ಗೃಹಗಳಲ್ಲಿ ಗಂಜಿ ಊಟ, ಮುಂಡಕದ ಕೊಟ್ಟೆ ಕಡುಬು ಸಿಗುತ್ತದೆ. ಕೆಲವರು ಹಲಸಿನ ಎಲೆ, ಬಾಳೆ ಎಲೆ ಹಾಗೂ ಅರಸಿನೆಲೆಗಳಲ್ಲೂ ಕೊಟ್ಟೆಗಳನ್ನು ಮಾಡುತ್ತಾರೆ. ಆದರೆ ಮುಂಡಕದ ಓಲೆಯ ವಿಶಿಷ್ಟ ಪರಿಮಳವೇ ಬೇರೆ. ಮುಂಡಕದ ಓಲೆಯನ್ನು ಮನೆಯಂಗಳದಲ್ಲೂ ಬೆಳೆಸುತ್ತಿದ್ದಾರೆ. ಕೆಲವರು ಮುಳ್ಳುಗಳಿಲ್ಲದ ಮುಂಡಕವನ್ನೂ ಬೆಳೆಸುತ್ತಿದ್ದಾರೆ. ಆದರೆ ಅದು ಮುಳ್ಳುಗಳಿದ್ದ ಮುಂಡಕದಷ್ಟು ಪರಿಮಳವಿರುವುದಿಲ್ಲ. ಈಗ ಮುಂಡಕದ ಓಲೆಯಿಂದ ಕೊಟ್ಟೆ ಮಾಡುವುದು ಒಂದು ಗೃಹೋದ್ಯಮವಾಗಿದೆ.

ಸಂಘಸಂಸ್ಥೆಗಳಲ್ಲಿ ಮುಂಡಕದ ಕೊಟ್ಟೆ ಮಾಡುವ ಕಲಿಕೆ ಹಾಗೂ ಸ್ಪರ್ಧೆಗಳನ್ನು ಏರ್ಪಡಿಸುತ್ತಿರುವುದರಿಂದ ಈಗಿನ ಯುವಕರಿಗೂ ಮುಂಡಕದ ಕೊಟ್ಟೆ ಮಾಡಲು ಆಸಕ್ತಿ ಮೂಡಿದೆ. ಆದ್ದರಿಂದ ಹಿಂದಿನಿಂದ ಬಂದ ಈ ಉಪಾಹಾರ ಕ್ರಮ ಈಗಲೂ ಪ್ರಸ್ತುತವಾಗಿದೆ. ನಮ್ಮೂರಿನ ಈ ವಿಶೇಷ ಉಪಾಹಾರವನ್ನು ಸೇವಿಸಲು ತಪ್ಪದೇ ಬನ್ನಿ. ■

ಸವಿ ಕರ್ನಾಟಕ

ಕರ್ನಾಟಕದ ವಿವಿಧ ಭಾಗಗಳಿಂದ ವಿಶೇಷ ರುಚಿಗಳನ್ನು ಪರಿಚಯಿಸುವ ಅಂಕಣ. ಆ ಸವಿಯ ಹಿಂದಿನ ಪರಂಪರೆ, ಪರಿಚಯ ಮತ್ತು ವಿಧಾನಗಳಿರುವ ಮಾಹಿತಿ ಗುಚ್ಛ.

UASB LIBRARY

13 ಭಾಷೆಗಳಲ್ಲಿ ಮುದ್ರಿತ

21/5/26

ಮೇ 2026 | ₹ 22

ಯೋಜನಾ

ಅಭಿವೃದ್ಧಿ ಮಾಸಪತ್ರಿಕೆ 1985ರಿಂದ ಪ್ರಕಟಿತ

योजना • ଯୋଜନା • யோஜனா • యోజన • ಯೋಜನಾ • YOJANA • திட்டம் • പദ്ധതി • योजना • યોજના • ಯೋಜನಾ • یوجنا



ಕೃಷಿ ವಿಶ್ವವಿದ್ಯಾನಿಲಯ ಗ್ರಂಥಾಲಯ
ಜಿ.ಕೆ.ವಿ.ಕೆ, ಬೆಂಗಳೂರು - 560 065
ನ.ದಿ. ಸಂಖ್ಯೆ:
U.A.S. UNIVERSITY LIBRARY
BANGALORE
560 065
G.K.V.K CAMPUS
UASB LIBRARY

ಪರಂಪರೆ

ಜಾಗತಿಕ ಮೌಲ್ಯ ಸರಪಳಿಗೆ ಬುಡಕಟ್ಟು ಭಾರತದ ಪ್ರವೇಶ

ಬುಡಕಟ್ಟು ಕುಶಲಕರ್ಮಿಗಳು ಅರಣ್ಯ ಆಧರಿತ ಜೀವನೋಪಾಯ ಆರ್ಥಿಕತೆಗಳಿಂದ ಜಾಗತಿಕ ಮೌಲ್ಯ ಸರಪಳಿಗಳಲ್ಲಿ ಸಕ್ರಿಯ ಭಾಗವಹಿಸುವಿಕೆಗೆ ಪರಿವರ್ತನೆಗೊಳ್ಳುತ್ತಿದ್ದಾರೆ. ಇದು ಪರಂಪರೆ ಮತ್ತು ಮಹತ್ವಾಕಾಂಕ್ಷೆಯನ್ನು ಸಮಾನ ಭಾಗಗಳಾಗಿ ಒಳಗೊಂಡಿರುವ ಒಂದು ಕಥೆಯಾಗಿದೆ, ಅಲ್ಲಿ ಕಾಡುಗಳು ಫ್ಯಾಷನ್ ಅನ್ನು ಪೂರೈಸುತ್ತವೆ ಮತ್ತು ಪ್ರಾಚೀನ ಕೌಶಲ್ಯಗಳು ತಮ್ಮ ನಿಜವಾದ ಮಾರುಕಟ್ಟೆ ಮೌಲ್ಯವನ್ನು ಕಂಡುಕೊಳ್ಳುತ್ತವೆ.

ಭಾರತದ ಬುಡಕಟ್ಟು ಸಮುದಾಯಗಳು ಜಾಗತಿಕ ಆರ್ಥಿಕತೆಯಲ್ಲಿ ತಮ್ಮ ಸ್ಥಾನವನ್ನು ಮರು ವ್ಯಾಖ್ಯಾನಿಸಿಕೊಳ್ಳುತ್ತಿವೆ, ಅರಣ್ಯ ಆಧರಿತ ಜೀವನೋಪಾಯವನ್ನು ಆಧುನಿಕ ಗ್ರಾಹಕರೊಂದಿಗೆ ಪ್ರತಿಧ್ವನಿಸುವ ಸುಸ್ಥಿರ, ಹೆಚ್ಚಿನ ಮೌಲ್ಯದ ಉತ್ಪನ್ನಗಳಾಗಿ ಪರಿವರ್ತಿಸುತ್ತಿವೆ. ಜೀವನಾಧಾರದಿಂದ–ಉದ್ಯಮಕ್ಕೆ ಈ ಬದಲಾವಣೆಯು ಬುಡಕಟ್ಟು ಆರ್ಥಿಕತೆಗಳ ವಿಶಾಲವಾದ ಮರುಕಲ್ಪನೆಯನ್ನು ಪ್ರತಿಬಿಂಬಿಸುತ್ತದೆ, ಇನ್ನು ಮುಂದೆ ಅಲ್ಲಿ ಸಂಪ್ರದಾಯವು ಪ್ರತ್ಯೇಕವಾಗಿರುವುದಿಲ್ಲ; ರಾಷ್ಟ್ರೀಯ ಮತ್ತು ಜಾಗತಿಕ ಮಾರುಕಟ್ಟೆಗಳಲ್ಲಿ ಸಂಯೋಜಿಸಲ್ಪಟ್ಟಿರುತ್ತದೆ.

ಈ ರೂಪಾಂತರವನ್ನು ನವದೆಹಲಿಯ ಸುಂದರ್ ನರ್ಸರಿಯಲ್ಲಿ ಮಾರ್ಚ್ 18–30ರವರೆಗೆ ನಡೆದ ಭಾರತ್ ಟ್ರೈಬ್ಸ್ ಫೆಸ್ಟ್ 2026ರಲ್ಲಿ ಸ್ಪಷ್ಟವಾಗಿ ಪ್ರದರ್ಶಿಸಲಾಗಿದೆ. ಬುಡಕಟ್ಟು ವ್ಯವಹಾರಗಳ ಸಚಿವಾಲಯದ ಸಹಯೋಗದೊಂದಿಗೆ ಭಾರತೀಯ ಬುಡಕಟ್ಟು ಸಹಕಾರಿ ಮಾರುಕಟ್ಟೆ ಅಭಿವೃದ್ಧಿ ಒಕ್ಕೂಟ (ಟಿಆರ್‌ಐಎಫ್‌ಇಡಿ) ರೂಪಿಸಿರುವ ಈ ವಾರ್ಷಿಕ ಬುಡಕಟ್ಟು ಉತ್ಸವವು ಭಾರತದ ಬುಡಕಟ್ಟು ಪರಂಪರೆಯು ಅದರ ಅತ್ಯಂತ ಕ್ರಿಯಾತ್ಮಕ ರೂಪದಲ್ಲಿ ಜೀವಂತವಾಗುವ ರಾಷ್ಟ್ರೀಯ ವೇದಿಕೆಯಾಗಿ ಕಾರ್ಯ ನಿರ್ವಹಿಸುತ್ತದೆ. ಕರಕುಶಲತೆ, ಸಂಸ್ಕೃತಿ, ಉದ್ಯಮಶೀಲತೆ ಮತ್ತು ಜೀವನೋಪಾಯಗಳನ್ನು ಆಚರಿಸುವ ಇದು ಬುಡಕಟ್ಟು ಸಂಪ್ರದಾಯಗಳನ್ನು ದೇಶದ ಸಾಂಸ್ಕೃತಿಕ ಮತ್ತು ಆರ್ಥಿಕ ಭೂದೃಶ್ಯದ ಮುಂಚೂಣಿಗೆ ತರುತ್ತದೆ.

ಈ ರೂಪಾಂತರವು ಆರ್‌ಐಎಸ್‌ಎಎ ಪ್ರೀಮಿಯಂ ಟ್ರೈಬಲ್ ಬ್ರಾಂಡ್, ವನ್ ಧನ್ ಯೋಜನೆ ಮತ್ತು ಟ್ರೈಬ್ಸ್ ಇಂಡಿಯಾ ನೆಟ್‌ವರ್ಕ್‌ನಂತಹ ಕಾರ್ಯಕ್ರಮಗಳ ಜೊತೆಗೆ ಉದ್ದೇಶಿತ ನೀತಿ ಮಧ್ಯಸ್ಥಿಕೆಗಳಿಂದ ನಡೆಸಲ್ಪಡುತ್ತದೆ. ಬುಡಕಟ್ಟು ಕುಶಲಕರ್ಮಿಗಳು ಅರಣ್ಯ ಆಧರಿತ ಜೀವನೋಪಾಯ ಆರ್ಥಿಕತೆಗಳಿಂದ ಜಾಗತಿಕ ಮೌಲ್ಯ ಸರಪಳಿಗಳಲ್ಲಿ ಸಕ್ರಿಯ ಭಾಗವಹಿಸುವಿಕೆಗೆ ಪರಿವರ್ತನೆಗೊಳ್ಳುತ್ತಿದ್ದಾರೆ. ಹೊರಹೊಮ್ಮುತ್ತಿರುವುದು ಪರಂಪರೆ ಮತ್ತು ಮಹತ್ವಾಕಾಂಕ್ಷೆಯನ್ನು ಸಮಾನ ಭಾಗಗಳಾಗಿ ಒಳಗೊಂಡಿರುವ ಒಂದು ಕಥೆಯಾಗಿದೆ, ಅಲ್ಲಿ ಕಾಡುಗಳು ಫ್ಯಾಷನ್ ಅನ್ನು ಪೂರೈಸುತ್ತವೆ ಮತ್ತು ಪ್ರಾಚೀನ ಕೌಶಲ್ಯಗಳು ತಮ್ಮ ನಿಜವಾದ ಮಾರುಕಟ್ಟೆ ಮೌಲ್ಯವನ್ನು ಕಂಡುಕೊಳ್ಳುತ್ತವೆ.

UASB LIBRARY

ಬುಡಕಟ್ಟು ಜನಾಂಗದ ಭಾರತ ಮಾದರಿ: ವನ ಧನ್‌ನಿಂದ ಮೌಲ್ಯ ಸರಪಳಿಯವರೆಗೆ

ಜೀವನೋಪಾಯ ಭದ್ರತೆಯನ್ನು ಮಾರುಕಟ್ಟೆ ಪ್ರವೇಶದೊಂದಿಗೆ ಸಂಯೋಜಿಸುವ ಸಾಂಸ್ಥಿಕ ಚೌಕಟ್ಟುಗಳ ಮೂಲಕ ಭಾರತದ ಬುಡಕಟ್ಟು ಆರ್ಥಿಕತೆಯನ್ನು ವ್ಯವಸ್ಥಿತವಾಗಿ ಮರುರೂಪಿಸಲಾಗುತ್ತಿದೆ. ದೇಶದ ಅತ್ಯಂತ ನುರಿತ ಕುಶಲಕರ್ಮಿಗಳಲ್ಲಿ ಒಂದಾದ ಬುಡಕಟ್ಟು ಸಮುದಾಯಗಳಿಗೆ ಬೆಂಬಲಕ್ಕಿಂತ ಹೆಚ್ಚಿನದು ಬೇಕಾಗುತ್ತದೆ ಎಂದು ಸರ್ಕಾರ ಗುರುತಿಸಿದೆ; ಅವರಿಗೆ ಸಬಲೀಕರಣದ ಅಗತ್ಯವಿದೆ. ಇದರರ್ಥ ಕಚ್ಚಾ ವಸ್ತುಗಳ ಪೂರೈಕೆದಾರರಿಂದ ಜಾಗತಿಕ ಮಾರುಕಟ್ಟೆಗಳಲ್ಲಿ ಪ್ರೀಮಿಯಂ ಬೆಲೆಗಳನ್ನು ಪಡೆಯಬಲ್ಲ ಬ್ರಾಂಡ್‌ಗಳ ಸೃಷ್ಟಿಕರ್ತರು ಮತ್ತು ಮಾಲೀಕರಾಗಿ ರಚನಾತ್ಮಕ ರೂಪಾಂತರವನ್ನು ಸಕ್ರಿಯಗೊಳಿಸುವುದು.

ಟಿಆರ್‌ಐಎಫ್‌ಇಡಿ ನೇತೃತ್ವದ ಟ್ರೈಬ್ಸ್ ಇಂಡಿಯಾ ಜಾಲವು ಬುಡಕಟ್ಟು ಉತ್ಪಾದಕರನ್ನು ನಗರ ಗ್ರಾಹಕರೊಂದಿಗೆ ನೇರವಾಗಿ ಸಂಪರ್ಕಿಸುತ್ತದೆ, ಮಧ್ಯವರ್ತಿ ಸರಪಳಿಗಳನ್ನು ತೆಗೆದುಹಾಕುತ್ತದೆ. ವನ್ ಧನ್ ವಿಕಾಸ್ ಕೇಂದ್ರಗಳು (ಪಿಡಿವಿಕೆಗಳು) ಬುಡಕಟ್ಟು ವ್ಯವಹಾರಗಳ ಸಚಿವಾಲಯ ಮತ್ತು ಟಿಆರ್‌ಐಎಫ್‌ಇಡಿನಿಂದ ಪ್ರಾರಂಭಿಸಲ್ಪಟ್ಟ ಸಮುದಾಯ ಸ್ವಾಮ್ಯದ ಕೇಂದ್ರಗಳಾಗಿವೆ, ಇವು ಬುಡಕಟ್ಟು ಸಂಗ್ರಹಕಾರರಿಗೆ ಸುಸ್ಥಿರ ಜೀವನೋಪಾಯವನ್ನು ಉತ್ತೇಜಿಸಲು, ಬುಡಕಟ್ಟು ಆದಾಯವನ್ನು ಹೆಚ್ಚಿಸಲು ಅವು ಸಣ್ಣ ಅರಣ್ಯ ಉತ್ಪನ್ನಗಳ ಮೌಲ್ಯವರ್ಧನೆ, ಸಂಸ್ಕರಣೆ ಮತ್ತು ಬ್ರ್ಯಾಂಡಿಂಗ್ ಮೇಲೆ ಗಮನ ಕೇಂದ್ರೀಕರಿಸುತ್ತವೆ.







ಪ್ರತಿ ವಿಡಿವಿಕೆ–ಕ್ಲಸ್ಟರ್ ವನ್‌ಧನ್ ಕೇಂದ್ರಗಳು 15 ಬುಡಕಟ್ಟು ಸ್ವ–ಸಹಾಯ ಗುಂಪುಗಳ ಒಕ್ಕೂಟಗಳಿಂದ ರಚನೆಯಾಗಿವೆ. ಪ್ರತಿ ಗುಂಪು 20 ಬುಡಕಟ್ಟು ನಾನ್–ಡಂಬರ್ ಅರಣ್ಯ ಉತ್ಪನ್ನ ಸಂಗ್ರಹಕಾರರು ಅಥವಾ ಕುಶಲಕರ್ಮಿಗಳನ್ನು ಒಳಗೊಂಡಿರುತ್ತದೆ, ಒಂದೇ ಕ್ಲಸ್ಟರ್‌ನೊಳಗೆ ಸುಮಾರು 300 ಫಲಾನುಭವಿಗಳನ್ನು ಒಟ್ಟುಗೂಡಿಸಲಾಗುತ್ತದೆ.

ಈ ಮಾದರಿಯು ಸಾಮೂಹಿಕ ಸಂಗ್ರಹಣೆ, ಹಂಚಿಕೆಯ ಸಂಸ್ಕರಣಾ ಮೂಲಸೌಕರ್ಯ, ಕೌಶಲ್ಯ ಅಭಿವೃದ್ಧಿ ಮತ್ತು ಬಲವಾದ ಮಾರುಕಟ್ಟೆ ಸಂಪರ್ಕಗಳನ್ನು ಸಕ್ರಿಯಗೊಳಿಸುತ್ತದೆ, ದಕ್ಷತೆ ಮತ್ತು ಚೌಕಾಶಿ ಶಕ್ತಿಯನ್ನು ಹೆಚ್ಚಿಸುತ್ತದೆ. ಬಸ್ತಾರ್‌ನಲ್ಲಿ ಹುಣಸೆ ಹಣ್ಣನ್ನು ಸಂಸ್ಕರಿಸುವ ಮಹಿಳೆಯರು ಇನ್ನು ಮುಂದೆ ಕೇವಲ ಕೃಷಿಕರಲ್ಲ; ಅವರು ಔಪಚಾರಿಕ ಮೌಲ್ಯ ಸರಪಳಿಗಳಲ್ಲಿ ಸಂಯೋಜಿಸಲ್ಪಟ್ಟ ಸೂಕ್ಷ್ಮ ಉದ್ಯಮಿಗಳಾಗಿ ಹೊರಹೊಮ್ಮುತ್ತಿದ್ದಾರೆ. ಅದೇ ಸಮಯದಲ್ಲಿ, ಆರ್‌ಐಎಸ್‌ಎ ಉಪಕ್ರಮ ಬುಡಕಟ್ಟು ಕರಕುಶಲತೆಯನ್ನು ಉನ್ನತೀಕರಿಸುತ್ತಿದೆ, ಜಾಗತಿಕ ಮಾರುಕಟ್ಟೆಯಲ್ಲಿ ಅದನ್ನು ಪ್ರೀಮಿಯಂ ಕೊಡುಗೆಯಾಗಿ ಮರುಸ್ಥಾಪಿಸುತ್ತಿದೆ.

ಬುಡಕಟ್ಟು ಉತ್ಪಾದಕರು ಕಚ್ಚಾ ಅರಣ್ಯ ಉತ್ಪನ್ನಗಳು, ಸಣ್ಣ ಅರಣ್ಯ ಉತ್ಪನ್ನಗಳು ಮತ್ತು ಕರಕುಶಲ ವಸ್ತುಗಳನ್ನು ಈ ವನ್ ಧನ್ ವಿಕಾಸ ಕೇಂದ್ರ ಕೇಂದ್ರಗಳಿಗೆ ತರುತ್ತಾರೆ, ಅಲ್ಲಿ ಗುಣಮಟ್ಟದ ಶ್ರೇಣೀಕರಣ, ಮೌಲ್ಯವರ್ಧನೆ, ಪ್ಯಾಕೇಜಿಂಗ್ ಮತ್ತು ದಾಖಲಾತಿ ಮಾಡಲಾಗುತ್ತದೆ. ಅಲ್ಲಿಂದ, ಉತ್ಪನ್ನಗಳು ಅಂತಾರಾಷ್ಟ್ರೀಯ ಖರೀದಿದಾರರು ಮತ್ತು ನ್ಯಾಯಯುತ–ವ್ಯಾಪಾರ ಮಾರುಕಟ್ಟೆಗಳನ್ನು ತಲುಪುವ ಮೊದಲು ಪ್ರಮುಖ ವಿಮಾನ ನಿಲ್ದಾಣಗಳು ಮತ್ತು ಪ್ರೀಮಿಯಂ ಮಾಲ್‌ಗಳಲ್ಲಿನ ಟ್ರೈಬ್ಸ್ ಇಂಡಿಯಾದ ಚಿಲ್ಲರೆ ಜಾಲ–ಅಂಗಡಿಗಳು ಹಾಗೂ ಇ–ಕಾಮರ್ಸ್ ವೇದಿಕೆಗಳ ಮೂಲಕ ಚಲಿಸುತ್ತವೆ.

ಸಾಂಪ್ರದಾಯಿಕ ಕರಕುಶಲ ವಸ್ತುಗಳು ಅವುಗಳ ಸಾಂಸ್ಕೃತಿಕ ದೃಢೀಕರಣವನ್ನು ದುರ್ಬಲಗೊಳಿಸದೆ ಸಮಕಾಲೀನ ಗ್ರಾಹಕರ ಆದ್ಯತೆಗಳಿಗೆ ಹೊಂದಿಕೊಳ್ಳುವಂತೆ ಖಚಿತಪಡಿಸಿಕೊಳ್ಳಲು, ಟಿಆರ್‌ಐಎಫ್‌ಇಡಿ, ರಾಷ್ಟ್ರೀಯ ಫ್ಯಾಷನ್ ತಂತ್ರಜ್ಞಾನ ಸಂಸ್ಥೆ ಸೇರಿದಂತೆ ವಿನ್ಯಾಸ ಸಂಸ್ಥೆಗಳೊಂದಿಗೆ ಪಾಲುದಾರಿಕೆಯನ್ನು ರೂಪಿಸಿಕೊಂಡಿದೆ. ಒಂದು ಕಾಲದಲ್ಲಿ ಸ್ಥಳೀಯ ಮಧ್ಯವರ್ತಿಗೆ ನಾಮಮಾತ್ರ ಮೊತ್ತಕ್ಕೆ ಮಾರಾಟವಾಗಿದ್ದ ಛತ್ತೀಸ್‌ಘಡದ ದೋಖ್ರಾ ಪೆಂಡೆಂಟ್, ಈಗ ತನ್ನದೇ ಆದ ಪ್ರಮಾಣೀಕೃತ ಗುರುತಿನ ಅಡಿಯಲ್ಲಿ ಅದರ ಮೌಲ್ಯಕ್ಕಿಂತ ಹಲವಾರು ಪಟ್ಟು ಹೆಚ್ಚು ಬೆಲೆಯಲ್ಲಿ ಮಾರಾಟವಾಗುತ್ತಿದೆ.

ಬುಡಕಟ್ಟು ಆರ್ಥಿಕತೆಯನ್ನು ಮುನ್ನಡೆಸುತ್ತಿರುವ ಮಹಿಳೆಯರು

ಈ ಕಥೆಯಲ್ಲಿ ಅತ್ಯಂತ ಪರಿವರ್ತನಾತ್ಮಕ ಎಳೆ ಲಿಂಗ. ಮಹಿಳೆಯರು ಕೇವಲ ಫಲಾನುಭವಿಗಳಲ್ಲ – ಅವರು ಉತ್ಪಾದಕರು, ನಾಯಕಿಯರು ಮತ್ತು ಗುಣಮಟ್ಟದ ಪಾಲಕರು ಹಾಗೂ ಬದಲಾವಣೆಗೆ ಚಾಲನೆ ನೀಡುತ್ತಾರೆ. ಮಹಿಳಾ ನೇತೃತ್ವದ ಸಹಕಾರಿ ಸಂಸ್ಥೆಗಳು ಆರ್ಥಿಕ ಸಬಲೀಕರಣದ ಕೇಂದ್ರಗಳಾಗಿವೆ, ಸಾಮೂಹಿಕ ಉಳಿತಾಯ, ಸೂಕ್ಷ್ಮ ಸಾಲ ಮತ್ತು ಕಚ್ಚಾ ವಸ್ತುಗಳಲ್ಲಿ ಹಂಚಿಕೆಯ ಹೂಡಿಕೆಯನ್ನು ಸಕ್ರಿಯಗೊಳಿಸುತ್ತವೆ.

ಅನೇಕರಿಗೆ, ಟಿಆರ್‌ಐಎಫ್‌ಇಡಿ ತಮ್ಮ ಮೊದಲ ಔಪಚಾರಿಕ ಆರ್ಥಿಕ ಗುರುತನ್ನು ಒದಗಿಸಿದೆ. ಹಿಂದೆ ಗುರುತಿಸಲಾಗದ ಜೀವನಾಧಾರ ಕೆಲಸವನ್ನು ದಾಖಲಿತ ಕಾರ್ಮಿಕರಾಗಿ ಪರಿವರ್ತಿಸಿದೆ. ಭಾರತ್ ಟ್ರೈಬ್ಸ್ ಫೆಸ್ಟ್ 2026ರಲ್ಲಿ, ಈ ರೂಪಾಂತರಗಳು ಅಳೆಯಬಹುದಾದ ಫಲಿತಾಂಶಗಳಲ್ಲಿ ಗೋಚರಿಸಿತಲ್ಲದೆ, ಮಹಿಳೆಯರ ಜೀವಂತ ವಾಸ್ತವಗಳು ಪ್ರತಿಫಲಿಸಿದವು, ಅವರ ಕೌಶಲ್ಯ ಮತ್ತು ಅನುಭವಗಳಿಗೆ ಬಲವಾದ ಅವಕಾಶವನ್ನು ನೀಡುತ್ತದೆ.

ಬದಲಾವಣೆ; ನಾಳೆಗೆ ಸಂಪ್ರದಾಯ

ಮಿಜೋರಾಂನ ಲಾಂಗ್ಟ್ಲೈ ಜಿಲ್ಲೆಯ ಕಮಲನಗರದ ಚಕ್ಮಾ ಬುಡಕಟ್ಟಿನ ಯುವ ಉದ್ಯಮಿ 24 ವರ್ಷದ ಶ್ರೀಮತಿ ದೇಬೋಂಗ್ಮಿ ಚಕ್ಮಾ, ಸಂಪ್ರದಾಯವನ್ನು ಹಿಂದೆ ಬಿಡದೆ ಜಾಗತಿಕ ಮಾರುಕಟ್ಟೆಗೆ ಕೊಂಡೊಯ್ಯುವ ಬದಲಾವಣೆಯ ಪ್ರಬಲ ಕಥೆಯನ್ನು ಸದ್ದಿಲ್ಲದೆ ಬರೆಯುತ್ತಿದ್ದಾರೆ. ಚಕ್ಮಾ ಸಾಂಸ್ಕೃತಿಕ ಪರಂಪರೆಯಲ್ಲಿ ಆಳವಾಗಿ ಬೇರೂರಿರುವ ಅವರು, ಸ್ಥಳೀಯ ಜ್ಞಾನ ವ್ಯವಸ್ಥೆಗಳನ್ನು ಘನತೆ, ಗುರುತು ಮತ್ತು ಆರ್ಥಿಕ ಸಬಲೀಕರಣದ ಮಾರ್ಗಗಳಾಗಿ ಮರುಕಲ್ಪಿಸಿಕೊಳ್ಳುತ್ತಿದ್ದಾರೆ.

ಬೋಧಿಬ್ಲೂಮ್ ಸೊಸೈಟಿಯ ಸಂಸ್ಥಾಪಕಿಯಾಗಿ, ಶ್ರೀಮತಿ ದೇಬೋಂಗ್ಮಿ 500ಕ್ಕೂ ಹೆಚ್ಚು ಸದಸ್ಯರನ್ನು ಹೊಂದಿರುವ ಒಂದು ಉತ್ಸಾಹಭರಿತ ಸಾಮೂಹಿಕ ನಾಯಕತ್ವವನ್ನು ವಹಿಸಿದ್ದಾರೆ. ಮಹಿಳೆಯರು ಅದರಲ್ಲೂ ವಿಶೇಷವಾಗಿ ಸಾಮಾಜಿಕ ಮತ್ತು ಆರ್ಥಿಕ ದುರ್ಬಲತೆಗಳನ್ನು ಎದುರಿಸುತ್ತಿರುವ ಮಹಿಳೆಯರನ್ನು ಸಬಲೀಕರಣಗೊಳಿಸುವತ್ತ ಬಲವಾದ ಮತ್ತು ಪ್ರಜ್ಞಾಪೂರ್ವಕ ಒತ್ತು ನೀಡುತ್ತಾರೆ. ಅವರ ಉಪಕ್ರಮವು ಒಂದೇ ಕರಕುಶಲತೆಯನ್ನು ಮೀರಿ; ವೈವಿಧ್ಯಮಯ, ಸಮುದಾಯ ಚಾಲಿತ ಜೀವನೋಪಾಯ ಸೃಷ್ಟಿ ಮಾದರಿಯನ್ನು ಅಳವಡಿಸಿಕೊಳ್ಳುತ್ತದೆ. ಕೈಯಿಂದ ನೇಯ್ದ ಜವಳಿ ಮತ್ತು ಸಾಂಪ್ರದಾಯಿಕ ಆಹಾರ ಪದ್ಧತಿಗಳಿಂದ ಹಿಡಿದು ಜುಮ್ (ಹಂತ ಹಂತದ) ಕೃಷಿ ಮತ್ತು ಬಿದಿರು ಆಧರಿತ ಉತ್ಪನ್ನಗಳವರೆಗೆ, ಅವರ ಕೆಲಸವು ಪರಿಸರ ವಿಜ್ಞಾನ, ಸಂಸ್ಕೃತಿ ಮತ್ತು ಉದ್ಯಮವನ್ನು ಮನಬಂದಂತೆ ಸಂಯೋಜಿಸುತ್ತದೆ.

ಯಾಂತ್ರೀಕೃತ ಮೂಲಸೌಕರ್ಯವಿರುವ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀಮತಿ ದೇಬಾಂಗ್ಮಿಯವರ ಪ್ರಯಾಣವು ಬುಡಕಟ್ಟು ಸಮುದಾಯಗಳ ಸ್ಥಿತಿಸ್ಥಾಪಕತ್ವ ಮತ್ತು ಜಾಣ್ಮೆ ಯನ್ನು ಎತ್ತಿ ತೋರಿಸುತ್ತದೆ. ಟಿಆರ್‌ಐಎಫ್‌ಇಡಿ ಸಹಯೋಗದ ಮೂಲಕ, ಅವರ ಉತ್ಪನ್ನಗಳು ಈಗ ಸ್ಥಳೀಯ

UASB LIBRARY

ಮಾರುಕಟ್ಟೆಗಳನ್ನು ಮೀರಿ ಗ್ರಾಹಕರನ್ನು ತಲುಪುತ್ತವೆ. ಸಾಂಪ್ರದಾಯಿಕ ಅಭ್ಯಾಸಗಳನ್ನು ಸುಸ್ಥಿರ ಆದಾಯವಾಗಿ ಪರಿವರ್ತಿಸುತ್ತವೆ ಮತ್ತು ಸಾಂಸ್ಕೃತಿಕ ಆರ್ಥಿಕ ಹಿತವನ್ನು ಕಾಪಾಡುತ್ತವೆ. ಜಾಗತಿಕ ಗ್ರಾಹಕರು ಕರಕುಶಲ, ಪರಿಸರ ಸ್ನೇಹಿ ಸರಕುಗಳತ್ತ ಆಕರ್ಷಿತರಾಗಿರುವುದರಿಂದ, ಅವರ ಕೆಲಸವು ಸುಸ್ಥಿರತೆ ಮತ್ತು ಪರಂಪರೆಯ ಸಂರಕ್ಷಣೆ ಎನಿಸಿದೆ.

ಕೈಮಗ್ಗ ಪರಂಪರೆ

ಜಾರ್ಖಂಡ್‌ನ ಕಜ್ರಿ ಗ್ರಾಮದ ಸಂತಾಲ್ ಕುಶಲಕರ್ಮಿ ಶ್ರೀಮತಿ ಊರ್ಮಿಳಾ ಸೋನ್ವರ್, 23ನೇ ವಯಸ್ಸಿನಲ್ಲಿ, ತಮ್ಮ ಸಾಂಸ್ಕೃತಿಕ ಮತ್ತು ಪರಿಸರದಿಂದ ಪ್ರೇರಿತರಾಗಿ ಯುವ ವಿನ್ಯಾಸಕಿಯಾಗಿ ಹೊರ ಹೊಮ್ಮುತ್ತಿದ್ದಾರೆ. ಅವರ ಕೆಲಸವು 'ಬರಾ ಖಾಂಡ್' ಎಂಬ ಪವಿತ್ರ ಸ್ಥಳೀಯ ಆಚರಣೆ ಮತ್ತು ಅವರ ಹಳ್ಳಿಯ ಪರ್ವತ ಭೂದೃಶ್ಯವನ್ನು ಆಧರಿಸಿದೆ, ಈ ಅಂಶಗಳನ್ನು ಕೈಯಿಂದ ನೇಯ್ದ ಸೀರೆಗಳಾಗಿ ಪರಿವರ್ತಿಸುತ್ತಾರೆ.

